ಸಂಪುಟ: 04 ಸಂಚಿಕೆ: 173 ಪುಟಗಳು: 08 ಬುಧವಾರ 04 ಸೆಪ್ಟೆಂಬರ್ 2024 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**
ಪರಹಿತಕ್ಕಾಗಿ ನಿಮ್ಮ ಜೀವನವನ್ನು ಮುಡಿಪಾಗಿಡಿ, ನೀವು ತ್ಯಾಗಜೀವನವನ್ನು ಆರಿಸಿಕೊಳ್ಳುವುದಾದರೆ ಸೌಂದರ್ಯ, ಹಣ, ಅಧಿಕಾರಗಳ ಕಡೆ ತಿರುಗಿಯೂ ನೋಡಬೇಡಿ...

# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಸಿದ್ದಸಿರಿ ಸೌಹಾರ್ದ ಸಹಕಾರ ನಿಯಮಿತ ವಿರುದ್ಧದ ಕೇಸ್ ರದ್ದು

• ಉದಯವಾಹಿನಿ, ಬೆಂಗಳೂರು

ಸಿದ್ದಸಿರಿ ಸೌಹಾರ್ದ ಸಹಕಾರ ನಿಯಮಿತ ವಿರುದ್ಧ ದಾಖಲಾಗಿದ್ದ ಕೇಸ್‌ನ್ನು ಸುದಿರ್ಘ ವಿಚಾರಣೆ ನಡೆಸಿ ಹೈಕೋರ್ಟ್ ರದ್ದುಗೊಳಿಸಿದೆ. ಈ ಮೂಲಕ ಸಂಸ್ಥೆಯ ಅಧ್ಯಕ್ಷ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ರಮಣಗೌಡ ಪಾಟೀಲ್, ಶಿವಕುಮಾರ್ ಪಾಟೀಲ್‌ಗೂ ಬಿಗ್ ರಿಲೀಫ್ ಸಿಕ್ಕಂತಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಈ ಹಿಂದೆ ಚಿಂಚೋಳಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ದೂರು ದಾಖಲಿಸಲಾಗಿತ್ತು. ವಾಯು, ಜಲ ಕಾಯ್ದೆ ಉಲ್ಲಂಘನೆ ಆರೋಪ ಹಿನ್ನಲೆ ಚಿಂಚೋಳಿ ತಾಲ್ಲೂಕಿನ ಚಿಮ್ಮಾಯಿದಲಾಯಿ ಗ್ರಾಮದ ಬಳಿ ಇರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಒಡೆತನದ ಸಿದ್ದ ಶ್ರೀ ಸಕ್ಕರೆ ಕಾರ್ಖಾನೆಗೆ ಬೀಗ ಹಾಕಲು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ಹೊರಡಿಸಿತ್ತು. ಈ ಆದೇಶ ಪ್ರಶ್ನಿಸಿ ಬಿಜೆಪಿ ಶಾಸಕ ಯತ್ನಾಳ್ ಹೈಕೋರ್ಟ್ ಮೆಟ್ಟಿಲೇರಿದ್ದರು.

## ಒಡಂಬಡಿಕೆಗೆ ರಾಜ್ಯ ಸರ್ಕಾರದ ಜತೆ ಮೈಕ್ರೋಸಾಫ್ಟ್ ಒಲವು

• ಉದಯವಾಹಿನಿ, ಬೆಂಗಳೂರು

ಜನರೇಟೀವ್ ಎಐ ಮತ್ತು ಮುಂಚೂಣಿಗೆ ಬರುತ್ತಿರುವ ಆಧುನಿಕ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಕೌಶಲಗಳನ್ನು ಕಲಿಸಲು ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಮೈಕ್ರೋಸಾಫ್ಟ್ ಕಂಪನಿಯು ಉತ್ಸುಕವಾಗಿದೆ ಎಂದು ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ. ಮಂಗಳವಾರ ಇಲ್ಲಿ ತಮ್ಮನ್ನು ಭೇಟಿಯಾದ ಮೈಕ್ರೋಸಾಫ್ಟ್ ಕಂಪನಿಯ ಭಾರತ ಮತ್ತು ದಕ್ಷಿಣ ಏಷ್ಯಾದ ಅಧ್ಯಕ್ಷ ಪುನೀತ್ ಚಾಂದೋಕ್ ನೇತೃತ್ವದ ಉನ್ನತ ಮಟ್ಟದ ನಿಯೋಗದ ಜತೆ ಅವರು ವಿಚಾರ ವಿನಿಮಯ ನಡೆಸಿದರು. ಕರ್ನಾಟಕವನ್ನು ಭಾರತದ ಎಐ ತಂತ್ರಜ್ಞಾನದ ಪ್ರಮುಖ ತಾಣವನ್ನಾಗಿ ಮಾಡಲು ಮೈಕ್ರೋಸಾಫ್ಟ್ ಬಯಸಿದೆ. ಹೂಡಿಕೆದಾರರಿಗೆ ನೆರವು ನೀಡುವಂತಹ ಪ್ರಕ್ರಿಯೆಗಳಿಗೆ ಎಐ ತಂತ್ರಜ್ಞಾನವನ್ನು ಹೇಗೆ ಅನ್ವಯಿಸಬಹುದು ಮತ್ತು ಇದಕ್ಕೆ ಪರಿಣತರನ್ನು ಹೇಗೆ ತೊಡಗಿಸಬಹುದು ಎಂದು ಕಂಪನಿಯು ಚಿಂತಿಸುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ಹಾಲಿನ ಖರೀದಿ ದರ ಕಡಿತಕ್ಕೆ ಸಚಿವ ಕುಮಾರಸ್ವಾಮಿ ಕಿಡಿ

• ಉದಯವಾಹಿನಿ, ಬೆಂಗಳೂರು

ಹಾಲಿನ ಖರೀದಿ ದರದಲ್ಲಿ 1.50 ಕಡಿತ ಮಾಡಿರುವ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕಿಡಿಕಾರಿದ್ದಾರೆ.ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಕೇಂದ್ರ ಸಚಿವರು; ಕೂಡಲೇ ಈ ಬಗ್ಗೆ ಮುಖ್ಯಮಂತ್ರಿಗಳು ಕ್ರಮ ವಹಿಸಿ ಹಾಲು ಖರೀದಿ ದರಕ್ಕೆ ತಡೆ ಒಡ್ಡಬೇಕು ಎಂದು ಆಗ್ರಹಿಸಿದ್ದಾರೆ. ಅಧಿಕಾರ ದರ್ಪದ ಅಮಲಿನಿಂದ ಕೊಬ್ಬಿರುವ ರಾಜ್ಯ ಕಾಂಗ್ರೇಸ್ ಸರಕಾರ ಅನ್ನದಾತನ ಮೇಲೆ ಬರೆಯ ಬರೆ ಎಳೆಯುತ್ತಿದೆ. ರೈತನ ಜೀವನಾಧಾರವಾಗಿರುವ ಹಾಲಿನ ಮೇಲೆ ಕಾಂಗ್ರೇಸ್ ಆಡಳಿತದ ಕಾಕದೃಷ್ಟಿ ಬಿದ್ದಿದೆ. ಪರಿಣಾಮ; ಹಾಲಿನ ಖರೀದಿ ದರಕ್ಕೆ ಕತ್ತರಿ ಪ್ರಯೋಗವಾಗಿದೆ ಎಂದು ಸಚಿವರು ಕಟುವಾಗಿ ಟೀಕಿಸಿದ್ದಾರೆ. ಕೆಲ ಹಾಲು ಒಕ್ಕೂಟಗಳು ಏಕಪಕ್ಷೀಯವಾಗಿ ಹಾಲಿನ ಖರೀದಿ ದರದಲ್ಲಿ 1.50 ಕಡಿತ ಮಾಡಿವೆ. ಹೊಸ ಖರೀದಿ ದರ 30.50 ರಿಂದ 29ಕ್ಕೆ ಕುಸಿದಿದೆ. ಕಾಮಧೇನುವನ್ನೇ ನಂಬಿದ್ದ ರೈತನ ಕರುಳಿಗೆ ಕೊಳ್ಳಿ ಬಿದ್ದಿದೆ. ನಮ್ಮದು ರೈತಪರ ಸರಕಾರ ಎನ್ನುವ ಮುಖ್ಯಮಂತ್ರಿಗಳು ಇತ್ತ ಗಮನ ಹರಿಸಬೇಕು. ಅವರಿಗೆ ಅಷ್ಟು ಸಮಯ ಇದೆ ಎಂದು ನಾನಾದರೂ ಪರಿಭಾವಿಸುತ್ತೇನೆ ಎಂದು ಅವರು ಹೇಳಿದ್ದಾರೆ.

## 2 ಲಕ್ಷ ಲಂಚ ಪಡೆಯುವ ವೇಳೆ ಲೋಕಾಯುಕ್ತ ಬಲೆಗೆ ಬಿದ್ದ ಪಿಡಿಓ

• ಉದಯವಾಹಿನಿ, ಬೆಂಗಳೂರು


2 ಲಕ್ಷ ರೂಪಾಯಿ ಲಂಚ ಸ್ವೀಕರಿಸುತ್ತಿದ್ದ ಪಿಡಿಓ ರೇಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕುಂದಾಣಿ ಗ್ರಾಮದಲ್ಲಿ ನಡೆದಿದೆ. ಹೌದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕುಂದಾಣಿ ಗ್ರಾಮ ಪಂಚಾಯಿತಿ ಪಿಡಿಓ ಪದ್ಮನಾಭ ಇದೀಗ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಅಧಿಕಾರಿಗಳ ಬಳಗೆ ಬಿದ್ದಿದ್ದಾನೆ.ಗ್ರಾಮ ಪಂಚಾಯಿತಿ ಪಿಡಿಎ ಪದ್ಮನಾಭ ಲೇಔಟ್ ನಲ್ಲಿ ಕೇಬಲ್ ಅಳವಡಿಸಲು 5 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ. ಈಗಾಗಲೇ ಮುಂಗಡವಾಗಿ 3 ಲಕ್ಷ ರೂಪಾಯಿ ಲಂಚ ಪಡೆದಿದ್ದ 2 ಲಕ್ಷ ರೂಪಾಯಿ ಲಂಚ ಸ್ವೀಕರಿಸುವಾಗ ಪಿಡಿಓ ಪದ್ಮನಾಭ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾನೆ. ಸದ್ಯ ಪಿಡಿಓ ಪದ್ಮನಾಭನನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

# ಕೋವಿಡ್ ವರದಿ ನುಂಗಣ್ಣರ ಸರದಿ... ?



ಸಂಪುಟ ಸಭೆಯಲ್ಲಿ ವರದಿ ಮಂಡನೆ

ನುಂಗಣ್ಣರಿಗೆ ನಡುಕ ಶುರು




**ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ**

### ಚಾಮುಂಡೇಶ್ವರಿ ಪ್ರಾಧಿಕಾರ ಸಭೆ ಕಾನೂನಾತ್ಮಕವಾಗಿ ನಡೆಯುತ್ತಿದೆ

• ಉದಯವಾಹಿನಿ, ಮೈಸೂರು

ಕೋವಿಡ್ ಕುರಿತಂತೆ ವಿಚಾರಣೆ ನಡೆಸಿ ನ್ಯಾಯಮೂರ್ತಿ ಮೈಕಲ್ ಕುನ್ಹಾ ಅವರು ನೀಡಿರುವ ಮಧ್ಯಂತರ ವರದಿ ಇದೇ ಗುರುವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಮಂಡಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ತಮ್ಮ ನಿವಾಸದಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ನಾನಿನ್ನೂ ವರದಿಯನ್ನು ನೋಡಿಲ್ಲ. ಗುರುವಾರದ ಸಂಪುಟ ಸಭೆಯಲ್ಲಿ ಮಂಡಿಸಿ ಚರ್ಚಿಸುತ್ತೇವೆ. ಏನು ಶಿಫಾರಸ್ಸು ಮಾಡಿದ್ದಾರೆ ಎಂದು ನೋಡಿ ನಂತರ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದರು. ವರದಿಯ ಬಗ್ಗೆ ಮಾಜಿ ಸಚಿವ ಹಾಗೂ ಹಾಲಿ ಸಂಸದ ಡಾ.ಕೆ.ಸುಧಾಕರ್ ಪ್ರತಿಕ್ರಿಯಿಸಿರುವುದಕ್ಕೆ ತಿರುಗೇಟು ನೀಡಿದ ಮುಖ್ಯಮಂತ್ರಿಯವರು ಕುಂಬಳಕಾಯಿ ಕಳ್ಳ ಎಂದರೆ ಏಕೆ ಹೆಗಲು ಮುಟ್ಟಿ ನೋಡಿಕೊಳ್ಳಬೇಕು. ನಾನೇ ಇನ್ನೂ ವರದಿ ನೋಡಿಲ್ಲ ಎಂದು ತಿಳಿಸಿದರು.



**ಸುಧಾಕರ್ ಚಡಪಡಿಸುತ್ತಿರುವುದೇಕೆ...**, ಸುಧಾಕರ್ ವರದಿ ನೋಡಿದ್ದಾರೆಯೇ..., ತಪ್ಪು ಮಾಡಿರುವ ಮನೋಭಾವದಿಂದಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಸುಳ್ಳು ವರದಿ ಪಡೆದಿದ್ದೇವೆ ಎಂದು ಅವರಿಗೆ ಹೇಗೆ ಗೊತ್ತಾಗಲು ಸಾಧ್ಯ, ಸುಧಾಕರ್ ಮನಸ್ಥಿತಿ ಅರ್ಥವಾಗುತ್ತಿದೆ. ತಪ್ಪು ಮಾಡಿರುವ ಪಾಪಪ್ರಜ್ಞೆ ಕಾಡುತ್ತಿರಬಹುದು. ವರದಿ ಬಹಿರಂಗಗೊಂಡು ಅದರಲ್ಲಿನ ಮಾಹಿತಿಗಳು ತಿಳಿಯದ ಹೊರತು ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಹೇಳಿದರು. ಈ ಹಿಂದೆ ನಾವು ಸಾಕಷ್ಟು ಆರೋಪಗಳನ್ನು ಮಾಡಿದ್ದೇವೆ. ಆದರೆ ವಿಚಾರಣಾ ಆಯೋಗದ ವರದಿ ಬಂದಿರುವುದರಿಂದ ಖಚಿತ ಮಾಹಿತಿ ಇಲ್ಲದೆ ಪ್ರತಿಕ್ರಿಯಿಸುವುದಿಲ್ಲ. ಗುರುವಾರ ಸಚಿವ ಸಂಪುಟದ ಬಳಿಕ ಸೂಕ್ತ ಮಾಹಿತಿ ನೀಡಲಾಗುತ್ತದೆ ಎಂದರು. ಮುಡಾ ಪ್ರಕರಣದಲ್ಲಿ ನಿವೇಶನ ಹಂಚಿಕೆಯ ಅವ್ಯವಹಾರಗಳ ಕುರಿತು ವಿಚಾರಣೆಗೆ ನ್ಯಾಯಮೂರ್ತಿಯವರ ಆಯೋಗ ರಚನೆ ಮಾಡಲಾಗಿದೆ. ಅದರ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ಈ ಹಿಂದೆ ಮುಡಾ ಆಯುಕ್ತರಾಗಿದ್ದ ದಿನೇಶ್ ಕುಮಾರ್ ಅವರನ್ನು ನಾನು ಅಮಾನತು ಮಾಡಿಲ್ಲ. ನಗರಾಭಿವೃದ್ಧಿ ಇಲಾಖೆ ಕ್ರಮ ಕೈಗೊಂಡಿರಬಹುದು. ಮತ್ತೊಬ್ಬ ಆಯುಕ್ತರಾಗಿದ್ದ ನಟೇಶ್ ಅವರ ಮೇಲೆ ಯಾವ ಆರೋಪ ಇದೆ ಗೊತ್ತಿಲ್ಲ. ವಿಚಾರಣಾ ಆಯೋಗ ವರದಿ ನೀಡಿದ ಬಳಿಕ ಯಾರೇ ಇದ್ದರೂ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ದಿನೇಶ್ ಅವರ ಅಮಾನತಿನ ಬಗ್ಗೆ ಪದೇಪದೇ ಪ್ರಶ್ನೆಗಳು ಎದುರಾದಾಗ ನಾನು ಅಮಾನತು ಆದೇಶವನ್ನು ನೋಡಿಲ್ಲ ಎಂದು ಸಿಟ್ಟಿನಿಂದ ಪ್ರತಿಕ್ರಿಯಿಸಿದರು. ಚಾಮುಂಡಿ ಕ್ಷೇತ್ರದ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿತ್ತು. ಅದಕ್ಕೆ ರಾಜ ಮನೆತನದ ಪ್ರಮೋದಾದೇವಿಯವರು ತಡೆಯಾಜ್ಞೆ ತೆಗೆದುಕೊಂಡಿದ್ದರು. ಅದು ತೆರವಾಗಿದೆ. ಹೀಗಾಗಿ ಪ್ರಾಧಿಕಾರ ರಚನೆ ಬಳಿಕ ಮೊದಲ ಸಭೆಯನ್ನು ಬೆಟ್ಟದ ಮೇಲೆ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಹಿಂದೆಯೂ ದೇವಸ್ಥಾನದ ಆಡಳಿತ ಮಂಡಳಿ ಅಸ್ತಿತ್ವದಲ್ಲಿತ್ತು. ಅದಕ್ಕೆ ಸರ್ಕಾರವೇ ಸದಸ್ಯರು ಮತ್ತು ಅಧ್ಯಕ್ಷರನ್ನು ನೇಮಿಸುತ್ತಿತ್ತು. ದೇವಸ್ಥಾನ ಸರ್ಕಾರದ ಅಧೀನದಲ್ಲೇ ಇತ್ತು ಎಂದು ಹೇಳಿದರು. ನ್ಯಾಯಾಲಯದ ತೀರ್ಮಾನದ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆ. ಸಂಸದರು ಹೇಳಿದಂತೆ ಕೇಳಲಾಗುವುದಿಲ್ಲ. ನಾನು ನ್ಯಾಯಾಲಯದ ನಿರ್ದೇಶನದ ಪ್ರಕಾರ ನಡೆದುಕೊಳ್ಳುತ್ತಿದ್ದೇನೆ ಎಂದರು.ಅಂಗನವಾಡಿ ಕಾರ್ಯಕರ್ತರಿಗೆ ಸಕಾಲಕ್ಕೆ ವೇತನ ಪಾವತಿಸಲಾಗಿದೆ. ಎಲ್ಲಿಯಾದರೂ ಹಣ ಬಿಡುಗಡೆಯಾಗದೇ ಬಾಕಿ ಉಳಿದಿದ್ದರೆ ಅದನ್ನು ಪರಿಶೀಲಿಸುತ್ತೇವೆ ಎಂದು ಹೇಳಿದರು.

ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದ ಮೇಲೆ ದೇವರ ದರ್ಶನ ಪಡೆಯುತ್ತೇನೆ. ನಾನು ಯಾವುದೇ ಆತಂಕದಲ್ಲಿಲ್ಲ. ವಿರೋಧ ಪಕ್ಷದಲ್ಲಿದ್ದವರು ಸುಳ್ಳು ಹೇಳಿ ದ್ದಾರೆ. ಅದು ರುಜುವಾತಾಗದೇ ಇದ್ದರೆ ಕಷ್ಟ ಎಂಬ ಆತಂಕ ಅವರಿಗಿದೆ. ನಾನು ಯಾವತ್ತೂ ಸುಳ್ಳು ಹೇಳಿಲ್ಲ, ತಪ್ಪು ಮಾಡಿಲ್ಲ ನಾನೇಕೆ ಆತಂಕ ಪಡಲಿ ಎಂದರು. ಸಿದ್ದರಾಮಯ್ಯನವರು ಒಪ್ಪಿಗೆ ಕೊಟ್ಟರೆ ನಾನು ಮುಖ್ಯಮಂತ್ರಿಯಾಗಲು ಸಿದ್ಧ ಎಂದು ಹಿರಿಯ ಕಾಂಗ್ರೇಸಿಗ ಆರ್.ವಿ.ದೇಶಪಾಂಡೆ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರು, ಅವಕಾಶ ನೀಡುವುದು ಶಾಸಕರು ಹಾಗೂ ಹೈಕಮಾಂಡ್. ಅವರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೋ ಅದಕ್ಕೆ ತಾವು ಬದ್ಧ ಎಂದು ಹೇಳಿದರು.

**ಸಂಪುಟ ಸಭೆಯಲ್ಲಿ ಮಂಡನೆ**

**ಕೊರೊನಾ ಹಗರಣದ ಮಧ್ಯಂತರ ವರದಿಯನ್ನು ಮುಂದಿನ ಸಚಿವ ಸಂಪುಟದ ಮುಂದೆ ಮಂಡಿಸುತ್ತೇನೆ. ಸಂಪುಟದಲ್ಲಿ ಚರ್ಚೆ ಮಾಡಿ ಮುಂದಿನ ತೀರ್ಮಾನ ಹೇಳುತ್ತೇನೆ. ವರದಿಯಲ್ಲಿ ಏನಿದೆ ಎಂಬುದನ್ನು ನಾನು ನೋಡಿಲ್ಲ. ಎಷ್ಟು ಪ್ರಮಾಣದ ಭ್ರಷ್ಟಾಚಾರ ಆಗಿದೆ ಎಂಬುದು ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೆ ಬರದೆ ಸುಧಾಕರ್‌ಗೆ ಮಾಹಿತಿ ಕೊಟ್ಟವರು ಯಾರು ಕುಂಬಳಕಾಯಿ ಕಳ್ಳ ಅಂದ್ರೆ ಏಕೆ ಹೆಗಲು ಮುಟ್ಟಿಕೊಳ್ಳಬೇಕು.. ಸುಧಾಕರ್ ಗೆ ತಪ್ಪು ಮಾಡಿರುವುದು ಮಾನಸಿಕವಾಗಿ ಗೊತ್ತಿದೆ. ಹೀಗಾಗಿ ಅವನು ಆ ರೀತಿ ಮಾತನಾಡುತ್ತಿದ್ದಾನೆ ಎಂದರು.**

**1** ಕೋವಿಡ್ ಭ್ರಷ್ಟಾಚಾರ ಕುರಿತ ವರದಿ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಕ್ರಮ

**2** ಮುಂದಿನ ಕ್ರಮ ತೆಗೆದುಕೊಳ್ಳುವ ಸಾಧ್ಯತೆ

**3** ತಪ್ಪು ಮಾಡಿದವರ ಮೇಲೆ ಕ್ರಮ

**ವೇತನ ಬಾಕಿ ಇಲ್ಲ**

ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ಆಗದ ವಿಚಾರವಾಗಿ ಮಾತನಾಡಿದ ಅವರು, ಈ ಬಗ್ಗೆ ನನ್ನ ಗಮನಕ್ಕೆ



ಬಂದಿಲ್ಲ, ಮಾಹಿತಿ ಪಡೆಯುತ್ತೇನೆ. ಆದರೆ, ನಾವು ಯಾವುದೇ ವೇತನ ಬಾಕಿ ಉಳಿಸಿಕೊಂಡಿಲ್ಲ. ಮಾಹಿತಿ ಪಡೆದುಕೊಳ್ಳುತ್ತೇನೆ ಎಂದರು. ಇನ್ನು ಸಿದ್ದರಾಮಯ್ಯನವರು ಒಪ್ಪಿಗೆ ಕೊಟ್ಟರೆ ಮುಖ್ಯಮಂತ್ರಿಯಾಗುತ್ತೇನೆ ಎಂಬ ಹಿರಿಯ ನಾಯಕ ಆರ್ ವಿ ದೇಶಪಾಂಡೆ ಹೇಳಿಕೆಗೆ ಪ್ರತಿಕ್ರಿಯಿಸಿ, ಸಿಎಂ ಆಗಲು ಪರ್ಮಿಷನ್ ಕೊಡೋದಿಕ್ಕೆ ನಾನ್ಯಾರು, ಅದು ಪಕ್ಷದ ಶಾಸಕರು ಮತ್ತು ಹೈಕಮಾಂಡ್ ಗೆ ಬಿಟ್ಟ ತೀರ್ಮಾನ ಎಂದು ನಗುತ್ತಾ ಹೇಳಿದರು. ಇದಕ್ಕೂ ಮುನ್ನ ಚಾಮುಂಡೇಶ್ವರಿ ಬೆಟ್ಟಕ್ಕೆ ತೆರಳಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮೈಸೂರಿನ ಅರಮನೆ ಮೈದಾನದಲ್ಲಿ ಕನ್ನಡ ಸುವರ್ಣ ಸಂಭ್ರಮ ರಥ ಕ್ಕೆ ಚಾಲನೆ ನೀಡಿ, ಅಭಿಯಾನ ಯಶಸ್ವಿಯಾಗಲೆಂದು ಶುಭ ಹಾರೈಸಿದರು. ರಾಜ್ಯವು ಕರ್ನಾಟಕವೆಂದು ನಾಮಕರಣಗೊಂಡು ಐದು ದಶಕಗಳು ಪೂರೈಸಿದ ಹಿನ್ನೆಲೆಯಲ್ಲಿ ಕನ್ನಡ ಸುವರ್ಣ ಸಂಭ್ರಮ ರಥಕ್ಕೆ ಚಾಲನೆ ನೀಡಲಾಗಿದೆ.

# ಡೆಂಗ್ಯೂ ನಿಯಂತ್ರಣ ನಿಮಯ ಪಾಲಿಸದಿದ್ದರೆ ರೂ.2000ವರೆಗೆ ದಂಡ

• ಉದಯವಾಹಿನಿ, ಬೆಂಗಳೂರು

ಡೆಂಗ್ಯೂ ಜ್ವರವನ್ನು ಸಾಂಕ್ರಾಮಿಕ ರೋಗ ಎಂದು ಘೋಷಿಸಿರುವ ರಾಜ್ಯ ಸರ್ಕಾರ, ಡೆಂಗ್ಯೂ ನಿಯಂತ್ರಣ ವಿಚಾರವಾಗಿ ಸಾರ್ವಜನಿಕರನ್ನ ಎಚ್ಚರಗೊಳಿಸುವ ಪ್ರಯತ್ನಕ್ಕೆ ಕೈಹಾಕಿದೆ. ಈ ಕುರಿತಂತೆ ಬೆಂಗಳೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಡೆಂಗ್ಯೂ ಸಾಂಕ್ರಾಮಿಕ ರೋಗವನ್ನಾಗಿ ಘೋಷಿಸುವುದರ ಜೊತೆಗೆ ಡೆಂಗ್ಯೂ ನಿಯಂತ್ರಣ ಮಾರ್ಗಸೂಚಿಗಳನ್ನ ಪಾಲಿಸದವರಿಗೆ ದಂಡ ಕೂಡ ಹಾಕಲಾಗುವುದು ಎಂದರು. ಇದರಿಂದ ಆರೋಗ್ಯ ಇಲಾಖೆಗೆ ಡೆಂಗ್ಯೂ ಸಳ್ಳೆ ಉತ್ಪತ್ತಿ ತಾಣಗಳನ್ನ ಹತೋಟಿಗೆ ತರುವ ನಿಟ್ಟಿನಲ್ಲಿ ಕಾನೂನಿನ ಅಸ್ತ್ರ ಬಳಸಬಹುದಾಗಿದೆ. ಈ ಹಿಂದೆ ಬೆಂಗಳೂರು ಮತ್ತು ಮಂಗಳೂರು ಬಿಟ್ಟರೆ ರಾಜ್ಯದ ಬೇರೆ ಪ್ರದೇಶಗಳಲ್ಲಿ ಕಾನೂನಿನ ರೀತಿ ಕ್ರಮ ಕೈಗೊಳ್ಳಲು ಅವಕಾಶ ಇರಲಿಲ್ಲ ಎಂದರು.

ಡೆಂಗ್ಯೂ ಮಾರ್ಗಸೂಚಿಗಳನ್ನ ಪಾಲಿಸದಿದ್ದರೆ, ಗ್ರಾಮೀಣ ಪ್ರದೇಶದ ಮನೆಗಳಿಗೆ 200 ರೂ. ಹಾಗೂ ನಗರ ಪ್ರದೇಶಗಳಲ್ಲಿ 400 ರೂಪಾಯಿ ದಂಡ ವಿಧಿಸಲಾಗುವುದು. ಅಲ್ಲದೇ ಶಾಲಾ ಕಾಲೇಜು, ಹೊಟೇಲ್, ಲಾಡ್ಜ್, ರೆಸಾರ್ಟ್ ಗಳು ಸೇರಿದಂತೆ ವಾಣಿಜ್ಯ ಸಂಘ, ಸಂಸ್ಥೆಗಳಿಗೆ ಗ್ರಾಮೀಣ ಪ್ರದೇಶಗಳಲ್ಲಿ 500 ಹಾಗೂ ನಗರ ಪ್ರದೇಶಗಳಲ್ಲಿ 1000 ರೂ. ದಂಡ ನಿಗದಿಪಡಿಸಲಾಗಿದ್ದು, ಕಟ್ಟಡ ನಿರ್ಮಾಣ, ಹೊರಾಂಗಣ ಸ್ಥಳಗಳಲ್ಲಿ ಗ್ರಾಮೀಣ ಪ್ರದೇಶಗಳಿಗೆ 1000 ರೂ. ಹಾಗೂ ನಗರ ಪ್ರದೇಶಗಳಲ್ಲಿ 2000 ರೂ. ದಂಡ ವಿಧಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಈಡಿಸ್ ಸೊಳ್ಳೆಗಳ ಲಾರ್ವಾ ಉತ್ಪತ್ತಿಗೆ ಅನುಕೂಲವಾಗುವಂತೆ ನೀರು ಸಂಗ್ರಹಣೆಯಾಗಬಾರದು. ಈ ನಿಟ್ಟಿನಲ್ಲಿ ಎಲ್ಲಾರು ಎಚ್ಚರಿಕೆ ವಹಿಸುವುದು ಮುಖ್ಯ. ದಂಡ ವಿಧಿಸುವುದಕ್ಕಿಂತ ಜನರು ಡೆಂಗ್ಯೂ ವಿಚಾರದಲ್ಲಿ ಜವಾಬ್ದಾರಿಯುತವಾಗಿ ಮುನ್ನೆಚ್ಚರಿಕೆ ವಹಿಸಲಿ ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಈ ಗೆಜೆಟ್ ನೋಟಿಫಿಕೇಶನ್ ಹೊರಡಿಸಿದೆ. ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನಿಯಮ ಜಾರಿಗೊಳಿಸುವ ಅಧಿಕಾರ ನೀಡಲಾಗಿದೆ ಎಂದು ಇದೇ ವೇಳೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



**ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಕೆ**

ಕೋವಿಡ್ ಅಕ್ರಮ ಕುರಿತಂತೆ ನಿವೃತ್ತ ನ್ಯಾಯಮೂರ್ತಿ ಕುನ್ಹಾ ಅವರು ವರದಿಯನ್ನ ಮುಖ್ಯಮಂತ್ರಿಗಳಿಗೆ ನೀಡಿದ್ದು, ವರದಿಯಲ್ಲಿರುವ ಅಂಶಗಳನ್ನ ಆಧರಿಸಿ ಮುಂದಿನ ಕ್ರಮ ಆಗಲಿದೆ. ವರದಿಯಲ್ಲಿ ಏನಿದೆ ಎಂಬುದು ನಮಗೆ ತಿಳಿದಿಲ್ಲ. ಆದರೆ ಸುಧಾಕರ್ ಅವರು ಮಾತ್ರ ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. ಬಹುಷಃ ಕೋವಿಡ್ ಸಂದರ್ಭದಲ್ಲಿ ಅವರು ಮಾಡಿರುವ ತಪ್ಪುಗಳ ಗಿಲ್ಟ್ ಸುಧಾಕರ್ ಅವರಿಗೆ ಕಾಡುತ್ತಿರಬಹುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಸಚಿವರು, ತಜ್ಞರ ಸಮಿತಿ ಕೋವಿಡ್ ಅಕ್ರಮದ ಬಗ್ಗೆ ವರದಿ ಸಲ್ಲಿಕೆ ಮಾಡಿದೆ. ವರದಿಯಲ್ಲಿ ಇಂಥವರ ಹೆಸರು ಇದೆ ಎಂದು ನಾವು ಹೇಳಿಲ್ಲ. ಸುಧಾಕರ್ ಅವರೇ ತಮ್ಮ ಬಗ್ಗೆ ತಾವು ಆರೋಪ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಬೀದಿಲಿ ನಿಂತಕೊಂಡು ಕೆಲಸ ಮಾಡಿದ್ದೇನೆ ಎಂದು ಸುಧಾಕರ್ ಹೇಳಿಕೊಳ್ಳುತ್ತಿದ್ದಾರೆ. ಅವರು ಎಲ್ಲಿ ನಿಂತು ಕೆಲಸ ಮಾಡಿದ್ದಾರೆ ನಾವು ನೋಡಿದ್ದೇವೆ. ಮಂತ್ರಿ ಮಾಡುವುದೇ ಕೆಲಸ ಮಾಡಲಿಕ್ಕೆ. ಹಾಗಿದ್ದಾಗ ಕೆಲಸ ಮಾಡುವುದು ಮಂತ್ರಿಗಳ ಕರ್ತವ್ಯ. ಅದನ್ನ ನಾವು ಹೇಳಿಕೊಳ್ಳುವುದಲ್ಲ. ಜನರು ನಮ್ಮ ಕೆಲಸದ ಬಗ್ಗೆ ಮಾತಾಡಬೇಕು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

# 267 ಅರಣ್ಯ ವೀಕ್ಷಕರಿಗೆ ನೇಮಕಾತಿ ಪತ್ರ ಹಸ್ತಾಂತರ: 50 ಅರಣ್ಯ ಸಿಬ್ಬಂದಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ

### ಆನೆ ಮತ್ತು ಮಾನವ ಸಂಘರ್ಷದಿಂದ ರಾಜ್ಯದಲ್ಲಿ ಪ್ರತಿವರ್ಷ 50 ಸಾವು ಸಂಭವಿಸುತ್ತಿದ್ದು, ಅಮೂಲ್ಯ ಜೀವ, ಬೆಳೆ ಉಳಿಸಲು ರೈಲ್ವೆ ಬ್ಯಾರಿಕೇಡ್ ಪರಿಹಾರ

• ಉದಯವಾಹಿನಿ, ಬೆಂಗಳೂರು

ಆನೆ ಮತ್ತು ಮಾನವ ಸಂಘರ್ಷದಿಂದ ರಾಜ್ಯದಲ್ಲಿ ಪ್ರತಿವರ್ಷ 50 ಸಾವು ಸಂಭವಿಸುತ್ತಿದ್ದು, ಅಮೂಲ್ಯ ಜೀವ, ಬೆಳೆ ಉಳಿಸಲು ರೈಲ್ವೆ ಬ್ಯಾರಿಕೇಡ್ ಪರಿಹಾರವಾಗಿದ್ದು, 324 ಕಿ.ಮೀ. ತಡೆಗೋಡೆ ನಿರ್ಮಾಣಕ್ಕೆ 2 ವರ್ಷದಲ್ಲಿ 500 ಕೋಟಿ ಹೆಚ್ಚಿನ ಅನುದಾನ ನೀಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ, ಮನವಿ ಮಾಡಿದ್ದಾರೆ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿಂದು 49 ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿಗೆ ಮುಖ್ಯಮಂತ್ರಿಗಳ ವಿಶಿಷ್ಟ ಸೇವಾ ಪದಕ ಪ್ರದಾನ ಹಾಗೂ 267 ಅರಣ್ಯ ವೀಕ್ಷಕರಿಗೆ ನೇಮಕಾತಿ ಪತ್ರ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ ಈವರೆಗೆ ಸುಮಾರು 333 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದ್ದು, 101 ಕಿ.ಮೀ. ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಒತ್ತುವರಿ ತೆರವಿನ ಬಗ್ಗೆ ಸ್ಪಷ್ಟನೆ ನೀಡಿದ ಈಶ್ವರ ಖಂಡ್ರೆ, 2015ರ ನಂತರದ ಒತ್ತುವರಿ ತೆರವು ಮಾಡಲಾಗುತ್ತಿದೆ. ಜೊತೆಗೆ 2015ರ ಸರ್ಕಾರದ ಆದೇಶ ಮತ್ತು ನಡವಳಿಯಂತೆ 3 ಎಕರೆಗಿಂತ ಮೇಲ್ಪಟ್ಟ ದೊಡ್ಡ ಒತ್ತುವರಿ ತೆರವು ಮಾಡಲಾಗುತ್ತಿದ್ದು, ಕಳೆದ ವರ್ಷದಿಂದ ಸುಮಾರು 2500 ಎಕರೆ ಒತ್ತುವರಿ ತೆರವು ಮಾಡಿಸಲಾಗಿದೆ ಎಂದರು.

ಬಡ ರೈತರ ಒತ್ತುವರಿಯನ್ನು (ಪಟ್ಟಾಭೂಮಿ ಮತ್ತು ಒತ್ತುವರಿ ಸೇರಿ 3 ಎಕರೆ) ತೆರವು ಮಾಡಿಸುವುದಿಲ್ಲ ಎಂದು ಪುನರುಚ್ಚರಿಸಿದ ಅವರು, ತಾವು ಸಚಿವರಾದ ತರುವಾಯ ಹೊಸದಾಗಿ 11559 ಎಕರೆ ಭೂಮಿಯನ್ನು ಅಧಿಸೂಚಿತ ಅರಣ್ಯ ಅಥವಾ ಮೀಸಲು ಅರಣ್ಯ ಎಂದು ಘೋಷಿಸಿರುವುದಾಗಿ ತಿಳಿಸಿದರು.

**ಕೌನ್ಸೆಲಿಂಗ್ ಮೂಲಕ ಪಾರದರ್ಶಕ**

ಅರಣ್ಯ ಇಲಾಖೆಯ ವರ್ಗಾವಣೆಯಲ್ಲಿ ಪಾರದರ್ಶಕತೆ ತರಲಾಗಿದ್ದು, ಡಿ.ಆರ್.ಎಫ್.ಓ ವರೆಗಿನ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಪಾರದರ್ಶಕವಾಗಿ ನಡೆಸಲಾಗುತ್ತಿದೆ, ಬಹು ದಿನಗಳಿಂದ ಬಡ್ತಿ ಸಿಗದೆ ಇದ್ದ ಸಿಬ್ಬಂದಿಗೆ ಬಡ್ತಿ ನೀಡಲಾಗಿದೆ, ಅರಣ್ಯ ಇಲಾಖೆಗೆ ಹೊಸ ಲಾಂಛನ ರೂಪಿಸಿ ಬಿಡುಗಡೆ ಮಾಡಲಾಗಿದೆ, ರಾಜ್ಯದ ಹಸಿರು ಹೊದಿಕೆ ಹೆಚ್ಚಿಸಲು 5 ಕೋಟಿ ಗಿಡ ನೆಡುವ ಸಂಕಲ್ಪ ಮಾಡಿ, ಗುರಿ ಮೀರಿದ ಸಾಧನೆಯೊಂದಿಗೆ 5 ಕೋಟಿ 48 ಲಕ್ಷ ಗಿಡ ನೆಟ್ಟು ಜಿಯೋ ಟ್ಯಾಗ್ ಮಾಡಲಾಗಿದೆ. ಅದರ ವಿವರವನ್ನು ವೆಬ್ ಸೈಟ್ ನಲ್ಲಿ ಅಪ್



ಲೋಡ್ ಮಾಡಲಾಗಿದೆ ಎಂದು ವಿವರ ನೀಡಿದರು.

ಅರಣ್ಯದ ಒತ್ತುವರಿಯೂ ಅವ್ಯಾಹತವಾಗಿದೆ. ಚಿರತೆಗಳು, ನವಿಲುಗಳು ಮತ್ತು ಸರೀಸೃಪಗಳ ಆವಾಸಸ್ಥಾನವಾದ ಬೆಟ್ಟಗುಡ್ಡದಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಹಲವು ಬೆಟ್ಟ ಗುಡ್ಡಗಳು ನಾಮಾವಶೇಷವಾಗಿವೆ. ಚಿರತೆಗಳು ನಾಡಿಗೆ ಬರುತ್ತವೆ ಎಂದು ಜನ ದೂರುತ್ತಾರೆ. ನವಿಲುಗಳು ತಮ್ಮ ಬೆಳೆ ನಾಶ ಮಾಡುತ್ತವೆ ಎನ್ನುತ್ತಾರೆ. ಬೆಟ್ಟಗುಡ್ಡಗಳಿದ್ದರೆ ಅಲ್ಲಿ ಅವು ಹಾವು ಇತ್ಯಾದಿ ತಿಂದು ಬದುಕುತ್ತವೆ. ಚಿರತೆಗಳು ಬೆಟ್ಟದ ಗುಹೆಗಳಲ್ಲಿ ವಾಸಿಸುತ್ತವೆ.

ಹೀಗಾಗಿಯೇ ಮರ ಗಿಡ ಇಲ್ಲದಿದ್ದರೂ ಬೆಟ್ಟಗುಡ್ಡವನ್ನು ಅರಣ್ಯ ಎಂದು ಪರಿಗಣಿಸಲಾಗುತ್ತದೆ ಎಂದು ವಿವರಿಸಿದರು.

ಅಕ್ರಮ ಒತ್ತುವರಿ ನಿಗ್ರಹ, ಕಳ್ಳಬೇಟೆ ತಡೆ, ಕಾಡ್ಗಿಚ್ಚು ನಿಯಂತ್ರಣವೇ ಮುಂತಾದ ಹಲವು ಕ್ಲಿಷ್ಟಕರ ಕಾರ್ಯಾಚರಣೆ ಮೂಲಕ ಅರಣ್ಯವನ್ನು ಕಾಪಾಡುತ್ತಿದ್ದಾರೆ. ಇದರ ಜೊತೆಗೆ, ಅರಣ್ಯ ಅಭಿವೃದ್ಧಿ, ಅರಣ್ಯ ಸಂರಕ್ಷಣೆ, ಸಂಶೋಧನೆ, ಕಾರ್ಯಯೋಜನೆ, ತರಬೇತಿ ಮುಂತಾದ ಕ್ಷೇತ್ರಗಳಲ್ಲಿಯೂ ಅರಣ್ಯ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದು, ನಾವೀನ್ಯಪೂರ್ಣ ಪರಿಹಾರವನ್ನೂ ಒದಗಿಸುತ್ತಿರುವ ಅರಣ್ಯ ಸಿಬ್ಬಂದಿಯನ್ನು ಶ್ಲಾಘಿಸಿದ ಅವರು, ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಪೊಲೀಸ್ ಕ್ಯಾಂಟೀನ್ ಸೌಲಭ್ಯ ಬಳಸಿಕೊಳ್ಳಲು ಅವಕಾಶ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅರಣ್ಯದಲ್ಲಿ ಕರ್ತವ್ಯದಲ್ಲಿ ಮೃತ ಪಡುವ ಸಿಬ್ಬಂದಿಗೆ ಪರಿಹಾರ ನೀಡುವ ನಿರ್ಧಾರವನ್ನು 2017ರಲ್ಲಿ ಕೈಗೊಂಡರು. ಹಿಂದೆ 20 ಲಕ್ಷ ರೂ. ಪರಿಹಾರ ನೀಡಲಾಗುತ್ತಿತ್ತು. ನಂತರ 30 ಲಕ್ಷಕ್ಕೆ ಹೆಚ್ಚಿಸಲಾಯಿತು, ಈಗ ಮುಖ್ಯಮಂತ್ರಿಯವರು ಆ ಮೊತ್ತವನ್ನು 50 ಲಕ್ಷಕ್ಕೆ ಹೆಚ್ಚಳ ಮಾಡಿದ್ದಾರೆ ಎಂದು ತಿಳಿಸಿದರು.ಇಂದು ಪದಕ ಪಡೆದ ಅಧಿಕಾರಿ, ಸಿಬ್ಬಂದಿಗಳಿಗೆ ಇದು ಮುಂದಿನ ದಿನಗಳಲ್ಲಿ ಇನ್ನೂ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸಲು ಶಕ್ತಿ, ಚೈತನ್ಯ ನೀಡುತ್ತದೆ. ಅದೇ ರೀತಿ, ಉಳಿದ ಅಧಿಕಾರಿ, ಸಿಬ್ಬಂದಿಗಳಿಗೆ ಉತ್ತಮ ಕಾರ್ಯ ಮಾಡಲು ಪ್ರೇರಣೆ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು.

**ಅರಣ್ಯ ಇಲಾಖೆಯೂ ಕೈಜೋಡಿಸಬೇಕಾದ ಅಗತ್ಯ**

**ಬೆಂಗಳೂರು ನಗರ ಕಳೆದ 10 ವರ್ಷಗಳಲ್ಲಿ ಬೆಂಗಳೂರು ನಗರವು 05 ಚದರ ಕಿಲೋಮೀಟರ್‌ನಷ್ಟು ಹಸಿರು ಹೊದಿಕೆಯನ್ನ ಕಳೆದುಕೊಂಡಿದೆ. ಮತ್ತೆ ಬೆಂಗಳೂರು ನಗರಕ್ಕೆ ಉದ್ಯಾನ ನಗರಿ ಎಂಬ ಖ್ಯಾತಿ ತರುವ ಪ್ರಯತ್ನ ಆಗಬೇಕು. ಇಲ್ಲಿನ ಹಸಿರು ಹೊದಿಕೆ ಹೆಚ್ಚಬೇಕು. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯೂ ಕೈಜೋಡಿಸಬೇಕಾದ ಅಗತ್ಯವಿದೆ. ನಾವೆಲ್ಲರೂ ಸೇರಿ ಬೆಂಗಳೂರಿನಲ್ಲಿ ಲಾಲ್ ಬಾಗ್, ಕಬ್ಬನ್ ಪಾರ್ಕ್ ರೀತಿಯಲ್ಲಿ ದೊಡ್ಡ ಉದ್ಯಾನಗಳನ್ನು ನಿರ್ಮಿಸಬೇಕಾಗಿದೆ. ಎಚ್.ಎಂ.ಟಿ.ಯ ಬಳಿ ಇರುವ ಅರಣ್ಯ ಭೂಮಿಯನ್ನು ಮರಳಿ ಪಡೆದು ಅಲ್ಲಿ ಲಾಲ್ ಭಾಗ್ ಮಾದರಿಯಲ್ಲಿ ಉದ್ಯಾನ ನಿರ್ಮಿಸುವ ಯೋಜನೆ ಇದೆ ಎಂದರು.**

**ಈ ದಿನದ ದರ** ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,277/Gram24ct ₹6,670/Gram22ct | ಬೆಳ್ಳಿ: ₹86.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಚೇಷ್ಟಿಸುವ ಗುಣ ಅನಿಲನದು

ನಿಜಗುಣರ ಪರಮಾನುಭವ ಬೋಧೆಯ ಮಾತು. ಶರೀರ ಕರ್ಮೇಂದ್ರಿಯ ಜ್ಞಾನೇಂದ್ರಿಯ ಅಂತಃಕರಣಗಳನ್ನು ಪ್ರಚೋದಿಸುವ ಗುಣ ವಾಯುವಿನದು, ಹೊರತು ಆತ್ಮನದ್ದಲ್ಲ. ದೇಹದಲ್ಲಿ ವಾಯುದೋಷ ಉಂಟಾದಾಗ ಶರೀರ ಕಾಯಿಲೆಗೆ ಒಳಗಾಗುತ್ತದೆ. ಹೊರತು ಆತ್ಮ ಚೈತನ್ಯದ ಕರ್ಮ ಅಕರ್ಮಗಳಿಂದಾದುದಲ್ಲ. ವಾಯುವು ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ಎಂದು ಐದು ವಿಧವೆನಿಸಿ ವಾಕ್ ಪಾಣಿ ಪಾದ ಪಾಯು ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳನ್ನು ಪ್ರಚೋದಿಸುವುದು, ಹೊರತು ಆತ್ಮನಲ್ಲ. ಇನ್ನು ಪ್ರಾಣ ಅಪಾನ ವ್ಯಾನ ಉದಾನ ಸಮಾನ ಎಂಬ ಐದು ವಾಯು ಕಿವಿ ನಾಲಿಗೆ ಚರ್ಮ ಮೂಗು ಕಣ್ಣು ಎಂಬ ಐದು ಜ್ಞಾನೇಂದ್ರಿಯಗಳನ್ನು ಶಬ್ದಾದಿ ಐದು ವಿಷಯಗಳಲ್ಲಿ ಪ್ರಚೋದಿಸುವುದು, ಹೊರತು ಆತ್ಮನಲ್ಲ. ಇನ್ನು ವೈರಂಭ ಮುಖ್ಯ ಪ್ರಭಂಜನ ಅಂತರ್ಯಾಮಿ ಮಹಾಪ್ರಾಣ ಎಂಬ ಐದು ವಿಧ ವಾಯು ಮನಸ್ಸು ಬುದ್ಧಿ ಚಿತ್ತ ಅಹಂಕಾರ ಜ್ಞಾತೃ ಎಂಬ ಐದು ಅಂತಃಕರಣಗಳನ್ನು ಪ್ರಚೋದಿಸುವುದು, ಹೊರತು ಆತ್ಮನಲ್ಲ. ಹೀಗಿದ್ದಾಗ್ಯೂ ಈ ವಾಯುವಿನ ಗುಣಧರ್ಮವನ್ನು ತನ್ನಲ್ಲಿ ಆರೋಪಿಸಿಕೊಂಡು ನಾನು ಮಾಡುತ್ತೇನೆ ಇತ್ಯಾದಿಯಾಗಿ ವ್ಯವಹರಿಸುವುದು ವಾಸ್ತವವಲ್ಲ.

# ಡೆಂಗ್ಯೂ ಸಾಂಕ್ರಾಮಿಕ ರೋಗವೆಂದು ಘೋಷಿಸಿ ಅಧಿಕೃತ ಆದೇಶ

## ಸರ್ಕಾರವು ಈ ಮೂಲಕ ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿ

• ಉದಯವಾಹಿನಿ, ಬೆಂಗಳೂರು


ಕರ್ನಾಟಕದಲ್ಲಿ ಡೆಂಗ್ಯೂ ಜ್ವರ ಆರ್ಭಟಿಸುತ್ತಿದೆ. ದಿನೇ ದಿನೇ ಡೆಂಗ್ಯೂ ಫೀವರ್ ಹೆಚ್ಚಾಗುತ್ತಿದೆ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದಿಂದ ಡೆಂಗ್ಯೂ ಜ್ವರವನ್ನು ಸಾಂಕ್ರಾಮಿಕ ರೋಗವೆಂದು ಘೋಷಣೆ ಮಾಡಿ ಗೆಜೆಟ್ ಅಧಿಸೂಚನೆಯಲ್ಲಿ ಅಧಿಕೃತ ಆದೇಶ ಹೊರಡಿಸಿದೆ. ಈ ಕುರಿತಂತೆ ರಾಜ್ಯ ಸರ್ಕಾರದಿಂದ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದರಲ್ಲಿ ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ, 2020 (ಕರ್ನಾಟಕ ಕಾಯ್ದೆ 26/ 2020) ರ ಸೆಕ್ಷನ್ 3 ರಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ರಾಜ್ಯದಲ್ಲಿ ಡೆಂಗ್ಯೂ ಜ್ವರದ ತೀವ್ರ ಸ್ವರೂಪಗಳನ್ನು ಒಳಗೊಂಡಂತೆ ಡೆಂಗ್ಯೂ ಜ್ವರವನ್ನು ಸಾಂಕ್ರಾಮಿಕ ರೋಗವೆಂದು ಅಧಿಸೂಚನೆ ಹೊರಡಿಸಲಾಗಿದೆ.

**ನಿಬಂಧನೆಗಳು ಶೀರ್ಷಿಕೆ ಪ್ರಾರಂಭ**

ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ, 2020 (ಕರ್ನಾಟಕ ಕಾಯ್ದೆ 26, 2020) ರ ಸೆಕ್ಷನ್ 4 ಮತ್ತು 16 ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಲು, ಕರ್ನಾಟಕ ಸರ್ಕಾರವು ಈ ಮೂಲಕ ಕರ್ನಾಟಕ ಸಾಂಕ್ರಾಮಿಕ ರೋಗಗಳ ನಿಯಂತ್ರಣ, 2020 ಕ್ಕೆ ತಿದ್ದುಪಡಿ ಮಾಡಲು ಈ ಕೆಳಗಿನ ನಿಯಮಗಳನ್ನು ರೂಪಿಸಲಾಗಿದೆ ಎಂದು ಹೇಳಿದೆ.

ನಿಬಂಧನೆಗಳು ಶೀರ್ಷಿಕೆ ಮತ್ತು ಪ್ರಾರಂಭ (1) ಈ ನಿಬಂಧನೆಗಳನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ನಿಯಮಗಳು, 2024 ಎಂದು ಕರೆಯಬಹುದು. (2) ಅವು ಅಧಿಕೃತ ಗೆಜೆಟ್ ನಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತವೆ.

ವ್ಯಾಖ್ಯಾನಗಳು. ಈ ನಿಬಂಧನೆಗಳಲ್ಲಿ, ಸಂದರ್ಭಕ್ಕೆ ಬೇರೆ ರೀತಿಯಲ್ಲಿ ಅಗತ್ಯವಿಲ್ಲದಿದ್ದರೆ, (ಎ) ಕಾಯ್ದೆ ಎಂದರೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ, 2020 (ಕರ್ನಾಟಕ ಕಾಯ್ದೆ 26 ಆಫ್ 2020); ಮತ್ತು (ಬಿ) ಸಕ್ಷಮ ಪ್ರಾಧಿಕಾರ ಎಂದರೆ ಬಿಬಿಎಂಪಿ ಪ್ರದೇಶದ ವ್ಯಾಪ್ತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಮುಖ್ಯ ಆಯುಕ್ತರು ಮತ್ತು ಬಿಬಿಎಂಪಿ ಪ್ರದೇಶ ವನ್ನು ಹೊರತುಪಡಿಸಿ ಇತರ ಜಿಲ್ಲೆಗಳ ವ್ಯಾಪ್ತಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ. ಮಾಲೀಕರು, ಅತಿಕ್ರಮಣಕಾರರು, ಇತ್ಯಾದಿಗಳ ಜವಾಬ್ದಾರಿಗಳು, ನೀರಿನ ಟ್ಯಾಂಕ್ ಗಳು, ಉದ್ಯಾನವನಗಳು, ಆಟದ ಮೈದಾನ ಸೇರಿದಂತೆ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಯಾವುದೇ ಸ್ಥಳದ ಉಸ್ತುವಾರಿ ಹೊಂದಿರುವ ಪ್ರತಿಯೊಬ್ಬ ಮಾಲೀಕರು, ಮಾಲೀಕರು, ಬಿಲ್ಡರ್ ಅಥವಾ ಇತರ ವ್ಯಕ್ತಿಯ ಕರ್ತವ್ಯವಾಗಿರುತ್ತದೆ, ಅದರಲ್ಲಿ ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಈ ಕೆಳಗಿನವುಗಳನ್ನು ಒಳಗೊಂಡಿದೆ ಆದರೆ ಅವುಗಳಿಗೆ ಸೀಮಿತವಾಗಿಲ್ಲ, ಮನೆ, ಯಾವುದೇ ಕಟ್ಟಡ, ನಿರ್ಮಾಣ ಸ್ಥಳ ಅಥವಾ ಶೆಡ್ ಅಥವಾ ಭೂಮಿಯ ಮಾಲೀಕರು ಅಥವಾ ಮಾಲೀಕರು ಸೊಳ್ಳೆ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ನೀರು ಶೇಖರಣಾ ಪಾತ್ರೆಗಳು, ಸಂಪ್‌ಗಳು ಅಥವಾ ಓವರ್ ಹೆಡ್ ಟ್ಯಾಂಕ್‌ಗಳನ್ನು ಮುಚ್ಚಳ ಅಥವಾ ಯಾವುದೇ ವಸ್ತುವಿನಿಂದ ಮುಚ್ಚಳ ಅಥವಾ ಭದ್ರಪಡಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಮತ್ತು ನೀರು ಸಂಗ್ರಹವಾಗುವುದನ್ನು ಮತ್ತು ಸೊಳ್ಳೆ ಸಂತಾ ನೋತ್ಪತ್ತಿಯನ್ನು ತಡೆಯಲು ಘನ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವುದು. ಮನೆಯ ಮಾಲೀಕರು ಅಥವಾ ನಿವಾಸಿ, ಯಾವುದೇ ಕಟ್ಟಡ ಅಥವಾ ಶೆಡ್ ಅಥವಾ ಭೂಮಿ ಸೊಳ್ಳೆಗಳ ಸಂತಾನೋತ್ಪತ್ತಿಗೆ



### ಸೊಳ್ಳೆಗಳ ಸಂತಾನೋತ್ಪತ್ತಿಗೆ ಕಾರಣವಾಗುವ ನೀರಿನ ಸಂಗ್ರಹ

**ಖಾಸಗಿ ವ್ಯಕ್ತಿ ಅಥವಾ ಸರ್ಕಾರಿ, ಅರೆ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಅಂತಹ ಭೂಮಿ ಅಥವಾ ಕಟ್ಟಡದ ಮಾಲೀಕರು ಅಥವಾ ಮಾಲೀಕ ಅಥವಾ ಯಾವುದೇ ವ್ಯಕ್ತಿ, ಸೊಳ್ಳೆ ಸಂತಾನೋತ್ಪತ್ತಿಗೆ ಕಾರಣವಾಗುವ ನೀರಿನ ಸಂಗ್ರಹಣೆ ಅಥವಾ ಶೇಖರಣೆಯನ್ನು ತಡೆಗಟ್ಟಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.**

### ಅವುಗಳೆಂದರೆ

**ಯಾವುದೇ ಉದ್ದೇಶಕ್ಕಾಗಿ ಮನೆ ಅಥವಾ ಬಹುಮಹಡಿ ಕಟ್ಟಡ ಅಥವಾ ಇನ್ನಾವುದೇ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ವ್ಯಕ್ತಿ, ಪ್ರಾಧಿಕಾರ ಅಥವಾ ಸಂಸ್ಥೆ, ಅಂತಹ ಚಟುವಟಿಕೆಯ ಭಾಗವಾಗಿ ಸೊಳ್ಳೆ ಸಂತಾನೋತ್ಪತ್ತಿಯನ್ನು ತಡೆಗಟ್ಟುವ ಉದ್ದೇಶದಿಂದ ಕ್ರಮಗಳನ್ನು ತೆಗೆದುಕೊಳ್ಳಬೇಕು.**

ಕಾರಣವಾಗಬಹುದಾದ ನೀರನ್ನು ಸಂಗ್ರಹಿಸುವ ಉಳಿಸಿಕೊಳ್ಳುವ ಸಾಧ್ಯತೆಯಿರುವ ರೀತಿಯಲ್ಲಿ ಯಾವುದೇ ಖಾಲಿ ಪಾತ್ರೆಗಳು, ಮಡಕೆ ತಟ್ಟೆಗಳು, ಕ್ಯಾನ್‌ಗಳು, ಪಾತ್ರೆಗಳು, ಬಳಸದ ಟೈರ್ ಗಳು, ಭಾಗಗಳು ಅಥವಾ ಇತರ ಯಾವುದೇ ಘನ ತ್ಯಾಜ್ಯ ವಸ್ತುಗಳನ್ನು ಇಡಬಾರದು; ಸೊಳ್ಳೆಗಳ ಸಂತಾನೋತ್ಪತ್ತಿಗೆ ಕಾರಣವಾಗಬಹುದಾದ ನೀರು ಸಂಗ್ರಹವಾಗುವ, ಸಂಗ್ರಹವಾಗುವ ಸಾಧ್ಯತೆಯಿರುವ ಕಟ್ಟಡ ಅಥವಾ ಭೂಮಿಯಲ್ಲಿ ಬಳಸದ ಕೆರೆ, ಹೊಂಡಗಳು, ಬಿಲಗಳನ್ನು ಯಾವುದೇ ಕಟ್ಟಡ ಅಥವಾ ಭೂಮಿಯ ಮಾಲೀ ಕರು ಅಥವಾ ಮಾಲೀಕರು ಅನುಮತಿಸಬಾರದು.

ಸೊಳ್ಳೆ ಸಂತಾನೋತ್ಪತ್ತಿ ಮೂಲವಾಗಿ ನೆರೆಹೊರೆಯವರಿಗೆ ಅಥವಾ ಸಮುದಾಯಕ್ಕೆ ತೊಂದರೆಯಾಗದಂತೆ ಆವರಣದ ಒಳಗೆ ಅಥವಾ ಹೊರಗೆ ನೀರು ಸಂಗ್ರಹವಾಗುವುದನ್ನು ಅಥವಾ ಸಂಗ್ರಹಿಸುವುದನ್ನು ತಡೆಗಟ್ಟಲು ಪ್ರತಿಯೊಬ್ಬ ವ್ಯಕ್ತಿ, ಸಂಸ್ಥೆ ಅಥವಾ ಏಜೆನ್ಸಿ ಕಾಳಜಿ ವಹಿಸಬೇಕು.

# ಹರಿನಾಮ ಸಂಕೀರ್ತನೆ

• ಉದಯವಾಹಿನಿ, ಬೆಂಗಳೂರು



ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀ ಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ಯರ ನೇತೃತ್ವದಲ್ಲಿ ಸೆಪ್ಟೆಂಬರ್ 5, ಗುರುವಾರ ಸಂಜೆ 7-00ಕ್ಕೆ ಶ್ರೀಮತಿ ಸೌಮ್ಯಾ ಸಂತೋಷ್ ಇವರಿಂದ ಹರಿನಾಮ ಸಂಕೀರ್ತನೆ. ವಾದ್ಯ ಸಹಕಾರ : ಶ್ರೀ ಸುಬೋಧ ಎಂ. ಶ್ರೀವತ್ಸ (ಪಿಟೀಲು), ಶ್ರೀ ಕೆ.ಆರ್. ಸಂತೋಷ್ (ಮೃದಂಗ) ಸಾಥ್ ನೀಡಲಿದ್ದಾರೆ ಎಂದು ಶ್ರೀ ಗೊಗ್ಗಿ ಕೃಷ್ಣಾಚಾರ್ಯ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಬೆಂಗಳೂರು-560062

# ರಾಡ್‌ನಿಂದ ಹೊಡೆದು ಲಾರಿ ಚಾಲಕನ ಹತ್ಯೆ

• ಉದಯವಾಹಿನಿ, ಬೆಂಗಳೂರು

ನಿನ್ನೆ ಮಧ್ಯ ರಾತ್ರಿ ಮತ್ತೊಂದು ರೋಡ್ ರೇಜ್ ಪ್ರಕರಣ ನಡೆದಿದ್ದು, ಡಾಬಾ ಬಳಿ ನಿಲ್ಲಿಸಿದ್ದ ಲಾರಿಗೆ ಬೊಲೆರೋ ವಾಹನ ಡಿಕ್ಕಿ ಹೊಡೆದಿದೆ.ಈ ವೇಳೆ ಲಾರಿ ಚಾಲಕ ಮತ್ತು ಬೊಲೆರೋ ವಾಹನದಲ್ಲಿದ್ದ ಆರೋಪಿ ನಡುವೆ ಮಾತಿಗೆ ಮಾತು ಬೆಳೆದು ಲಾರಿ ಚಾಲಕನನ್ನು ಭೀಕರವಾಗಿ ಹತ್ಯೆ ಮಾಡಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ಬಳಿ ನಡೆದಿದೆ. ಹೌದು ನಿನ್ನೆ ಮಧ್ಯ ರಾತ್ರಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಮಲ್ಲರಬಾಣವಾಡಿ ಕ್ರಾಸ್‌ನಲ್ಲಿ ಇರುವ ಗ್ರೀನ್ ಪಾರ್ಕ್ ಡಾಬಾ ಸಮೀಪ ಈ ಒಂದು ಕೊಲೆ ನಡೆದಿದೆ. ಘಟನೆಯಲ್ಲಿ ಲಾರಿ ಚಾಲಕ ಬಲಿಯಾಗಿದ್ದಾನೆ. ಡಾಬಾ ಬಳಿ ನಿಲ್ಲಿಸಿದ್ದ ಲಾರಿಗೆ ಬೊಲೆರೋ ವಾಹನ ಡಿಕ್ಕಿ ಹೊಡೆದಿದೆ. ಈ ವೇಳೆ ಲಾರಿ ಚಾಲಕ ಮತ್ತು ಬೊಲೆರೋ ವಾಹನದಲ್ಲಿದ್ದ ಆರೋಪಿ ಮಹೇಶ್ ನಡುವೆ ಮಾತಿಗೆ ಮಾತು ಬೆಳೆದು ಲಾರಿ ಚಾಲಕರನ್ನು ಹತ್ಯೆ ಮಾಡಿದ್ದಾನೆ.ರಾಡ್ ನಿಂದ ಹೊಡೆದು ಲಾರಿಯಲ್ಲಿದ್ದ ಪ್ರದೀಪ್ ನನ್ನು ಕೊಲೆ ಮಾಡಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಗ್ರೀನ್ ಪಾರ್ಕ್ ಡಾಬಾದಲ್ಲಿ ಈ ಒಂದು ಘಟನೆ ನಡೆದಿದೆ.ಘಟನ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಗಣೇಶ ಮೂರ್ತಿಯನ್ನು ಹೊಳೆ, ಕೆರೆಗಳಲ್ಲಿ ವಿಸರ್ಜಿಸುವ ವೇಳೆ ತೆಪ್ಪ ಬಳಸುವಂತಿಲ್ಲ

• ಉದಯವಾಹಿನಿ, ಬೆಂಗಳೂರು

ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದ ನಂತ್ರ, ಮೆರವಣಿಗೆಯಲ್ಲಿ ಕೊಂಡೊಯ್ದು, ಹೊಳೆ, ಕೆರೆಯಲ್ಲಿ ವಿಸರ್ಜನೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ತೆಪ್ಪವನ್ನು ಬಳಸುವಂತಿಲ್ಲ ಎಂಬುದಾಗಿ ರಾಜ್ಯ ಸರ್ಕಾರ ಖಡಕ್ ಆದೇಶ ಹೊರಡಿಸಿದೆ. ಈ ಕುರಿತಂತೆ ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗಿದ್ದು, ದಿನಾಂಕ 07-09-2024ರಂದು ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ, ನಂತ್ರ ವಿವಿಧ ದಿನಾಂಕಗಳಂದು ವಿಸರ್ಜನೆಯನ್ನು ಮೆರವಮಿಗೆ ಮೂಲಕ ತೆಗೆದುಕೊಂಡು ಹೋಗಿ, ಹೊಳೆ, ನದಿ, ಕೆರೆಗಳು, ಹಿನ್ನೀರು ಪ್ರದೇಶಗಳಲ್ಲಿ ತೆಪ್ಪದ ಮೂಲಕ ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡಲಿದ್ದು, ಈ ಹಿಂದೆ ತೆಪ್ಪ ಮುಗುಚಿ ಹಲವೆಡೆ ಅನಾಹುತವಾಗಿದೆ ಎಂದಿದೆ. ಶಿವಮೊಗ್ಗ ತಾಲ್ಲೂಕಿನ ಹಾಡೋನಹಳ್ಳಿ ಗ್ರಾಮದಲ್ಲಿ ತೆಪ್ಪ ಮುಗುಚಿ 12 ಜನ ಸಾವನ್ನಪ್ಪಿದಂತ ಘಟನೆ ಈ ಹಿಂದೆ ನಡೆದಿತ್ತು.

# ಗೃಹಲಕ್ಷ್ಮಿ ಖಾತೆಗಳು ಡಿಲೀಟ್ : ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಹಲವರ ಗೃಹಲಕ್ಷ್ಮಿ ಖಾತೆಗೆ ಡಿಲೀಟ್ ಆಗಿವೆ ಎನ್ನುವ ವಿಚಾರವಾಗಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪ್ರತಿಕ್ರಿಯೆ ನೀಡಿದ್ದು, ಯಾರ ಗೃಹಲಕ್ಷ್ಮಿ ಖಾತೆಯನ್ನು ಡಿಲೀಟ್ ಮಾಡಿಲ್ಲ ಎಂದು ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹಲಕ್ಷ್ಮೀ ಖಾತೆಗಳು ಡಿಲೀಟ್ ಆಗಿವೆ ಎನ್ನುವ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಇದುವರೆಗೂ ಒಂದೇ ಒಂದು ಕೂಡ ಡಿಲೀಟ್ ಆಗಿಲ್ಲ. ಯಾರು ಜಿಎಸ್ ಟಿ, ಆದಾಯ ತೆರಿಗೆ ಕಟ್ಟುತ್ತಿದ್ದಾರೆ, ಅಂತಹವರದ್ದು ಅವರು ಅಪ್ ಲೋಡ್ ಮಾಡಿದಾಗಲೇ ಡಿಲೀಟ್ ಮಾಡಿದ್ದೇವೆ. ನೋಂದಣಿ ಆದ ಬಳಿಕ ನಾವು ಡಿಲೀಟ್ ಮಾಡಿಲ್ಲ. ಎಲ್ಲಾ ಜಿಲ್ಲೆಗಳಿಗೂ 11 ನೇ ಕಂತು ಹಣ ಬಿಡುಗಡೆ ಆಗಿದ್ದು, ಶೀಘ್ರವೇ 12ನೇ, 13ನೇ ಕಂತಿನ ಹಣ ಬಿಡುಗಡೆ ಮಾಡಲಾಗುತ್ತದೆ ಸಚಿವರು ಹೇಳಿದರು.

# ಇಂದು ಅಥವಾ ನಾಡಿದ್ದು ಚಾರ್ಜ್ ಶೀಟ್ ಸಲ್ಲಿಕೆ- ಪೊಲೀಸ್ ಆಯುಕ್ತ

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಪೊಲೀಸರು ತನಿಖೆ ಮುಗಿಸಿ ಕೋರ್ಟ್‌ಗೆ ಚಾರ್ಜ್ ಶೀಟ್ ಸಲ್ಲಿಸಲು ಸಜ್ಜಾಗಿದ್ದಾರೆ. ಆರೋಪಿಗಳ ಬಂಧನವಾದ 90 ದಿನಗಳ ಒಳಗೆ ನ್ಯಾಯಾಲಯಕ್ಕೆ ಕಡ್ಡಾಯವಾಗಿ ಚಾರ್ಜ್ ಶೀಟ್ ಸಲ್ಲಿಸಬೇಕಾಗುತ್ತದೆ. ಪ್ರಕರಣದಲ್ಲಿ ನಟ ದರ್ಶನ್ ಸೇರಿ 17 ಆರೋಪಿಗಳ ಬಂಧನವಾಗಿ ಮೂರು ತಿಂಗಳಾಗುತ್ತಾ ಬಂದಿದೆ. ಈ ಮಧ್ಯೆ, ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಶಿಫ್ಟ್ ಆಗಿರುವ ನಟ ದರ್ಶನ್‌ನ್ನು ಆರೋಪಿ ನಂಬರ್ 1 ಎಂದು ಚಾರ್ಜ್ ಶೀಟ್ ನಲ್ಲಿ ಹೆಸರಿಸಲಾಗುತ್ತದೆ ಎಂಬ ಮಾತುಗಳು ಹಲವು ದಿನಗಳಿಂದ ಕೇಳಿಬರುತ್ತಲೇ ಇದೆ. ಈ ಬಗ್ಗೆ ಗೃಹ ಸಚಿವ ಡಾ ಜಿ ಪರಮೇಶ್ವರ್ ಅವರನ್ನು ಕೇಳಿದಾಗ, ಯಾರು ನಂಬರ್ 1, ನಂಬರ್ 2 ಯಾರು ಎಂದು ತನಿಖೆ ನಡೆಸಿ ದೋಷಾರೋಪಣೆ ಪಟ್ಟಿ ಸಲ್ಲಿಸುವುದು ಪೊಲೀಸ್ ಅಧಿಕಾರಿಗಳು ನಾವಲ್ಲ ಎಂದರು. ಬಿಜೆಪಿ ನಾಯಕರು ಸುಖಾಸುಮ್ಮನೆ ಮಾಡುತ್ತಿರುವ ಎಲ್ಲ ಆರೋಪಗಳಿಗೆ ಸರ್ಕಾರ ಸರಿಯಾದ ಪ್ರತ್ಯುತ್ತರ ನೀಡುತ್ತದೆ ಎಂದರು.

# ನಮ್ಮ ಮೆಟ್ರೋದ ಹೊಸ ಚಾಲಕರಹಿತ ರೈಲು

• ಉದಯವಾಹಿನಿ, ಬೆಂಗಳೂರು

ಇಎಂಎಲ್ ಲಿಮಿಟೆಡ್ ನಮ್ಮ ಮೆಟ್ರೋದ ನೀಲಿ ಮತ್ತು ಪಿಂಕ್ ಮಾರ್ಗಗಳಿಗಾಗಿ ಮೂಲಮಾದರಿ ಚಾಲಕರಹಿತ ರೈಲುಗಳ ಉತ್ಪಾದನೆಯನ್ನು ಪ್ರಾರಂಭಿಸಿದೆ. ಸಿ.ವಿ.ರಾಮನ್ ನಗರದ ಸುರಂ ಜನ್ ದಾಸ್ ರಸ್ತೆಯಲ್ಲಿರುವ ಬಿಇಎಂಎಲ್ ಘಟಕದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಬಿಎಂಆರ್ ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ ರಾವ್, ನಿರ್ದೇಶಕ ರೋಲಿಂಗ್ ಸ್ಟಾಕ್ ಎನ್. ಎಂ.ಧೋಕೆ, ಬಿಇಎಂಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶಂತನು ರಾಯ್ ಭಾಗವಹಿಸಿದ್ದರು.



ಆಗಸ್ಟ್ 2023 ರಲ್ಲಿ, ಬಿಇಎಂಎಲ್ ನಮ್ಮ ಮೆಟ್ರೋದ ಅತಿದೊಡ್ಡ ಕೋಚ್ ಒಪ್ಪಂದವನ್ನು 3,177 ಕೋಟಿ ರೂ.ಗಳ ವೆಚ್ಚದಲ್ಲಿ ಗೆದ್ದುಕೊಂಡಿತು ಮತ್ತು ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆ (ಜೈಕಾ) ಧನಸಹಾಯ ನೀಡಿತು, ಇದು ಜಾಗತಿಕ ರೋಲಿಂಗ್ ಸ್ಟಾಕ್ ತಯಾರಕರನ್ನು ಹಿಂದಿಕ್ಕಿದೆ. ಈ ಒಪ್ಪಂದವು 318 ಬೋಗಿಗಳ (53 ರೈಲುಸೆಟ್ಗಳು) ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ ಮತ್ತು 15 ವರ್ಷಗಳವರೆಗೆ ನಿರ್ವಹಣಾ ಸೇವೆಗಳನ್ನು ಒಳಗೊಂಡಿದೆ.

### ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

**38 ಕಿ.ಮೀ) ನಲ್ಲಿ 21 ರೈಲುಗಳು (126 ಬೋಗಿಗಳು) ಕಾರ್ಯನಿರ್ವಹಿಸಲಿವೆ. ಹಂತಗಳು 2ಂ ಮತ್ತು 2ಃ ಒಟ್ಟಾಗಿ ನೀಲಿ ರೇಖೆಯನ್ನು ರೂಪಿಸುತ್ತವೆ. ನಗರದ ಅತಿ ಉದ್ದದ ಭೂಗತ ವಿಭಾಗವನ್ನು ಹೊಂದಿರುವ ಪಿಂಕ್ ಲೈನ್ 2025 ರ ಅಂತ್ಯದ ವೇಳೆಗೆ ತೆರೆಯುವ ನಿರೀಕ್ಷೆಯಿದೆ, ಬ್ಲೂ ಲೈನ್ ಜೂನ್ 2026 ರೊಳಗೆ ಪ್ರಾರಂಭವಾಗಲಿದೆ.**

ಈ ಒಪ್ಪಂದದ ಪ್ರಕಾರ, ಪಿಂಕ್ ಲೈನ್ (ಕಾಳೇನ ಅಗ್ರಹಾರ-ನಾಗವಾರ; 21.26 ಕಿ.ಮೀ) ಮತ್ತು ಹಂತ 2 ಎ (ಸಿಲ್ಕ್ ಬೋರ್ಡ್ ಜಂಕ್ಷನ್-ಕೆ.ಆರ್.ಪುರ; 19 ಕಿ.ಮೀ) ನಲ್ಲಿ 16 ರೈಲುಗಳು (96 ಬೋಗಿಗಳು) ಮತ್ತು ಹಂತ 2 ಬಿ (ಕೆ.ಆರ್.ಪುರ-ಕೆಂಪೇಗೌಡ ಎಲ್ಲಾ ಬೋಗಿಗಳು ಸಂವಹನ ಆಧಾರಿತ ರೈಲು ನಿಯಂತ್ರಣ (ಸಿಬಿಟಿಸಿ) ಅನ್ನು ಹೊಂದಿರುತ್ತವೆ, ಇದು ಚಾಲಕರಹಿತ ಕಾರ್ಯಾಚರಣೆ ಮತ್ತು 90 ಸೆಕೆಂಡುಗಳ ರೈಲು ಆವರ್ತನಗಳನ್ನು ಸಕ್ರಿಯಗೊಳಿಸುತ್ತದೆ. ಬ್ಲೂ ಲೈನ್ ರೈಲುಗಳು ಸಹ ಸ್ಪೆಕ್ ಅನ್ನು ಹೊಂದಿರುತ್ತವೆ

# ಮೇಕೆದಾಟು ಯೋಜನೆ ತಮಿಳುನಾಡಿಗೆ ಹೆಚ್ಚು ಉಪಯೋಗ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

**ಘನ ತ್ಯಾಜ್ಯ ನಿರ್ವಹಣೆ**

ಈ ವರ್ಷ ವರುಣದೇವ ನಮ್ಮನ್ನು ಕಾಪಾಡಿದ್ದಾನೆ. ಮೇಕೆದಾಟು ಯೋಜನೆ ಸಾಕಾರಗೊಂಡರೆ ಕರ್ನಾಟಕಕ್ಕಿಂತ ತಮಿಳುನಾಡಿನ ಜನತೆಗೆ ಹೆಚ್ಚು ಉಪಯೋಗ. ಈಗ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ತಮಿಳುನಾಡಿನ ಚೆನ್ನೈನಲ್ಲಿರುವ ಶ್ರೀನಿವಾಸ ಸಾಲಿಡ್ ವೇಸ್ಟ್ ಮ್ಯಾನೇಜ್ ಮೆಂಟ್ ಘಟಕಕ್ಕೆ ಮಂಗಳವಾರ ಭೇಟಿ ನೀಡಿದ ವೇಳೆ ಮೇಕೆದಾಟು ಅಣೆಕಟ್ಟೆಗೆ ತಮಿಳುನಾಡು ವಿರೋಧ ವ್ಯಕ್ತಪಡಿಸಿರುವ ಮಾತನಾಡಿ, ಮೇಕೆದಾಟು ಯೋಜನೆಯಿಂದ ತಮಿಳುನಾಡಿನ ಜನತೆಗೆ ಹೆಚ್ಚು ಉಪಯೋಗವಾಗಲಿದೆ. ಮಳೆಯಿಂದ ತಮಿಳುನಾಡಿಗೆ ಒಳ್ಳೆಯದಾಗಿದೆ ಎಂದು ವಿವರಿಸಿದರು.ಘನ ತ್ಯಾಜ್ಯ ನಿರ್ವಹಣೆ ಸೇರಿದಂತೆ ಕಸದಿಂದ ಗ್ಯಾಸ್ ಉತ್ಪಾದನೆಯ ಬಗ್ಗೆ ತಿಳಿದುಕೊಳ್ಳಲು 15 ಮಂದಿ ಅಧಿಕಾರಿಗಳ ಜೊತೆ ಕಸ ನಿರ್ವಹಣೆಯಲ್ಲಿ ಚೆನ್ನೈ ಮಾದರಿಯ ಅಧ್ಯಯನಕ್ಕೆ ಬಂದಿದ್ದೇನೆ. ಇಲ್ಲಿನ ತ್ಯಾಜ್ಯ ನಿರ್ವಹಣೆಯಿಂದ ಸಾಕಷ್ಟು ವಿಚಾರಗಳನ್ನು ತಿಳಿದು ಕೊಂಡಂತಾಯಿತು. ಕಳೆದ ಒಂದು ವರ್ಷದಿಂದ ಭೇಟಿ ನೀಡಬೇಕು ಎಂದುಕೊಂಡಿದ್ದೆ. ಈಗ ಸಮಯ ಸಿಕ್ಕ ಕಾರಣಕ್ಕೆ ಭೇಟಿ ನೀಡಿದ್ದೇನೆ. ನಮ್ಮ ರಾಜ್ಯದಲ್ಲೂ ಒಂದಷ್ಟು ಇಲ್ಲಿನ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಲಾಗುವುದು ಎಂದರು. ಅನೇಕ ಕಡೆ ಘನ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಯಶಸ್ಸು ಕಂಡಿಲ್ಲ. ನಮ್ಮಲ್ಲಿಯೂ 10 ಕಡೆ ಕಸದಿಂದ ವಿದ್ಯುತ್ ಉತ್ಪಾದನೆಗೆ ಅವಕಾಶ ನೀಡಲಾಗಿತ್ತು. ಈ ಹಿಂದೆ ಹೈದರಾಬಾದ್‌ಗೆ ಭೇಟಿ ನೀಡಿದ್ದೆ. ಇಲ್ಲಿ ನಗರದ ನಡುವೆಯೇ ಸಿಎನ್ ಜಿ ಉತ್ಪಾದನಾ ಘಟಕವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ನಮ್ಮಲ್ಲೂ ಒಂದಷ್ಟು ಒಳ್ಳೆ ಕೆಲಸ ಮಾಡಿದ್ದೇವೆ. ಇಲ್ಲಿ ಅಚ್ಚುಕಟ್ಟಾಗಿ ಕೆಲಸ ಮಾಡಿದ್ದಾರೆ ಎಂದು ಡಿ ಕೆ ಶಿವಕುಮಾರ್ ತಿಳಿಸಿದರು. ತಮಿಳುನಾಡು ಸಿಎಂ ವಿದೇಶ ಪ್ರಯಾಣದಲ್ಲಿದ್ದಾರೆ.

**ಬಿಜೆಪಿ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಕೆಐಡಿಬಿ ಸಿಎ ನಿವೇಶನ ಹಂಚಿಕೆಯಲ್ಲಾಗಿರುವ ಅಕ್ರಮದ ಬಗ್ಗೆ ಪ್ರಶ್ನಿಸಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿ, ಸಿಎ ನಿವೇಶನ ಹಂಚಿಕೆ ಕಾನೂನಾತ್ಮಕವಾಗಿ ನಡೆದಿದೆ. ಇದರಲ್ಲಿ ಯಾವುದೇ ಅಕ್ರಮವಾಗಿಲ್ಲ. ವ್ಯಕ್ತಿಗೆ ಸೈಟು ಹಂಚಿಲ್ಲ, ಚಾರಿಟಬಲ್ ಟ್ರಸ್ಟಿಗೆ ಹಂಚಿದ್ದೇವೆ ಎಂದು ಡಿ ಕೆ ಶಿವಕುಮಾರ್ ಹೇಳಿದರು.**

ತಮಿಳುನಾಡು ಡಿಸಿಎಂ ಅವರನ್ನು ಭೇಟಿ ಮಾಡುವಿರಾ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿ, ತಮಿಳುನಾಡು ಡಿಸಿಎಂ ಅವರು ಉತ್ತಮ ಸ್ನೇಹಿತರು ಹಾಗೂ ನಮ್ಮ ನಾಯಕರು. ಸಮಯ ಮಾಡಿಕೊಂಡು ಸ್ನೇಹಪೂರ್ವಕವಾಗಿ ಅವರನ್ನು ಭೇಟಿ ಮಾಡಲಾಗುವುದು ಎಂದು ಹೇಳಿದರು.

# ನೀಲಿ ದ್ರಾಕ್ಷಿಗೆ ಕೇರಳ, ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಭಾರೀ ಬೇಡಿಕೆ

• ಉದಯವಾಹಿನಿ, ಬೆಂಗಳೂರು

ನೀಲಿ ದ್ರಾಕ್ಷಿ ಹಣ್ಣಿನ ತಳಿಗೆ ಕೇರಳ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಲ್ಲಿ ಬೇಡಿಕೆ ಹೆಚ್ಚುತ್ತಿದೆ. ಬೆಂಗಳೂರಿನಲ್ಲಿರುವ ಅನುಕೂಲಕರ ಹವಾಮಾನದ ಕಾರಣದಿಂದ ಈ ತಳಿಗೆ ಈ ಹೆಸರು ಬಂದಿದೆ ಎಂದು ತೋಟಗಾರಿಕಾ ಇಲಾಖೆಯ ನಿವೃತ್ತ ಅಧಿಕಾರಿ, ಹಣ್ಣು ತಜ್ಞ ಎಸ್.ವಿ.ಹಿತ್ತಲಮನಿ ಹೇಳಿದ್ದಾರೆ.

ಜಾಗತಿಕ ಮಾನ್ಯತೆ ಪಪಡೆದಿರುವ ಈ ನೀಲಿ ದ್ರಾಕ್ಷಿ ಹಣ್ಣಿನ ಪ್ರಭೇದಕ್ಕೆ ತಂಪಾದ ಹವಾಮಾನ ಅಂದರೆ 36- 37 ಡಿಗ್ರಿ ಸೆಲ್ಸಿಯಸ್ ವ್ಯಾಪ್ತಿಯಲ್ಲಿ ತಾಪಮಾನದ ಅಗತ್ಯವಿದೆ. ಮಾಡರೇಟ್ ತಾಪಮಾನವು ಹಣ್ಣಿನ ಬಣ್ಣವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಆದರೆ, ಏಪ್ರಿಲ್, ಮೇ ತಿಂಗಳಲ್ಲಿ ಹೆಚ್ಚಿನ ತಾಪಮಾನ ದಾಖಲಾಗಿದ್ದರಿಂದ, ಬೆಳೆಗೆ ಹಾನಿಯಾಗಿದೆ. ತಾಪಮಾನ ಏರಿಕೆಯೊಂದಿಗೆ, ಬಣ್ಣವು ಗುಲಾಬಿ ಅಥವಾ ಕೆಂಪು ಬಣ್ಣಕ್ಕೆ ಬದಲಾಗುತ್ತದೆ ಹೇಳಿದ್ದಾರೆ. ಹಣ್ಣಿನ ಬೇಡಿಕೆಯನ್ನು ಪೂರೈಸಲು, ರೈತರು ಬಣ್ಣ ಗುಣಮಟ್ಟವನ್ನು ಕಾಪಾಡಿಕೊಳ್ಳಲು ತಾಪಮಾನವನ್ನು ತಂಪಾಗಿರಿಸಲು ತಜ್ಞರು ಮತ್ತು ವಿಜ್ಞಾನಿಗಳನ್ನು ಸಂಪರ್ಕಿಸಿದ್ದಾರೆ. ಹಣ್ಣಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಪರಿಶೀಲಿಸಿದ


ಉದಯವಾಹಿನಿ ಚಿತ್ರ

ಸರ್ಕಾರ ಈಗ ವ್ಯಾಪಾರವನ್ನು ನಿಯಂತ್ರಿಸುವ ಕೆಲಸ ಮಾಡುತ್ತಿದೆ. ಆದರೆ, ತಾಪಮಾನದಲ್ಲಿ ನಿರಂತರವಾಗಿ ಏರಿಕೆಯಾಗುತ್ತಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ಜ್ಯೂಸ್ ತಯಾರಿಕೆಗೆ ನೀಲಿದ್ರಾಕ್ಷಿ ಶೇ.95 ರಷ್ಟು ಬೆಳೆ ಬಳಕೆಯಾಗಿದೆ. ಕೆಲವು ಭಾಗವನ್ನು ಡಿಸ್ಟಿಲರಿಗಳಿಗೂ ಕಳು ಹಿಸಲಾಗುತ್ತದೆ ತೋಟಗಾರಿಕೆ (ಹಣ್ಣು) ಹೆಚ್ಚುವರಿ ನಿರ್ದೇಶಕ ಕೆ.ಬಿ.ದುಂಡಿ ವಿವರಸಿದ್ದಾರೆ. ಬೆಂಗಳೂರಿನಲ್ಲಿ ಮಾತ್ರವಲ್ಲ, ಕೇರಳ , ತಮಿಳು ನಾಡಿನಿಂದಲೂ ನೀಲಿ ದ್ರಾಕ್ಷಿ ಹಣ್ಣಿಗೆ ಬೇಡಿಕೆ ಇದೆ. ಕಳೆದ ಎರಡು ವರ್ಷಗಳಿಂದ 'ಬೆಂಗಳೂರು ಬ್ಲೂಗ್ರೇಪ್ಸ್‌ಗೆ ಬೇಡಿಕೆ ಹೆಚ್ಚಿದ್ದು, ಮಧ್ಯವರ್ತಿಗಳನ್ನು ತಪ್ಪಿಸಲು ಎಫ್‌ಪಿಒಗಳನ್ನು ಬಲಪಡಿಸಲಾಗುತ್ತಿದೆ. ಆದರೂ ಮಾರುಕಟ್ಟೆ ಅಸಂಘಟಿತವಾಗಿಯೇ ಉಳಿದಿದೆ. ಮಹಾರಾಷ್ಟ್ರದ ಡಿಸ್ಟಿಲರಿಗಳೂ ಇದಕ್ಕೆ ಬೇಡಿಕೆ ಇಡುತ್ತಿವೆ, ಹೀಗಾಗಿ 'ಬೆಂಗಳೂರು ಬ್ಲೂ' ಉತ್ಪಾದನೆ ಮಾರಾಟದಲ್ಲಿ ವರ್ಷದಿಂದ ವರ್ಷಕ್ಕೆ ಶೇ.5ರಷ್ಟು ಏರಿಕೆಯಾಗಿದೆ ಎಂದು ಕರ್ನಾಟಕ ದ್ರಾಕ್ಷಾರಸ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಟಿ. ಸೋಮು ತಿಳಿಸಿದ್ದಾರೆ. ಬೆಂಗಳೂರು ನಗರ, ಗ್ರಾಮಾಂತರ, ದೇವನಹಳ್ಳಿ, ಚಿಕ್ಕಬಳ್ಳಾಪುರ, ಕೋಲಾರ, ಶಿಡ್ಲಘಟ್ಟ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಂಗಳೂರು ಬ್ಲೂಗ್ರೇಪ್ಸ್ ಹೇರಳವಾಗಿ ಬೆಳೆಯಲಾಗುತ್ತದೆ ಎಂದು ಹಿತ್ತಲಮನಿ ಹೇಳಿದರು. ರೈತರು ವರ್ಷಕ್ಕೆ 2-3 ಬಾರಿ ಬೆಳೆಯನ್ನು ಕಟಾವು ಮಾಡುತ್ತಾರೆ. ಹೀಗಾಗಿ ಹಣ್ಣು ವರ್ಷಪೂರ್ತಿ ಲಭ್ಯವಿದೆ. ಅದರ ವಿನ್ಯಾಸ ಮತ್ತು ವಾಸನೆಯಿಂದಾಗಿ ಇದು ಜ್ಯೂಸ್ ತಯಾರಿಕೆಗೆ ಸೂಕ್ತವಾಗಿದೆ. ನೀಲಿ ದ್ರಾಕ್ಷಿಗೆ ಬೇಡಿಕೆಯು ವರ್ಷದಿಂದ ವರ್ಷಕ್ಕೆ ತುಂಬಾ ಹೆಚ್ಚುತ್ತಿದೆ, ಹೀಗಾಗಿ ರೈತರು ದ್ರಾಕ್ಷಿ ಬೆಳೆಯಲು ಆದ್ಯತೆ ನೀಡುತ್ತಾರೆ. ಮಾವಿನ ಹಣ್ಣಿಗಿಂತ ದ್ರಾಕ್ಷಿಯ ಬೇಡಿಕೆ ಹೆಚ್ಚಿದೆ. ದ್ರಾಕ್ಷಿಯ ಬೇಡಿಕೆ ಹೆಚ್ಚಿರುವ ಹಿನ್ನೆಲೆಯಲ್ಲಿ ಹೂ ತರಕಾರಿ ಬೆಳೆಯುತ್ತಿದ್ದ ಹೊಸೂರು ರೈತರು ದ್ರಾಕ್ಷಿ ಬೆಳೆಯಲ ಮುಂದಾಗಿದ್ದಾರೆ ಎಂದು ಹೇಳಿದರು. ಸುಮಾರು 15,000 ಎಕರೆಯಲ್ಲಿ ಸಾಗುವಳಿ ನಡೆಯುತ್ತಿದ್ದು, ವಾರ್ಷಿಕವಾಗಿ 500 ಎಕರೆ ಹೆಚ್ಚುವರಿಯಾಗಿ ಸೇರ್ಪಡೆಯಾಗುತ್ತಿದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

# ಗುತ್ತಿಗೆದಾರರಿಂದ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಕಾಮಗಾರಿಗಳ ಬಾಕಿ ಬಿಲ್ ಪಾವತಿಗೆ ಆಗ್ರಹಿಸಿ, ಕಾಮಗಾರಿಗಳ ಸ್ಥಗಿತಗೊಳಿಸಿ ಬಿಬಿಎಂಪಿ ಗುತ್ತಿಗೆದಾರರು ಸೋಮವಾರ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.ಕಳೆದ 2021ರ ಏಪ್ರಿಲ್ ನಂತರದ ಕಾಮಗಾರಿಗಳ ಬಿಲ್ ಮೊತ್ತದಲ್ಲಿ ಈವರೆಗೆ ಶೇ.75ರಷ್ಟನ್ನು ಮಾತ್ರ ಪಾವತಿ ಮಾಡಲಾಗಿದೆ.

ಉಳಿದ ಶೇ.25ನ್ನು ಪಾವತಿಸದೇ ಬಿಬಿಎಂಪಿ ನಿರ್ಲಕ್ಷ್ಯವಹಿಸುತ್ತಿದೆ. ಬಿಲ್ ಪಾವತಿಗೆ ಆಗ್ರಹಿಸಿ ಈಗಾಗಲೇ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಬಿಲ್ ಪಾವತಿಸುವವರೆಗೆ ವಾರ್ಡ್ ಮಟ್ಟದ ಕಾಮಗಾರಿಗಳು, ರಸ್ತೆ ನಿರ್ವಹಣೆ ಸೇರಿದಂತೆ ಎಲ್ಲಾ ರೀತಿಯ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಪ್ರತಿಭಟಿಸಲಾಗುತ್ತಿದೆ ಎಂದು ಗುತ್ತಿಗೆದಾರರು ಹೇಳಿದರು. ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್ ಮಾತನಾಡಿ, ಉಪಮುಖ್ಯಮಂತ್ರಿ ಅವರಿಗೆ ಈ ವಿಚಾರ ತಿಳಿದಿದೆ. ಹಣವನ್ನು ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದ್ದರು ಆದಾಗ್ಯೂ, ಸಮಸ್ಯೆ ಬಗೆಹರಿದಿಲ್ಲ ಎಂದು ಕಿಡಿಕಾರಿದರು.ಅಧಿಕಾರಿಗಳು ಮತ್ತು ರಾಜಕೀಯ ಮುಖಂಡರ ನಿರ್ಲಕ್ಷ್ಯದಿಂದ ಗುತ್ತಿಗೆದಾರರು ಸಂಕಷ್ಟದಲ್ಲಿದ್ದಾರೆ ಎಂದು ಆರೋಪಿ ಸಿದರು.



ಉದಯವಾಹಿನಿ ಚಿತ್ರ

ಕಾಮಗಾರಿಗಳಿಗಾಗಿ ಸಾಕಷ್ಟು ಮಂದಿ ಗುತ್ತಿಗೆದಾರರು ಅಪಾರ ಪ್ರಮಾಣದ ಸಾಲ ಪಡೆದು ಹಣ ಹೂಡಿದ್ದಾರೆ, ಈಗ ಬಾಕಿ ಅದರ ಇಎಂಐ ಕಟ್ಟಬೇಕಿದೆ. ಬಿಬಿಎಂಪಿ ಬಿಲ್ ಗಳನ್ನು ತೆರವುಗೊಳಿಸದ ಕಾರಣ, ಎಲ್ಲಾ ಕೆಲಸಗಳನ್ನು ನಿಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.ಪ್ರತಿಭಟನೆ ವೇಳೆ ಪಾಲಿಕೆ ವಿರುದ್ಧ ಗುತ್ತಿಗೆದಾರರು ಘೋಷಣೆ ಕೂಗುತ್ತಿದ್ದಂತೆಯೇ ಹಲಸೂರು ಗೇಟ್ ಪೊಲೀಸರು ಅವರನ್ನು ತಡೆದು, ವಶಕ್ಕೆ ಪಡೆದರು. ಬಳಿಕ ಸಂಜೆ ವೇಳೆಗೆ ಬಿಡುಗಡೆ ಮಾಡಿದರು.

ಪ್ರತಿಭಟನೆ ಕುರಿತು ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಅವರು, ಗುತ್ತಿಗೆದಾರರು ಸರ್ಕಾರಕ್ಕೆ ಬ್ಲ್ಯಾಕ್ ಮೇಲ್ ಮಾಡಬಾರದು. ಕಾಮಗಾರಿ ಕೆಲಸಕ್ಕೆ ಒಬ್ಬ ಗುತ್ತಿಗೆದಾರರ ವಿರೋಧ ವ್ಯಕ್ತಪಡಿಸಿದರೆ ಮತ್ತೊಬ್ಬರು ಗುತ್ತಿಗೆದಾರ ಕೆಲಸ ಕೈಗೆತ್ತಿಕೊಳ್ಳುತ್ತಾನೆಂದು ಹೇಳಿದ್ದಾರೆ.

# ಕಾಂಗ್ರೆಸ್‌ನಲ್ಲಿ ಮಹತ್ವದ ಬೆಳವಣಿಗೆ ಬದಲಾಗ್ತಾರಾ ಸಿಎಂ

## ಏನದು ಸತೀಶ್ ಜಾರಕಿಹೊಳಿ ತಂತ್ರಗಾರಿಕೆ, ಅರ್ಜಿಯ ವಿಚಾರಣೆ ಹೈಕೋರ್ಟ್ ಮುಂದೂಡಿಕೆ

• ಉದಯವಾಹಿನಿ, ಬೆಂಗಳೂರು

ಮುಡಾ ನಿವೇಶನ ಹಂಚಿಕೆಯಲ್ಲಿನ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದ ರಾಜ್ಯಪಾಲರ ಆದೇಶವನ್ನು ವಜಾಗೊಳಿಸುವಂತೆ ಮನವಿ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಹೈಕೋರ್ಟ್ ಮುಂದೂಡಿದೆ.

**ನಾಯಕತ್ವ ಬದಲಾವಣೆ ಸಾಧ್ಯತೆ**

ಇನ್ನೇನು ಕೆಲವೇ ದಿನಗಳಲ್ಲಿ ಈ ಪ್ರಕರಣದ ಪೂರ್ಣ ಚಿತ್ರಣ ಅರ್ಥಾತ್ ತೀರ್ಪು ಹೊರಬರಲಿದೆ. ಆದರೆ ರಾಜ್ಯ ಕಾಂಗ್ರೆಸ್‌ನಲ್ಲಿ ಮಾತ್ರ ರಾಜಕೀಯ ಚಟುವಟಿಕೆ ಗರಿಗೆದರಿದೆ. ಒಂದು ವೇಳೆ ಹೈಕೋರ್ಟ್ ತೀರ್ಪು ಸಿಎಂ ಸಿದ್ದರಾಮಯ್ಯ ವಿರುದ್ಧ ಬಂದರೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ಮುನ್ನೆಲೆಗೆ ಬರಲಿದ್ದು, ಆದರೆ ಅದಕ್ಕೂ ಮುನ್ನವೇ ಮುಂದಾಗುವ ರಾಜಕೀಯ ಬೆಳವಣಿಗೆಗಳನ್ನು ಸದುಪಯೋಗ ಪಡಿಸಿಕೊಳ್ಳಲು ಸರ್ಕಾರದ ಒಳಗೆಯೇ ಹಲವು ನಾಯಕರು ಪ್ರಯತ್ನಿಸುತ್ತಿದ್ದಾರೆ. ಸಿದ್ದರಾಮಯ್ಯ ವಿರುದ್ಧ ತೀರ್ಪು ಬಂದಿದ್ದೇ ಆದಲ್ಲಿ ನಾಯಕತ್ವ ಬದಲಾವಣೆಯಾಗುವ ಸಾಧ್ಯತೆಯೂ ದಟ್ಟವಾಗಿದ್ದು, ಈ ಹಿನ್ನೆಲೆ ಸಚಿವ ಸತೀಶ್ ಜಾರಕಿಹೊಳಿ ಅವರ ನಡೆಯೂ ಕುತೂಹಲ ಮೂಡಿಸಿದೆ.

ಸದ್ದಿಲ್ಲದೆ ಸಿಎಂ ಗಾದಿಗೆ ಸತೀಶ್ ಜಾರಕಿಹೊಳಿ ತೆರೆಮರೆಯ ಕಸರತ್ತು ನಡೆಸುತ್ತಿದ್ದು, ಇದರ ಭಾಗವಾಗಿ ನಿನ್ನೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿಯಾಗಿರುವ ಸತೀಶ್ ಜಾರಕಿಹೊಳಿ, ನಿನ್ನೆ ಮಧ್ಯಾಹ್ನ ಉಭಯ ನಾಯಕರ ಜೊತೆ ಮಾತುಕತೆ ನಡೆಸಿ ತಡರಾತ್ರಿ ವಾಪಾಸ್ ಆಗಿದ್ದಾರೆ. ಮತ್ತೊಂದೆಡೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಕೂಡ ಸಿಎಂ ಸ್ಥಾನಕ್ಕೆ ತೆರೆಮರೆಯ ಪ್ರಯತ್ನ ನಡೆಸುತ್ತಿದ್ದು, ಇತ್ತೀಚೆಗೆ ಕಾಂಗ್ರೆಸ್ ನಾಯಕ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದ ಪರಮೇಶ್ವರ್, ಹೈಕೋರ್ಟ್ ತೀರ್ಪು ವ್ಯತಿರಿಕ್ತವಾಗಿ ಬಂದ್ರೆ ಮುಂದಾಗುವ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಿ ತಾನೂ ಸಿಎಂ ಸ್ಥಾನದ ಆಕಾಂಕ್ಷಿ ಎಂಬುದರ ಬಗ್ಗೆ ಮಾತನಾಡಿದ್ದರು ಎಂದು ಹೇಳಲಾಗಿದೆ.

ಇದೆಲ್ಲದರ ನಡುವೆ ಇದೀಗ ನವದೆಹಲಿಗೆ ದಿಢೀರ್ ಪ್ರಯಾಣ ಬೆಳೆಸಿ ಹೈಕಮಾಂಡ್ ಭೇಟಿಯಾಗಿರುವ ಸತೀಶ್ ಜಾರಕಿಹೊಳಿ ಅವರ ನಡೆ ಕುತೂಹಲ ಮೂಡಿಸಿದ್ದು, ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದೇ ಆದಲ್ಲಿ, ಸಿಎಂ ಸ್ಥಾನಕ್ಕೆ ನನ್ನನ್ನ ಪರಿಗಣಿಸಿ ಎಂದು ಗಂಭೀರವಾಗಿ ಒತ್ತಡ ಹೇರಿದ್ದಾರೆ ಎನ್ನಲಾಗಿದೆ. ಪ್ರಸ್ತುತ ರಾಜ್ಯ ರಾಜಕೀಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಮಧ್ಯೆ ಸಿಎಂ ವಿರುದ್ಧ ತೀರ್ಪು ಬಂದರೆ



**ಮತ್ತೊಂದೆಡೆ ಕಾಂಗ್ರೆಸ್ ಹಿರಿಯ ಶಾಸಕ ವಿ.ಆರ್.ದೇಶಪಾಂಡೆ ಕೂಡ ನಾನು ಸಿಎಂ ಸ್ಥಾನದ ಆಕಾಂಕ್ಷಿ ಎಂದು ಬಹಿರಂಗವಾಗಿಯೇ ಹೇಳಿಕೊಂಡಿದ್ದಾರೆ. ನಡುವೆ ಐತಿಹಾಸಿಕ ದೇವಾಲಯಗಳನ್ನ ಸುತ್ತಿ ಬಂದಿರುವ ಡಿಸಿಎಂ ಡಿಕೆ ಶಿವಕುಮಾರ್, ತಾನು ಸಿಎಂ ಸ್ಥಾನದ ಆಕಾಂಕ್ಷಿ ಎಂದು ಎಲ್ಲಿಯೂ ಹೇಳಿಕೊಂಡಿಲ್ಲವಾದರೂ, ಪಕ್ಷದ ನಾಯಕನಾಗಿ, ಪಕ್ಷನಿಷ್ಠ ಸದಸ್ಯನಾಗಿ ನಡೆದುಕೊಂಡಿದ್ದಾರೆ. ಅವರ ಕೆಲಸ ನಡೆಯೇ ಸಿಎಂ ಸ್ಥಾನದ ಆಕಾಂಕ್ಷಿ ಎಂಬುದನ್ನು ನಿರೂಪಿಸುತ್ತಿದೆ.**

### ಸತೀಶ್ ಜಾರಕಿಹೊಳಿ ಸಿಎಂ ಹುದ್ದೆಗೆ ಪ್ರಯತ್ನ

**ನಿನ್ನೆಯ ಸಭೆಯಲ್ಲಿ ಪ್ರಸ್ತುತ ರಾಜ್ಯ ರಾಜಕೀಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನ ಸತೀಶ್ ಜಾರಕಿಹೊಳಿ ಉಭಯ ನಾಯಕರಿಗೆ ವಿವರಿಸಿದ್ದು, ಹೈಕೋರ್ಟ್ ತೀರ್ಪು ವ್ಯತಿರಿಕ್ತವಾಗಿ ಬಂದ್ರೆ ಸಿಎಂ ಸಿದ್ದರಾಮಯ್ಯ ಅವರಿಗೆ ನೈತಿಕತೆಯ ಪ್ರಶ್ನೆ ಎದುರಾಗುತ್ತದೆ. ಆಗ ಸಿಎಂ ಸ್ಥಾನಕ್ಕೆ ಅವರು ರಾಜೀನಾಮೆ ಕೊಡುವ ಪ್ರಸಂಗ ಎದುರಾಗಬಹುದು. ಅಂತಹ ಸನ್ನಿವೇಶ ಬಂದಿದ್ದೇ ಆದಲ್ಲಿ ಹೈಕಮಾಂಡ್ ಕೂಡ ಪ್ಲಾನ್ ಬಿ ಮಾಡಿದ್ದು, ಹೀಗಾಗಿ ಸಿಎಂ ಜೊತೆಗಿದ್ದುಕೊಂಡೇ ಸತೀಶ್ ಜಾರಕಿಹೊಳಿ ಸಿಎಂ ಹುದ್ದೆಗೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ.**

ಮುಂದಾಗುವ ರಾಜಕೀಯ ಬೆಳವಣಿಗೆಗಳ ದೃಷ್ಟಿಯಿಂದ ಕಾಂಗ್ರೆಸ್‌ನಲ್ಲಿ ಸಿಎಂ ಹುದ್ದೆಯ ಆಕಾಂಕ್ಷಿಗಳ ಕಸರತ್ತು ಬಿರುಸು ಪಡೆದುಕೊಂಡಿದೆ.

ಅಂತರಾಳದಿಂದ.. EDITORIAL

# ಕೇಂದ್ರದ ತೆರಿಗೆ ನೀತಿ ಒಕ್ಕೂಟ ವ್ಯವಸ್ಥೆಗೆ ಮಾರಕ



ಈ ಕುರಿತು ರಾಜ್ಯಕ್ಕೆ ಭೇಟಿ ನೀಡಿದ 16ನೇ ಹಣಕಾಸು ಆಯೋಗದ ಗಮನಕ್ಕೆ ತಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯಕ್ಕೆ ಬರಬೇಕಾದ ತೆರಿಗೆ ಆದಾಯದ ಶೇ. 60ರಷ್ಟು ಪಾಲನ್ನು ನೀಡಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸಿದ್ದಾರೆ.

ತೆರಿಗೆ ಪಾಲು ಹಂಚಿಕೆಯ ಕುರಿತು ಹಾಗೂ ಸಹಾಯಾನುದಾನ ಪ್ರಮಾಣ ನಿರ್ಧರಿಸುವ ಸಂಬಂಧ ರಾಜ್ಯಗಳ ಜೊತೆ ಸಮಾಲೋಚನೆ ನಡೆಸಿರುವ ಅರವಿಂದ ಪನಗರಿಯಾ ಅವರ ನೇತೃತ್ವದ 16ನೇ ಹಣಕಾಸು ಆಯೋಗದ ಮುಂದೆ ಮುಖ್ಯಮಂತ್ರಿಗಳು ವಾಸ್ತವ ಸ್ಥಿತಿಯನ್ನು ಬಿಚ್ಚಿಟ್ಟಿದ್ದಾರೆ. ಮುಖ್ಯಮಂತ್ರಿಗಳು ಹೇಳಿದಂತೆ ಕರ್ನಾಟಕ ಕೇಂದ್ರಕ್ಕೆ ಒಂದು ರೂಪಾಯಿ ನೀಡಿದರೆ ರಾಜ್ಯಕ್ಕೆ ವಾಪಸ್ ಬರುವುದು ಕೇವಲ 15 ಪೈಸೆ ಮಾತ್ರ. ಹಿಂದುಳಿದ ರಾಜ್ಯಗಳಿಗೆ ಹೆಚ್ಚಿನ ನೆರವು ನೀಡಲು ನಮ್ಮ ಅಭ್ಯಂತರವಿಲ್ಲ. ಆದರೆ ಕರ್ನಾಟಕದ ಹಿತಾಸಕ್ತಿಯನ್ನು ಬಲಿಕೊಟ್ಟು ನೆರವು ನೀಡುವುದು ಸರಿಯಲ್ಲ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಾತು ನ್ಯಾಯಸಮ್ಮತವಾಗಿದೆ. ಹಲವಾರು ಬಾರಿ ಮನವಿ ಮಾಡಿಕೊಂಡಾಗಲೂ 15ನೇ ಹಣಕಾಸು ಆಯೋಗವು ರಾಜ್ಯದ ಬೇಡಿಕೆಗೆ ಸ್ಪಂದಿಸಲಿಲ್ಲ. ಕರ್ನಾಟಕದ ಪಾಲಿನ ಶೇ. 4.713 ಅನುದಾನ ನೀಡದೆ ಶೇ. 3.647 ಮಾತ್ರ ನೀಡಿತ್ತು. ಇದರಿಂದ ಐದು ವರ್ಷಗಳ ಕಾಲಾವಧಿಯಲ್ಲಿ ರಾಜ್ಯಕ್ಕೆ ಎಂಭತ್ತು ಸಾವಿರ ಕೋಟಿ ರೂ. ನಷ್ಟವಾಗಿದೆ ಈ ಅನ್ಯಾಯವನ್ನು ಸರಿಪಡಿಸಬೇಕು. 15ನೇ ಹಣಕಾಸು ಆಯೋಗ ನಿಗದಿ ಮಾಡಿದ್ದ ಮಾನದಂಡಗಳನ್ನು ಪರಿಷ್ಕರಿಸಬೇಕೆಂದು ಮುಖ್ಯಮಂತ್ರಿಗಳ ಆಗ್ರಹವಾಗಿದೆ. ಭಾರತ ಒಕ್ಕೂಟದ ಕೆಲವು ರಾಜ್ಯಗಳು ಅದರಲ್ಲೂ ವಿಶೇಷವಾಗಿ ದಕ್ಷಿಣದ ರಾಜ್ಯಗಳು ಕೇಂದ್ರದಿಂದ ತಮಗೆ ನ್ಯಾಯಯುತವಾಗಿ ಬರಬೇಕಿದ್ದ ತೆರಿಗೆ ಪಾಲು ಬರುತ್ತಿಲ್ಲ ಎಂದು ಆಕ್ಷೇಪಿಸುತ್ತಲೇ ಬಂದಿವೆ. ಕೆಲವು ಸಲ ಪ್ರತಿಭಟನೆಯನ್ನೂ ನಡೆಸಿವೆ. ತೆರಿಗೆ ಸಂಗ್ರಹದಲ್ಲಿ ತಮ್ಮ ಪಾಲಿನ ಅನುದಾನವನ್ನು ಕೇಂದ್ರ ಸರಕಾರ ನ್ಯಾಯ ಸಮ್ಮತವಾಗಿ ಹಂಚಿಕೆ ಮಾಡುತ್ತಿಲ್ಲ ಎಂಬುದು ಈ ರಾಜ್ಯಗಳ ಆಕ್ಷೇಪಕ್ಕೆ ಕಾರಣವಾಗಿದೆ. ಕಾರ್ಪೊರೇಟ್ ತೆರಿಗೆ, ಆದಾಯ ತೆರಿಗೆ, ಕೇಂದ್ರೀಯ ಜಿಎಸ್‌ಟಿ, ಸಮಗ್ರ ಸರಕು ಮತ್ತು ಸೇವಾ ತೆರಿಗೆ(ಐಜಿಎಸ್‌ಟಿ) ಕೇಂದ್ರೀಯ ಪಾಲಿನಲ್ಲಿ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತದೆ. ಈ ಹಂಚಿಕೆ ನಡೆಯುವುದು ಹಣಕಾಸು ಆಯೋಗದ ಶಿಫಾರಸಿನ ಮೇಲೆ. ಆದರೆ 15ನೇ ಹಣಕಾಸು ಆಯೋಗ ಕರ್ನಾಟಕಕ್ಕೆ ನಿಗದಿ ಪಡಿಸಿದ್ದ ಅನುದಾನವನ್ನು ನೀಡಲಿಲ್ಲ ಎಂಬುದು ಕರ್ನಾಟಕದ ಅಸಮಾಧಾನಕ್ಕೆ ಕಾರಣ. ಸಂವಿಧಾನದ 270ನೇ ವಿಧಿಯ ಪ್ರಕಾರ ಕೇಂದ್ರ ಮತ್ತು ರಾಜ್ಯಗಳ ತೆರಿಗೆ ಹಂಚಿಕೆಯ ಬಗ್ಗೆ ಉಲ್ಲೇಖಿಸಲಾಗಿದೆ.

> **15ನೇ ಹಣಕಾಸು ಆಯೋಗ ಕರ್ನಾಟಕಕ್ಕೆ, 5,495 ಕೋಟಿ ರೂ. ವಿಶೇಷ ಅನುದಾನಕ್ಕೆ ಶಿಫಾರಸು ಮಾಡಿತ್ತು. ಆದರೆ ಕರ್ನಾಟಕದಿಂದ ರಾಜ್ಯಸಭೆಗೆ ಹೋಗಿದ್ದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 15ನೇ ಹಣಕಾಸು ಶಿಫಾರಸು ಮಾಡಿದ್ದ ಅನುದಾನವನ್ನು ನೀಡಲಿಲ್ಲ. ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯವಾಗಿರುವುದರಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ ಎಂದು ದತ್ತಾಂಶಗಳ ಸಹಿತ ವರದಿಯನ್ನು ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳು ಆಯೋಗಕ್ಕೆ ನೀಡಿದ್ದಾರೆ.**

ಕೇಂದ್ರ ಸರಕಾರ ರಾಜ್ಯಗಳಿಗೆ ತೆರಿಗೆಯ ಪಾಲನ್ನು ಹಂಚುವುದಲ್ಲದೆ ಕೇಂದ್ರ ಹಣಕಾಸು ನಿಗದಿ ಪಡಿಸಿದ ಅನುದಾನವನ್ನೂ ನೀಡಬೇಕಾಗುತ್ತದೆ. ಆದರೆ ಕೇಂದ್ರ ಸರಕಾರ ವಸೂಲಿ ಮಾಡುವ ಸೆಸ್ ಮತ್ತು ಸರ್‌ಚಾರ್ಜ್‌ಗಳಲ್ಲಿ ರಾಜ್ಯಗಳಿಗೆ ಪಾಲು ನೀಡುವುದಿಲ್ಲ. ಈ ಬಗ್ಗೆ ಕರ್ನಾಟಕ ಮಾತ್ರವಲ್ಲ ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳು ಪ್ರತಿಭಟನೆ ಮಾಡುತ್ತಾ ಬಂದಿದ್ದರೂ ಕೇಂದ್ರ ಸರಕಾರ ನಿರ್ಲಕ್ಷ್ಯ ಧೋರಣೆ ತಾಳಿದೆ. ಕೇಂದ್ರ ಸರಕಾರ ಸಂಗ್ರಹಿಸುವ ತೆರಿಗೆಯಲ್ಲಿ ಶೇ. 41ರಷ್ಟು ಮೊತ್ತವನ್ನು ರಾಜ್ಯಗಳಿಗೆ 14 ಕಂತುಗಳಲ್ಲಿ ನೀಡಬೇಕೆಂದು 15ನೇ ಹಣಕಾಸು ಆಯೋಗ ವಿವಿಧ ಮಾನದಂಡಗಳ ಆಧಾರದಲ್ಲಿ ಶಿಫಾರಸು ಮಾಡಿತ್ತು. ಆದರೆ ಕರ್ನಾಟಕದಂಥ ದಕ್ಷಿಣದ ರಾಜ್ಯಗಳಿಗೆ ಹಣಕಾಸು ಆಯೋಗ ನಿಗದಿಪಡಿಸಿದ ಅನುದಾನ ಸಿಗಲಿಲ್ಲ. ಭಾರತ ಒಕ್ಕೂಟ ರಾಷ್ಟ್ರ ಎಂಬುದನ್ನು ಈಗಿರುವ ಕೇಂದ್ರ ಸರಕಾರ ಮರೆತಂತೆ ಕಾಣುತ್ತದೆ.

ಅನುದಾನ ಹಂಚಿಕೆಯಲ್ಲಿ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳನ್ನು ಕಡೆಗಣಿಸಿ ಉತ್ತರದ ರಾಜ್ಯಗಳಿಗೆ ಹೆಚ್ಚು ಅನುದಾನವನ್ನು ನೀಡಲಾಗುತ್ತದೆ. ದಕ್ಷಿಣದ ರಾಜ್ಯಗಳು ಮಾತ್ರವಲ್ಲ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ಪಂಜಾಬ್ ಮತ್ತು ಪಶ್ಚಿಮ ಬಂಗಾಳಗಳ ಬಗೆಗೂ ತಾರತಮ್ಯವನ್ನು ಮಾಡಲಾಗುತ್ತದೆ. ವಾಸ್ತವವಾಗಿ ಹೆಚ್ಚಿನ ಅನುದಾನವನ್ನು ಪಡೆದರೂ ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನದಂಥ ರಾಜ್ಯಗಳು ಅಭಿವೃದ್ಧಿಯ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ. ಇಂದಿಗೂ ಶಿಕ್ಷಣ, ಆರೋಗ್ಯ, ಸೇರಿದಂತೆ ಮೂಲ ಭೂತ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಹಿಂದೆ ಉಳಿದಿವೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್‌ರಂತೂ ಗುಡಿ, ಗುಂಡಾರಗಳನ್ನು ಕಟ್ಟುವಲ್ಲಿ ತೋರಿಸುವ ಆಸಕ್ತಿಯನ್ನು ಅಭಿವೃದ್ಧಿ ಕಾರ್ಯಗಳ ಬಗ್ಗೆ ತೋರಿಸುತ್ತಿಲ್ಲ. ಕರ್ನಾಟಕದ ಪಾಲಿನ ಅನುದಾನವನ್ನು ಪಡೆಯಲು ಬರೀ ಮುಖ್ಯಮಂತ್ರಿ ಗಳು ಪ್ರಯತ್ನಿಸಿದರೆ ಸಾಲದು.

ಸಂಸತ್ತಿನಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಸಂಸದರು ರಾಜಧಾನಿ ದಿಲ್ಲಿಯಲ್ಲಿ ಲಾಬಿ ಮಾಡಬೇಕು. ಆದರೆ ವಿಷಾದದ ಸಂಗತಿಯೆಂದರೆ ನಮ್ಮ ಸಂಸದರು ಈ ಬಗ್ಗೆ ಸ್ಪಂದಿಸಿರುವುದು ಅಪರೂಪ. ರಾಜ್ಯದಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರವಿದ್ದಾಗಲೂ ಪ್ರವಾಹ ಪರಿಹಾರ ನೀಡಲು ಮೋದಿ ಸರಕಾರ ಹಿಂದೆ ಮುಂದೆ ನೋಡಿತು. ಕೊರೋನ ಸಮಯದಲ್ಲಿ ಆಕ್ಸಿಜನ್ ನೀಡಲು ಸತಾಯಿಸಿತು. ಪ್ರಧಾನಿ ಅವರನ್ನು ಭೇಟಿಯಾಗಲು ದಿಲ್ಲಿಗೆ ಹೋದ ಆಗಿನ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಭೇಟಿಯ ಅವಕಾಶವೂ ಸಿಗಲಿಲ್ಲ. ಆಗ ರಾಜ್ಯದಿಂದ ಬಿಜೆಪಿ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾಗಿದ್ದರು. ಆ ಸಂಸದರುಗಳು ರಾಜ್ಯದ ಬೇಡಿಕೆಗೆ ಸ್ಪಂದಿಸಲಿಲ್ಲ ಮಾತ್ರವಲ್ಲ ''ರಾಜ್ಯದ ಖಜಾನೆಯಲ್ಲಿ ಸಾಕಷ್ಟು ಹಣವಿದೆ ಕೇಂದ್ರದ ನೆರವಿನ ಅಗತ್ಯವಿಲ್ಲ'' ಎಂದು ಹೇಳಿದ್ದರು.



ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ನಡವಳಿಕೆ, ತಿಳುವಳಿಕೆ ಇವುಗಳ ನಡುವೆ ಇರುವ ವ್ಯತ್ಯಾಸ ಅವಿನಾಭಾವ ಸಂಬಂಧ

• ಉದಯವಾಹಿನಿ, ವಿಶೇಷ

ನಡವಳಿಕೆ ಸರಿ ಇದ್ದಾಗ ಮಾತ್ರ ತಿಳುವಳಿಕೆ ಬರಲು ಸಾಧ್ಯ. ಸಂಸ್ಕಾರದಿಂದ ನಡವಳಿಕೆ ಬಂದರೆ ಜ್ಞಾನದಿಂದ ತಿಳುವಳಿಕೆ ಬರುತ್ತದೆ. ಸಂಸ್ಕಾರಕ್ಕೂ ಜ್ಞಾನಕ್ಕೂ ಅತ್ಯಂತ ನಿಕಟ ಸಂಬಂಧವಿದೆ. ಜ್ಞಾನ ಎಷ್ಟೇ ಇದ್ದರೂ ಸಂಸ್ಕಾರ ಸರಿ ಇಲ್ಲದಿದ್ದರೆ ಜ್ಞಾನಕ್ಕೆ ಬೆಲೆ ಇಲ್ಲ ಆದರೆ ಜ್ಞಾನಕ್ಕಿಂತ ಸಂಸ್ಕಾರವೇ ಶ್ರೀಮಂತ. ಈ ಹಿಂದಿನ ಕಾಲದಲ್ಲಿ ವಿದ್ಯಾ ಜ್ಞಾನದಲ್ಲಿ ಶ್ರೀಮಂತರಾಗಿರಲಿಲ್ಲ ಅವರೆಲ್ಲಾ ಸಂಸ್ಕಾರದಲ್ಲಿ ಶ್ರೀಮಂತರಾಗಿದ್ದರು. ಮನೆಗೆ ಬೀಗ ಹಾಕದೇ ಇಡೀ ಊರೇ ಅವಿಭಕ್ತ ಕುಟುಂಬವಾಗಿತ್ತು.

ಎಂದಿಗೂ ಜಾತಿ ಧರ್ಮ ಅಡ್ಡ ಬರಲೇ ಇಲ್ಲ. ಈಗ ಎಲ್ಲವೂ ಅಡ್ಡ ಬರುತ್ತಿದೆ ಒಬ್ಬರಿಗೂ ಶಾಂತಿ, ನೆಮ್ಮದಿ, ಸಂತೋಷ ಇಲ್ಲ. ಎಲ್ಲರೂ ವಿದ್ಯಾವಂತರೇ ಆದರೆ ಸಂಸ್ಕಾರದಲ್ಲಿ ಅವಿದ್ಯಾವಂತರಿಗಿಂತ ಕಡಿಮೆ ಅಂತರವಿದೆ. ನಮ್ಮ ನಮ್ಮ ನಡವಳಿಕೆಯು ಸದಾ ನಮ್ಮ ನಮ್ಮ ಹೃದಯ ಮೆಚ್ಚುವ, ನಮ್ಮ ನಮ್ಮ ಆತ್ಮ ಮೆಚ್ಚುವ, ನಮ್ಮ ನಮ್ಮ ಮನಸ್ಸು ಒಪ್ಪುವ ಮಿಗಿಲಾಗಿ ದೈವ ಮೆಚ್ಚುವ ಬದುಕಾಗಬೇಕು. ನಮ್ಮ ನಡವಳಿಕೆ ಸರಿ ಇದ್ದರೆ ನಡವಳಿಕೆಯು ತಿಳುವಳಿಕೆಗೆ ಕೈಬೀಸಿ ಕರೆಯುತ್ತದೆ. ನಮ್ಮ ನಡವಳಿಕೆಯು ಬದುಕಿನಲ್ಲಿ ಸದಾ ಅನುಭವ ಹೆಚ್ಚಾದಂತೆ ತಿಳುವಳಿಕೆ ಜ್ಞಾನದ ಭಂಡಾರಕ್ಕೆ ಸೇರಿಕೊಳ್ಳುತ್ತದೆ. ನಮ್ಮ ನಮ್ಮ ನಡವಳಿಕೆ ಸರಿ ಇದ್ದರೆ ಮಾತ್ರ ಸಮಾಜ ಗುರುತಿಸುತ್ತದೆ. ನಡವಳಿಕೆ ಸರಿ ಇಲ್ಲದಿದ್ದರೆ ತಿಳುವಳಿಕೆ ಬರಲು ಸಾಧ್ಯವಿಲ್ಲ. ಮಾನವ ಸಂಸ್ಕಾರದಿಂದ ಕೂಡಿರಬೇಕು ನಂತರ ಪಂಚ ಸಾಧನಗಳಾದ ದೇಹ, ಇಂದ್ರಿಯ, ಮಾತು, ಮನ ಮತ್ತು ಬುದ್ಧಿ ಇವುಗಳ ಸಾಧನಗಳಿಂದ ಪಂಚೇಂದ್ರಿಯಗಳನ್ನು ತಮ್ಮ ತಮ್ಮ ತಿಳುವಳಿಕೆಯಿಂದ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸಹಕಾರಿಯಾಗುತ್ತದೆ. ನಡವಳಿಕೆಯ ಬಗ್ಗೆ ಕೆಲವು ಉದಾಹರಣೆಗಳ ಮೂಲಕ ತಿಳಿಯುವುದಾದರೆ; ತಂದೆ ತಾಯಿಗಳಿಗೆ, ಪೋಷಕರಿಗೆ, ಗುರುಗಳಿಗೆ, ಹಿರಿಯರಿಗೆ ಗೌರವ ನೀಡಬೇಕಾದರೆ ನಡವಳಿಕೆ ಮುಖ್ಯ ವಿದ್ಯೆ ಕಲಿಯಬೇಕಾದರೆ ಶಾಲೆ ಗುರುಗಳ ನಡುವೆ ಒಳ್ಳೆಯ ನಡವಳಿಕೆ ಮುಖ್ಯ. ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳಲು ಉತ್ತಮ ನಡವಳಿಕೆ ಮುಖ್ಯ. ಇನ್ನೂ ತಿಳುವಳಿಕೆಯ ಬಗ್ಗೆ ಕೆಲವು ಉದಾಹರಣೆಗಳ ಮೂಲಕ ತಿಳಿಯುವುದಾದರೆ; ಬಾಲ್ಯ, ವಿದ್ಯಾಭ್ಯಾಸ, ಯವ್ವನ, ಮಧ್ಯ ವಯಸ್ಸು ಮತ್ತು ಮುಪ್ಪಿನವರೆಗೂ ಹಂತಂತವಾಗಿ ತಿಳುವಳಿಕೆ ಇದ್ದರೂ ಸಹ ತಿಳುವಳಿಕೆ ಜೊತೆಯಲ್ಲಿಯೇ ಬದುಕನ್ನು ಕಟ್ಟಿಕೊಂಡು ಸಾಗಬೇಕು ಸಾಗುತ್ತೇವೆ.

ತಿಳುವಳಿಕೆಗೆ ಪ್ರಾರಂಭ ಇಲ್ಲ ಮತ್ತು ಅಂತ್ಯವಿಲ್ಲ ಇದರ ಆಳ-ಅಗಲ ಅರಿತವರು ಇಲ್ಲ. ಕೊನೆಯ ಉಸಿರಿರುವವರೆಗೂ ಸಹ ಕಲಿಯುವುದೇ ತಿಳುವಳಿಕೆ. ಕಲಿಯುವುದು ಬೆಟ್ಟದಷ್ಟಿದೆ ಆದರೆ ನಾವು ನಮಗೆಷ್ಟು ಬೇಕು ಅಷ್ಟನ್ನು ಮಾತ್ರ ಕಲಿತು ಜೀವಿಸುತ್ತೇವೆ. ಹೀಗೆ ಸಾಗುತ್ತಾ ಇಲ್ಲಿ ಪೂರ್ಣ ಪ್ರಮಾಣವಾಗಿ ಎಲ್ಲಾ ರಂಗದಲ್ಲೂ ಕಲಿತವರಿಲ್ಲ.

ಉತ್ತಮ ನಡವಳಿಕೆ ಇದ್ದವರು ಸಂಸ್ಕಾರ, ಸದ್ಬುದ್ಧಿ, ಸನ್ಮಾರ್ಗ, ಶಿಸ್ತು ಕಲಿತವರು ಎಂದಿಗೂ ತಪ್ಪು ಮಾಡಲು ಇಷ್ಟಪಡುವುದಿಲ್ಲ.

ಅದೇ ತಿಳುವಳಿಕೆ ಇದ್ದವರು ತಪ್ಪು ಮಾಡುವುದು ಸಹಜ. ನಡವಳಿಕೆ ಮತ್ತು ತಿಳುವಳಿಕೆಗಳ ನಡುವೆ ಅವಿನಾಭಾವ ಸಂಬಂಧ ಇದ್ದರೂ ಸಹ ಹೋಲಿಕೆ ಯಾಗುವುದು ಕಷ್ಟ.

ಒಟ್ಟಾರೆ ನಡವಳಿಕೆ ಮತ್ತು ತಿಳುವಳಿಕೆಯ ವ್ಯತ್ಯಾಸವನ್ನು ಅರಿತು ನಡವಳಿಕೆ ಇದ್ದಾಗ ಮಾತ್ರ ತಿಳುವಳಿಕೆ ಬರಲು ಸಾಧ್ಯ ಎಂಬುದನ್ನು ಘಂಟಾಘೋಷವಾಗಿ ಸಾಬೀತು ಮಾಡಬಹುದು.



ಉದಯವಾಹಿನಿ ಚಿತ್ರ

> **ಸಂಬಂಧವನ್ನು ಬೆಳೆಸಿ ಮದುವೆ ಮಾಡಿಕೊಳ್ಳಲು ನಡವಳಿಕೆ ಮುಖ್ಯ. ಪ್ರೀತಿ ವಿಶ್ವಾಸ ಮಾಡಿ ಸ್ನೇಹ ಮಾಡಿಕೊಳ್ಳಲು ನಡವಳಿಕೆ ಮುಖ್ಯ. ವ್ಯಾಪಾರ ವ್ಯವಹಾರ ವಹಿವಾಟುಗಳನ್ನು ಪರಸ್ಪರ ನಡೆಸಬೇಕಾದರೆ ನಡವಳಿ ಕೆ ಮುಖ್ಯ. ನಡವಳಿಕೆ ಉತ್ತಮವಾಗಿದ್ದರೆ ಕೀರ್ತಿ, ಪದವಿ, ಅಧಿಕಾರ ಯಥಾಪ್ರಕಾರ ಬರುತ್ತದೆ. ನಡೆವಳಿಕೆ ಸರಿ ಇದ್ದರೆ ಕುಟುಂಬ, ಸಮಾಜ, ರಾಷ್ಟ್ರ, ಅಂತರಾಷ್ಟ್ರೀಯ ಮಿಗಿಲಾಗಿ ದೈವ ಮೆಚ್ಚುವ ಬದುಕಾಗುತ್ತದೆ ಇತ್ಯಾದಿ.**

# ಬೆಂಗಳೂರಿನಲ್ಲಿ ಮೂರು ದಿನಗಳ 5ನೇ ರೀ ಕಾಮರ್ಸ್ ಎಕ್ಸ್‌ಪೋಗೆ ಚಾಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪ್ರಕೃತಿಗೆ ತೀವ್ರ ಹಾನಿಯುಂಟು ಮಾಡುತ್ತಿರುವ ತ್ಯಾಜ್ಯವನ್ನು ಮರು ಸಂಸ್ಕರಣೆ, ಪುನರ್ ಬಳಕೆ, ಪುನರ್ ನಿರ್ಮಾಣ ಮಾಡುವ ಮತ್ತು ಜಾಗತಿಕ ಹವಾಮಾನ ಬದಲಾವಣೆ ತಡೆಗಟ್ಟುವ ಹಿನ್ನೆಯಲ್ಲಿ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಅಗತ್ಯವಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ನಗರದ ಲಲಿತ್ ಅಶೋಕದಲ್ಲಿ 5ನೇ ರೀ ಕಾಮರ್ಸ್ ಎಕ್ಸ್‌ಪೋ ಗೆ ಶುಭ ಕೋರಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆಗೆ ಇ ತ್ಯಾಜ್ಯ, ಬ್ಯಾಟರಿ, ಯಂತ್ರೋಪಕರಣಗಳ ಮರುಬಳಕೆ, ಸಂಸ್ಕರಣೆ, ಪುನರ್ ನಿರ್ಮಾಣ, ಪುನರ್ ಸ್ಥಾಪನೆ ಅತ್ಯಂತ ಅಗತ್ಯವಾಗಿದೆ. ಇದರಿಂದ ಆರ್ಥಿಕವಾಗಿಯೂ ಹಿತವಾಗಲಿದ್ದು, ಪರಿಸರ ಸಂರಕ್ಷಣೆಯಾಗಲಿದೆ ಎಂದರು. ಜಗತ್ತಿನಲ್ಲಿ ಹವಾಮಾನ ಬದಲಾವಣೆ ಅತಿ ದೊಡ್ಡ ಸವಾಲಾಗಿದ್ದು, ಉತ್ತರ ಕನ್ನಡದ ಶಿರೂರು, ಕೇರಳದ ವೈಯನಾಡು ಭಾಗದಲ್ಲಿ ಸಂಭವಿಸಿದ ಭೂ ಕುಸಿತ ನಮಗೆಲ್ಲರಿಗೂ ಎಚ್ಚರಿಕೆ ಗಂಟೆಯಾಗಿದೆ. ಎಲ್ಲರೂ ಜಾಗೃತರಾಗಲು ಇದು ಸಕಾಲ. ಗಾಳಿ, ನೀರಿನಲ್ಲಿ ಮಾಲೀನ್ಯ ಹೆಚ್ಚಾಗುತ್ತಿದ್ದು, ಇತ್ತೀಚೆಗೆ ಎಲೆಕ್ಟ್ರಾನಿಕ್, ಬ್ಯಾಟರಿ, ನಿರ್ಮಾಣ, ಕೈಗಾರಿಕಾ ಮಾಲೀನ್ಯ ಸಹ ತೀವ್ರಗೊಳ್ಳುತ್ತಿದೆ. ಜಗತ್ತಿಗೆ ಮಾರಕವಾಗಿರುವ ಈ ಮಾಲೀನ್ಯದ ವಿರುದ್ಧ ಇಡೀ ಮನುಕುಲ ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರಕೃತಿ, ಪರಿಸರ ಉಳಿದರೆ ಮಾತ್ರ ಜೀವನ, ಜೀವನೋಪಾಯ ಎರಡೂ ರಕ್ಷಿಸಲು ಸಾಧ್ಯ, ಅಭಿವೃದ್ಧಿಗೆ ತೊಡಕಾಗದಂತೆ, ಉತ್ಪಾದನೆಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾಗಿದೆ. ಸಂಸ್ಕರಣಾ ವಲಯದಲ್ಲಿ ಯುವ ಸಮೂಹಕ್ಕೆ ಉದ್ಯೋಗ ಸೃಜನೆ ಮಾಡಲು ಈ ವಲಯದಲ್ಲಿ ವಿಪುಲ ಅವಕಾಶವಿದೆ ಎಂದು ಹೇಳಿದರು.

> **ರೀ ಎಕ್ಸ್‌ಪೋ ಆಯೋಜಕರು ಮತ್ತು ಉರ್ಧ್ಯ ಮ್ಯಾನೇಜ್‌ಮೆಂಟ್ ಪ್ರೈವೆಟ್ ಲಿಮಿಟೆಡ್‌ನ ಸಿಇಒ ವೆಂಕಟರೆಡ್ಡಿ ಡಿ ಪಾಟೀಲ್ ಮಾತನಾಡಿ, ಸಂಸ್ಕರಣೆಯನ್ನು ಬಲಪಡಿಸುವುದು ನಮ್ಮ ಮೂಲ ಧ್ಯೇಯವಾಗಿದ್ದು, ಈ ನಿಟ್ಟಿನಲ್ಲಿ ಪಾಲುದಾರರ ಸಂಖ್ಯೆ ಹೆಚ್ಚಾಗಬೇಕು. ಮೊಬೈಲ್, ಲ್ಯಾಪ್ ಟಾಪ್ ಮತ್ತಿತರ ವಸ್ತುಗಳನ್ನು ಮರು ಸಂಸ್ಕರಣೆ ಮಾಡಿ ಮರು ಬಳಕೆಗೆ ಯೋಗ್ಯವಾದ ರೀತಿಯಲ್ಲಿ ಸಜ್ಜುಗೊಳಿಸಬೇಕಾಗಿದೆ. ಲ್ಯಾಪ್ ಟಾಪ್‌ಗಳು ಶಿಕ್ಷಣ, ಉದ್ಯೋಗ ಸೃಜನೆಗೆ ಅತ್ಯಂತ ಅಗತ್ಯವಾಗಿರುವ ಸಾಧನಗಳಾಗಿವೆ ಎಂದರು.**

# ದೇಶಕ್ಕೆ ಘಾತಕ 'ಅರ್ಬನ್ ನಕ್ಸಲರ' ಮುಖವಾಡ

• ಉದಯವಾಹಿನಿ, ಬೆಂಗಳೂರು

ಹಿಂದೆ ದೇಶ ಮತ್ತು ಆಡಳಿತಗಳ ವಿರುದ್ಧ ನಕ್ಸಲರು ಬಂಡಾಯವೆದ್ದು ಹೋರಾಟ ನಡೆಸುತ್ತಿದ್ದರು.

ಆಗ ನಕ್ಸಲರನ್ನು ಹಿಡಿದು ಅವರನ್ನು ಬಂಧಿಸುವುದು ಸರಕಾರಕ್ಕೆ ಸವಾಲಾಗಿತ್ತು. ಆದರೆ ಈಗ ಅಂತಹ ಶಸ್ತ್ರಾಸ್ತ್ರಧಾರಿ ನಕ್ಸಲರಿಗಿಂತ ನಗರ ನಕ್ಸಲರ ಹಾವಳಿ ಹೆಚ್ಚಾಗಿದೆ. ಒಂದು ಸಮುದಾಯ, ವ್ಯವಸ್ಥೆಯನ್ನು ಗುರಿಯಾಗಿಸಿ ವೈಚಾರಿಕ ಸ್ತರದಲ್ಲಿ ನಿರಂತರ ಟೀಕೆ ಟಿಪ್ಪಣಿಗಳನ್ನು ಮಾಡಿ ಆ ಸಮುದಾಯದ ಬಗ್ಗೆ ಸಮಾಜದಲ್ಲಿ ವಿಷಬೀಜ ಬಿತ್ತುವುದೇ ಈ ನಗರ ನಕ್ಸಲರ ಷಡ್ಯಂತ್ರವಾಗಿದೆ.

ಭಾರತದ ಏಳ್ಗೆ, ಸುರಕ್ಷತೆ ದೃಷ್ಟಿಯಿಂದ ಇಂತಹ ನಗರ ನಕ್ಸಲರ ಬೆಳವಣಿಗೆ ಅತ್ಯಂತ ಅಪಾಯಕಾರಿಯಾಗಿದೆ. ಕಳೆದ ಕೆಲವು ವರ್ಷಗಳಿಂದ ಇಂತಹ ನಗರ ನಕ್ಸಲರಿಂದಾಗಿಯೇ ದೇಶದಲ್ಲಿ ಅರಾಜಕತೆ, ಗಲಭೆಯಂತಹ ಅದೆಷ್ಟೋ ಘಟನೆಗಳು ನಡೆಯುತ್ತಿರುವುದು ನಾವು ನೋಡುತ್ತಿದ್ದೇವೆ.

ಜಾತ್ಯಾತೀತತೆಯ ಹೆಸರಿನಲ್ಲಿ ದ್ವೇಷ ಬಿತ್ತುವುದೇ ಇವರ ನಿತ್ಯಕರ್ಮವಾಗಿದೆ. ಪುಸ್ತಕ, ಟಿವಿ-ಚಾನೆಲ್, ಸೋಶಿಯಲ್ ಮೀಡಿಯಾ, ಕಾರ್ಯಕ್ರಮಗಳ ವೇದಿಕೆಗಳೇ ಇವರ ಮಾಧ್ಯಮಗಳಾಗಿವೆ. ಹಾಗಾಗಿ ಈ ನಕ್ಸಲ್ ವಾದವನ್ನು ತಡೆಯಲು ಇದಕ್ಕೆ ತಕ್ಕ ಉಪಾಯವೇನೆಂಬುದರ ದಿಶೆ ನೀಡಲು ಹಿಂದೂ ಜನಜಾಗೃತಿ ಸಮಿತಿ ದೇಶ ವಿರೋಧಿ ಷಡ್ಯಂತ್ರ, 'ಅರ್ಬನ್ ನಕ್ಸಲ್ ವಾದ' ಈ ವಿಶೇಷ ಕಾರ್ಯಕ್ರಮದ ಆಯೋಜನೆ ಮಾಡಿದೆ. ಈ ಕಾರ್ಯಕ್ರಮದಲ್ಲಿ ಖ್ಯಾತ ವಿಚಾರಕರು ಲೇಖಕರಾದ ಶ್ರೀಮತಿ ಎಸ್. ಆರ್. ಲೀಲಾ, ಯುವ ಬ್ರಿಗೇಡ್ ಸಂಸ್ಥಾಪಕರಾದ ಶ್ರೀ. ಚಕ್ರವರ್ತಿ ಸೂಲಿಬೆಲೆ ಇವರ ವಿಚಾರ ಮಂಥನವಾಗಲಿದೆ. ಇದಕ್ಕೆ ಸಮಸ್ತ ದೇಶ ಭಕ್ತರು ತಪ್ಪದೇ ಉಪಸ್ಥಿತರಿರಬೇಕೆಂದು ಹಿಂದೂ ಜನಜಾಗೃತಿ ಸಮಿತಿ ಕರೆ ನೀಡುತ್ತದೆ.







# ಶ್ರೀ ಗುರುರಾಯರ ಮಠದಿಂದ ಮಂತ್ರಾಲಯ ಯಾತ್ರೆ

• ಉದಯವಾಹಿನಿ, ಬೆಂಗಳೂರು

ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಿಂದ ಆರಾಧನೆಗೆ ವಿಶೇಷ ಸೇವೆ ಸಲ್ಲಿಸಿದ ಭಕ್ತಾದಿಗಳಿಗೆ ಮಂತ್ರಾಲಯ ಕ್ಷೇತ್ರ ರಾಯರ ಸನ್ನಿಧಿಗೆ ಪ್ರಯಾಣವನ್ನು ಬೆಳೆಸಿ ದೇವಿ ಮಂಚಾಲಮ್ಮನ ದರ್ಶನ, ಶ್ರೀ ಗುರು ರಾಯರ ದರ್ಶನ, ಶ್ರೀ ಮೂಲ ರಾಮದೇವರ ಪೂಜೆ, ತೀರ್ಥ ಪ್ರಸಾದ, ಅನ್ನಸಂತರ್ಪಣೆ, ನಂತರ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಅನುಗ್ರಹ ಸಂದೇಶದೊಂದಿಗೆ ಭಕ್ತರು ಫಲ ಮಂತ್ರಾಕ್ಷತೆ ಸ್ವೀಕರಿಸಿ ಸಂಜೆ ಮಹಾ ರಥೋತ್ಸವದಲ್ಲಿ ಭಾಗವಹಿಸಿ ಶ್ರೀ ರಾಘವೇಂದ್ರ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದರು. ಭಕ್ತರಿಗೆ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಶ್ರೀಮಠದ ವ್ಯವಸ್ಥಾಪಕರಾದ ಆರ್ ಕೆ ವಾದಿಂದ್ರಾಚಾರ್ಯರ, ಶ್ರೀ ನಂದಕಿಶೋರಾಚಾರ್ಯರ ನೇತೃತ್ವದಲ್ಲಿ ಸಿಬ್ಬಂದಿಗಳ ಸಹಕಾರದೊಂದಿಗೆ ನೆರವೇರಿತು.



ಉದಯವಾಹಿನಿ ಚಿತ್ರ

**ಭಕ್ತರಿಗೆ ಶ್ರೀಗಳಿಂದ ಅನುಗ್ರಹ**



# ಮಹಾಭಾರತ
## ಮಹಾಪ್ರಸ್ಥಾನಿಕಪರ್ವ

• ಹಿಂದಿನ ಸಂಚಿಕೆಯಿಂದ

ಯುಧಿಷ್ಠಿರನು, ಅರ್ಜುನ, ಕಾಲನ ಕಡಾಯಿಯಲ್ಲಿ ನಾವೆಲ್ಲ ಕರಗಿಹೋಗುತ್ತಿರುವೆವು ಅಲ್ಲವೆ ಬದುಕಿರಲು ಈಗ ನಮಗೆ ಪ್ರಿಯವಾದದ್ದು ಯಾವುದೂ ಉಳಿದಿಲ್ಲ. ಕೃಷ್ಣನ ಸಾವಿನೊಂದಿಗೆ ನಮ್ಮ ಜೀವನಗಳೂ ಕೊನೆಗೊಳ್ಳುವುದೇ ವಿಹಿತ'' ಎನ್ನಲು, ಅರ್ಜುನನು, ''ಹೌದಣ್ಣ. ಕೊನೆಗೆ ಜಯಶೀಲನಾಗಿರುವುದು ಕಾಲನೇ''ಎಂದನು. ಉಳಿದವರೂ ತಲೆದೂಗಿದರು. ಈ ಭೂಮಿಯನ್ನು ತೊರೆಯುವ ಕೊನೆಯ ಪಯಣ ಹೊರಡುವುದೆಂದು ಪಾಂಡವರು ನಿರ್ಧರಿಸಿದರು. ಯುಧಿಷ್ಠಿರನು ಎಲ್ಲಾ ಏರ್ಪಾಡುಗಳನ್ನೂ ಮಾಡಿದನು.

ಪರೀಕ್ಷಿತ್ತಿಗೆ ಪಟ್ಟಾಭಿಷೇಕ ಮಾಡಿಸಿ ಕಿರೀಟವನ್ನಿಟ್ಟನು. ಅವನ ರಕ್ಷಣೆಗೆಂದು ಯಯುತ್ಸುವನ್ನೂ, ಗುರುವಾಗಿ ಕೃಪನನ್ನೂ ನೇಮಕ ಮಾಡಿದನು. ತಾವು ಇನ್ನು ಎಲ್ಲವನ್ನೂ ತ್ಯಾಗಮಾಡಿ ಸ್ವರ್ಗಾಭಿಮುಖವಾಗಿ ಹೊರಡುತ್ತೇವೆ ಎಂದು ಪುರಜನರಿಗೆಲ್ಲ ಡಂಗುರ ಹೊಡೆಸಿ ತಿಳಿದನು. ಯಾರೂ ಅವರನ್ನು ತಡೆಯಲಾಗಲಿಲ್ಲ.

ಪಾಂಡವರು ಮಹಾಪ್ರಸ್ಥಾನಕ್ಕೆ ಸಿದ್ಧರಾದರು. ಮರಗಳ ತೊಗಟೆಯನ್ನುಟ್ಟು ಕೃಷ್ಣಾಜಿನವನ್ನು ಹೊದ್ದು ಅವರು ಅರಮನೆಯ ಮಹಾದ್ವಾರದಿಂದ ಹೊರಗೆ ಬಂದರು. ಆಭರಣಗಳನ್ನೆಲ್ಲ ತ್ಯಜಿಸಿ ಮರಗಳ ತೊಗಟೆಯನ್ನುಟ್ಟ ದ್ರೌಪದಿಯು ಪಕ್ಕದಲ್ಲಿದ್ದಳು. ಇಡೀ ನಗರವೇ ಶೋಕಾಕುಲವಾಯಿತು. ವರ್ಷಗಳ ಹಿಂದೆ ವನವಾಸಕ್ಕೆ ಹೊರಟಾಗಲೂ ಪಾಂಡವರು ಹೀಗೆಯೇ ಕಾಣುತ್ತಿದ್ದರಾದರೂ, ಈಗ ಅವರ ದಯದಲ್ಲಿ ಪರಮಶಾಂತಿ ನೆಲೆಸಿರುವುದನ್ನು ಅವರ ಮುಖದ ಅಪ್ರತಿಮ ಕಾಂತಿಯು ತೋರಿಸುತ್ತಿತ್ತು. ಪಾಂಡವರು ಹಸ್ತಿನಾಪುರಕ್ಕೆ ವಿದಾಯ ಹೇಳಿಕೆ ಧಮನಸ್ಸಿನಿಂದ ಹೆಜ್ಜೆ ಹಾಕುತ್ತ ಹೊರಟುಹೋದರು. ಮೊದಲು ಅವರು ದ್ವಾರಕೆಯ ಕಡೆಗೆ ನಡೆದರು. ನಗರವು ನೀರಿನಲ್ಲಿ ಮುಳುಗಿರುವುದನ್ನು ನೋಡಿದರು. ಸಮುದ್ರಕಿನಾರೆಯಲ್ಲಿ ಧೇನಿಸುತ್ತ ನಿಂತರು. ಹಳೆಯ ನೆನಪುಗಳು ದೀರ್ಘಕಾಲದ ಕನಸುಗಳು ಅವರನ್ನು ಕಾಡಿದವು. ಆಗ ಅಗ್ನಿಯು ಅವರ ಮುಂದೆ ಪ್ರತ್ಯಕ್ಷನಾಗಿ, ''ಅರ್ಜುನ ಗಾಂಡೀವ ಹಾಗೂ ಅಕ್ಷಯತೂಣೀರಗಳು ಇನ್ನೂ ನಿನ್ನ ಬಳಿಯೇ ಇವೆ. ನಾನು ಅವನ್ನು ನಿನಗಾಗಿ ವರುಣನಿಂದ ಪಡೆದಿದ್ದೆ. ಅವುಗಳ ಉದ್ದೇಶ ಪೂರ್ಣವಾಯಿತಲ್ಲವೆ? ನಿನಗೆ ಅವು ಇನ್ನು ಬೇಕಾಗುವುದಿಲ್ಲ. ಅವನ್ನು ವರುಣನಿಗೆ ಹಿಂದಿರುಗಿಸಿಬಿಡು'' ಎಂದನು. ಅರ್ಜುನನ ಹೃದಯ ಒಡೆಯುವಂತಾಯಿತು. ಆದರೂ ಸಮತ್ವವನ್ನು ಕಾಪಾಡಿಕೊಂಡು, ಗಾಂಡೀವ ಮತ್ತು ಅಕ್ಷಯತೂಣೀರಗಳಿಗೆ ಕಣ್ಣೀರಿಡುತ್ತ ಕೊನೆಯದಾಗಿ ನಮಸ್ಕರಿಸಿ, ಅವುಗಳನ್ನು ಸಮುದ್ರಕ್ಕೆ ಎಸೆದುಬಿಟ್ಟನು. ಅಲ್ಲಿಂದ ಪಾಂಡವರು ಉತ್ತರಕ್ಕೆ ಪ್ರಯಾಣ ಮಾಡಿ ಹಿಮವತ್ಪರ್ವತವನ್ನು ತಲುಪಿದರು. ಮೇರು ಪರ್ವತದ ಬಳಿಗೆ ಬಂದಾಗ, ದ್ರೌಪದಿಯು ಇದ್ದಕ್ಕಿದ್ದಂತೆ ಬಿದ್ದುಬಿಟ್ಟಳು. ಭೀಮನಿಗೆ ತುಂಬ ಆಘಾತವಾಯಿತು.

ಮುಂದುವರಿಯುವುದು...




ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

# ಶ್ರೀರಾಮ ಪಥ

ರಾಮಾಯಣದಲ್ಲಿ ಶ್ರೀರಾಮನ ವನವಾಸ ಆಯೋಧ್ಯೆಯಿಂದ ಶುರುವಾಗುತ್ತದೆ. ಅಲ್ಲಿಂದ ಹೊರಟವನು ಬದುಕಿನಲ್ಲಿ ಎಲ್ಲವನ್ನು ಕಳೆದು ಕೊಳ್ಳುತ್ತಾ ಸಾಗುತ್ತಾನೆ. ದಂಡಕಾರಣ್ಯದಲ್ಲಿ ಹೆಂಡತಿಯನ್ನೂ ಕಳೆದುಕೊಂಡಾಗ ಆತನ ಮಾನಸಿಕ ಸ್ಥಿತಿ ಅಲ್ಲೋಲಕಲ್ಲೋಲವಾಗುತ್ತದೆ. ಆಗ, ವೈದೇಹಿ ಏನಾದಳು ಅಂತ ಹುಡುಕುತ್ತಾ ಪಶ್ಚಿಮಘಟ್ಟದ ಮೂಲಕ ಕರ್ನಾಟಕಕ್ಕೆ ಪದಾರ್ಪಣೆ ಮಾಡುತ್ತಾನೆ. ರಾಮಚಂದ್ರ ಆಗ, ಬೆಳಗಾವಿಯ ಕಾಡಲ್ಲಿ ಮೊದಲು ಎದುರಾಗಿದ್ದ ಶಬರಿ. ಆ ಹಣ್ಣಾದ ಮುದುಕಿಯ ಎಂಜ ಲು ಹಣ್ಣನ್ನು ತಿಂದ ಮೇಲೆ ಶ್ರೀ ರಾಮನ ವ್ಯಕ್ತಿತ್ವ ಎಂಥದ್ದು ಅಂತ ಇಡೀ ಜಗತ್ತಿಗೆ ತಿಳಿದು ಹೋಯಿತು. ಆನಂತರ ಮಾತಂಗ ಪರ್ವತಕ್ಕೆ ಬಂದಾಗ ಹನುಮಂತ, ಅವನ ಸೇನೆ, ಜಾಂಬುವಂತ, ಸುಗ್ರೀವ ಹೀಗೆ ಎಲ್ಲರೂ ಜೊತೆಯಾದರು. ಸೀತೆಯ ಕುರುಹು ದೊರೆಯುವುದು ಇಲ್ಲೇ. ಹೀಗೆ, ಶ್ರೀರಾಮ ಎಲ್ಲವನ್ನೂ ಪಡೆದುಕೊಂಡು ದನುಷ್ಕೋಟಿಗೆ ಹೋಗಿ ಸೇತುವೆ ಕಟ್ಟಿ, ರಾವಣ ವಧೆ ಮಾಡುವುದೆಲ್ಲವೂ ಮುಂದೆ ನಡೆಯಿತು. ಇದಕ್ಕೆಲ್ಲಾ ಚಿಮ್ಮು ಹಲಗೆ ಈಗಿನ ಕರುನಾಡು. ರಾಮನ ಬದುಕನ್ನೇ ಬದಲಿಸಿದ ಕರ್ನಾಟಕದಲ್ಲಿ, ಆತ ಇಟ್ಟ ಹೆಜ್ಜೆಗಳನ್ನು ಹುಡುಕೋಣ

**ಶಬರಿ ಆಶ್ರಮ:** ಬೆಳಗಾವಿಯ ರಾಮದುರ್ಗದಿಂದ 14 ಕಿ.ಮೀ ಉತ್ತರಕ್ಕೆ ಗುನ್ನಾಗ ಹೆಸರಿನ ಊರಿದೆ. ಅದರ ಹತ್ತಿರದ ಸುರೇಬಾನ್ ಹತ್ತಿರದಲ್ಲಿ ಬೇರೀ ಹಣ್ಣಿನ ವನವಿದೆ. ಇದನ್ನು ಶಬರಿ ವನ ಅಂತಲೂ ಕರೆಯುತ್ತಾರೆ. ಇಲ್ಲಿಯೇ ಶಬರಿ ರಾಮನಿಗೋಸ್ಕರ ಕಾದು, ಬಂದ ನಂತರ ಹಣ್ಣನ್ನು ಕೊಟ್ಟದ್ದು ಎನ್ನುವ ಪ್ರತೀತಿ ಇದೆ. ಇಲ್ಲಿ ಶಬರಿ ದೇವಾಲಯ, ಶಬರಿ ಕೊಳ್ಳ ಕೂಡ ಇದೆ. **ಹಂಪಿ:** ತುಂಗಭದ್ರೆಯ ದಕ್ಷಿಣ ದಡದಲ್ಲಿ ಹಂಪಿ ಇದೆ. ವೆಂಕಟಾಪುರ ಮತ್ತು ವಿಜಯವಿಠ್ಠಲ ಸಂಕೀರ್ಣದಾಚೆ ವಾಲಿಕಾಷ್ಠ ಅಥವಾ ವಾಲಿದಿಬ್ಬ ಎಂದು ಕರೆಯಲ್ಪಡುವ ಈ ದಿನ್ನೆಯು ವಾಲಿಯನ್ನು ಸುಟ್ಟ ಬೂದಿಯಿಂದಾದುದು ಎಂಬ ಪ್ರತೀತಿ ಇದೆ. ವಿರೂಪಾಕ್ಷ ದೇವಾಲಯದ ರಥಬೀದಿಯ ಪೂರ್ವ ತುದಿಯಲ್ಲಿ ಮತಂಗಪರ್ವತ, ಹಂಪಿ ಪಶ್ಚಿಮಕ್ಕಿರುವ ಮಲಯವಂತ ಪರ್ವತ, ಹಂಪಿಯ ಸುಗ್ರೀವ ಗುಹೆ ಮತ್ತು ಸೀತಾ ಕೊಳ, ಹಂಪಿಯ ಕೇಂದ್ರದಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿ, ಹೊಸಪೇಟ-ಕಮಲಾಪುರ ಮಾರ್ಗದಲ್ಲಿ ಮಧುವನವಿದೆ. **ಆನೆ ಗೊಂದಿ:** ಹಂಪಿಯ ಉತ್ತರ ದಡದ ಮೇಲಿನ ಆನೆಗೊಂದಿ ಬಹಳ ಮುಖ್ಯ ಸ್ಥಳ. ಪಂಪಾ ಸರೋವರದತ್ತ ತಿರುಗುವ ಮುಖ್ಯರಸ್ತೆಯ ಬಳಿಯಿರುವ ಅಂಜನಾದ್ರಿ, ಬೆಟ್ಟವನ್ನು ಹನುಮನ ಜನ್ಮಸ್ಥಳವೆಂದು ನಂಬಲಾಗಿದೆ. ಆನೆಗೊಂದಿಯ ಪೂರ್ವಕ್ಕೆ ನದಿಯ ದಡದ ಮೇಲೆ ಕಟ್ಟಿದ ಕೋಟೆಗೆ ಚಂಚಲಕೋಟೆ ಎಂದು ಹೆಸರು. ಸೀತಾ ಶೋಧನೆಯ ನಿಮಿತ್ತ ಅಲೆದಾಡುತ್ತಿದ್ದ ರಾಮಲಕ್ಷ್ಮಣರನ್ನು ಸುಗ್ರೀವ ಇಲ್ಲಿ ಮೊದಲು ಕಂಡಾಗ, ಕ್ಷಣಕಾಲ ಅವರನ್ನು ತನ್ನ ಸೋದರ ವಾಲಿಯ ಗೂಢಚಾರರೆಂದು ಭ್ರಮಿಸಿದನಂತೆ ಹೀಗೆ ಅಚಾತುರ್ಯದಿಂದ ಸಂದೇಹಪಟ್ಟುದ್ದಕ್ಕಾಗಿ ನಂತರ ಪಶ್ಚಾತ್ತಾಪಪಟ್ಟನೆನ್ನಲಾಗಿದೆ. ವೆಂಕಟಾಪುರ ಗ್ರಾಮಕ್ಕೆ ಹೊಂದಿಕೊಂಡಿರುವ ತಾಳೆವನದಲ್ಲಿ ಭಿಕ್ಷುಕನ ವೇಷದಲ್ಲಿ ಮಹಾಕಾವ್ಯದ ನಾಯಕರನ್ನು ಹನುಮಂತ ಭೆಟ್ಟಿಯಾದನೆಂಬ ದಂತಕತೆ ಇದೆ. ವಾಲಿ ಮತ್ತು ಸುಗ್ರೀವರ ಕೊನೆಯ ಕಾದಾಟ ಮತ್ತು ರಾಮವಾಲಿಯನ್ನು ವಧಿಸಿದ್ದು ಇಲ್ಲಿಯೇ ಎಂದೂ ನಂಬಲಾಗುತ್ತದೆ.



**ಮತಂಗ ಪರ್ವತ:** ದುಂದುಭಿ ಎಂಬ ರಾಕ್ಷಸನ ತಲೆಯನ್ನು ಮತಂಗಪರ್ವತದ ಮೇಲೆ ಎಸೆದಿದ್ದಕ್ಕೆ ಮತಂಗಮುನಿ ಕೋಪಗೊಂಡು, ಆ ಪರ್ವತವನ್ನು ವಾಲಿ ಪ್ರವೇಶಿಸಕೂಡದೆಂಬ ನಿರ್ಬಂಧ ಹಾಕಿದ್ದ. ಈ ಕಾರಣದಿಂದ ವಾಲಿಯ ಆಕ್ರಮಣದಿಂದ ಬಚಾವಾಗಲು ಸುಗ್ರೀವ ಮತ್ತು ಹನುಮಂತ ಇಲ್ಲಿ ಆಶ್ರಯ ಪಡೆದರು. ಸೀತೆ ಕೆಳಗೆ ಬೀಳಿಸಿದ ಆಭರಣಗಳನ್ನು ಶೇಖರಿಸಿದ ವಾನರರು ಅವನ್ನೆಲ್ಲ ಇಲ್ಲಿಯ ಸುಗ್ರೀವ ಗುಹೆಯೊಳಗೆ ಕಾಯ್ದಿಟ್ಟರು. ಅಲ್ಲದೆ, ಸೀತಾ ಕೊಳದ ಬಳಿಯ ಬಂಡೆಯೊಂದರ ಮೇಲೆ ಕಾಣುವ ಪ್ರಾಕೃತಿಕ ಬಿಳಿಗೆರೆಗಳು ರಾವಣ ಅಪಹರಿಸಿಕೊಂಡು ಒಯ್ಯುವಾಗ ಸೀತೆಯ ಸೀರೆಯ ಸೆರಗು ಮೂಡಿಸಿದ ಗುರುತುಗಳೆಂದು ನಂಬಲಾಗುತ್ತದೆ. ರಾಮ ಲಕ್ಷ್ಮಣರು ಬೆಟ್ಟದಲ್ಲಿ ಚಾತುರ್ಮಾಸ ಕಳೆದರು. ಆ ಸಮಯದಲ್ಲಿ, ಲಕ್ಷ್ಮಣ ಬಿಟ್ಟ ಬಾಣದಿಂದಲೇ ಬೆಟ್ಟದಲ್ಲಿರುವ ನೀರಿನ ಬುಗ್ಗೆ ಸೃಷ್ಟಿಯಾಯಿತಾ ಎನ್ನುವ ಪ್ರತೀತಿ ಇದೆ.

**ಕರ ಸಿದ್ದೇಶ್ವರ ಮಂದಿರ:** ಚಿತ್ರದುರ್ಗ ಜಿಲ್ಲೆ ಹೊಸದುರ್ಗದಿಂದ 25 ಕಿ.ಮೀ ದೂರದಲ್ಲಿ ರಾಮಗಿರಿ ಹೆಸರಿನ ಪರ್ವತ ಇದೆ. ಶ್ರೀರಾಮನು ಲಂಕೆಗೆ ಹೋಗುವಾಗ ಇಲ್ಲಿ ಶಿವನನ್ನು ಪೂಜಿಸಿದ್ದ ಎನ್ನುವ ಪ್ರತೀತಿ ಇದೆ. ಹೀಗಾಗಿ ರಾಮಗಿರಿ ಅಂತಲೂ ದೇವಸ್ಥಾನದ ಹೆಸರು ರಾಮೇಶ್ವರ ಅಂತಲೂ ಆಗಿದೆ. **ಹಾಲು ರಾಮೇಶ್ವರ:** ಇದು ಕೂಡ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಿಂದ 11 ಕಿ.ಮೀ ದೂರದಲ್ಲಿ ಕಾಡಿನ ಮಧ್ಯೆ ದೇವಾಲಯವಿದೆ. ಇಲ್ಲಿ ಶ್ರೀರಾಮನಿಂದ ಶಿವಲಿಂಗಕ್ಕೆ ಪೂಜೆ ನಡೆದಿದ್ದರಿಂದ ಈ ಸ್ಥಳಕ್ಕೆ ಹಾಲು ರಾಮೇಶ್ವರ ಎಂಬ ಹೆಸರು ಬಂದಿದೆಯಂತೆ.

**ರಾಮನಾಥಪುರ:** ಕಿಷ್ಕಿಂದೆಯ ನಂತರ ಶ್ರೀರಾಮನು ಕಾವೇರಿ ನದಿಯ ದಡದ ಮೂಲಕವೇ ಲಂಕೆಯತ್ತ ಸಾಗಿದ್ದು.

ವಾನರ ಸೈನ್ಯದ ಜೊತೆ ಆಗಮಿಸಿದ ರಾಮನು ಅರಕಲಗೂಡಿನ ತಾಲ್ಲೂಕಿನ ರಾಮನಾಥಪುರದಲ್ಲಿ ಶಿವಲಿಂಗ ಸ್ಥಾಪಿಸಿ ಪೂಜಿಸಿದನಂತೆ. ಈ ಸ್ಥಳಕ್ಕೆ ಎರಡು ಬಾರಿ ಬಂದಿದ್ದನೆಂದು ಹೇಳುತ್ತಾರೆ.

**ಲಕ್ಷ್ಮಣೇಶ್ವರ:** ಈ ದೇವಾಲಯ ಇರುವುದು ರಾಮನಾಥಪುರ ಕಾವೇರಿ ನದಿಯ ಇನ್ನೊಂದು ಭಾಗದಲ್ಲಿ. ಶ್ರೀ ರಾಮ ಲಕ್ಷ್ಮಣರು ಇಲ್ಲಿ ಓಡಾಡಿದರು ಹಾಗೂ ಇಲ್ಲಿಯೇ ಅವರು ಶಿವನ ಪೂಜೆ ಮಾಡಿದ್ದಾರೆ ಎಂಬ ಪ್ರತೀತಿ ಇದೆ. ಲಕ್ಷ್ಮಣ ಶಿವನ ಪೂಜೆಯ ಸಲುವಾಗಿ ಸ್ಥಾಪಿಸಿದ ದೇವಾಲಯ ಈಗಿರುವ ಲಕ್ಷ್ಮಣೇಶ್ವರ ದೇಗುಲ ಎನ್ನುವ ಪ್ರತೀತಿ ಇದೆ. **ಧನುಷ್ಕೋಟಿ:** ಮೇಲುಕೋಟೆಯಿಂದ ಇಲ್ಲಿಂದ 3. ಕಿ.ಮೀ ದೂರದ ಕಾಡಿನಲ್ಲಿರುವ ಬೆಟ್ಟವೊಂದರಲ್ಲಿ ಶ್ರೀರಾಮ ತನ್ನ ಬಾಣ ಬಿಡುವ ಮೂಲಕ ಹೊರ ತೆಗೆದ ನೀರಿನ ಚಿಲುಮೆ ಈಗಲೂ ಕಾಣಬಹುದು. **ಚುಂಚನಕಟ್ಟೆ:** ಶ್ರೀರಾಮ ಕಾವೇರಿ ಕೃಷ್ಣರಾಜನ ನಗರದಿಂದ ನದಿಯ ದಡದಲ್ಲಿ ತಪಸ್ಸು ಮಾಡುತ್ತಿದ್ದ ಋಷಿಮುನಿಗಳಿಗೆ ಕಾಟ ಕೊಡುತ್ತಿದ್ದ ಚುಂಚಿ ಎಂಬ ಹೆಸರಿನ ರಾಕ್ಷಸ ದಂಪತಿಗೆ ಸದುಪದೇಶ ನೀಡಿ ಋಷಿ ಮುನಿಗಳನ್ನು ರಾಮ ರಕ್ಷಿಸಿದನಂತೆ.

**ಅಂಬುತೀರ್ಥ:** ಶರಾವತಿ ನದಿಯ ಉಗಮಸ್ಥಾನ ಅಂಬುತೀರ್ಥ ಈ ಸ್ಥಳ ತೀರ್ಥಹಳ್ಳಿಯಿಂದ ಸುಮಾರು 16 ಕಿ.ಮೀ ದೂರದಲ್ಲಿದೆ. ವನವಾಸದ ಸಂದರ್ಭದಲ್ಲಿ ರಾಮ- ಸೀತೆಯರು ಇಲ್ಲಿಗೆ ಬಂದಿದ್ದರು ಎನ್ನುತ್ತದೆ ಸ್ಥಳ ಪುರಾಣ. ಆಗ ಸೀತಾಮಾತೆಯ ಬಾಯಾರಿಕೆಯನ್ನು ನೀಗಿಸಲು, ಶ್ರೀರಾಮನು ನೆಲಕ್ಕೆ ಬಾಣ ಬಿಟ್ಟು ನೀರು ಚಿಮ್ಮಿಸಿದನಂತೆ. ಅಂಬು (ಶರ) ಅಥವಾ ಬಾಣದಿಂದ ನೀರು ಚಿಮ್ಮಿದ ಈ ಸ್ಥಳಕ್ಕೆ ಅಂಬುತೀರ್ಥವೆಂದೂ, ನದಿಗೆ ಶರಾವತಿಯೆಂದೂ ಹೆಸರು ಬಂದಿತು. ಅಲ್ಲೊಂದು ಸಣ್ಣ ಶಿವ ಮಂದಿರವಿದೆ. ಅದನ್ನು ರಾಮ-ಸೀತೆಯರು ಶಿವನನ್ನು ಪೂಜಿಸಿದ್ದರು ಎಂಬ ನಂಬಿಕೆಯಿಂದೆ. **ಮೃಗವಧೆ:** ಸ್ಥಳವು ಬ್ರಾಹ್ಮಿ ನದಿಯ (ಹಳ್ಳ) ದಂಡೆಯಲ್ಲಿದೆ. ಇಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಾಲಯವನ್ನು ಶ್ರೀರಾಮನು ಪ್ರತಿಷ್ಠಾಪಿಸಿದ ಎಂಬ ಪ್ರತೀತಿ ಇದೆ. ಮಾರೀಚ ರಾಕ್ಷಸ ರಾವಣನಿಗೆ ಸಹಾಯ ಮಾಡಲೆಂದು ಬಂಗಾರ ವರ್ಣದ ಜಿಂಕೆಯಾಗಿ ಸೀತೆಯ ಕುಟೀರದ ಮುಂದೆ ಸುಳಿದಾಡುತ್ತಿರುತ್ತಾನೆ. ಮಾಯಾಜಿಂಕೆಯ ಮೋಹಕ್ಕೆ ಸಿಲುಕಿದ ಸೀತೆ, ಅದನ್ನು ಹಿಡಿಯುವ ಆಸೆ ತೋರುತ್ತಾಳೆ. ಪತ್ನಿಯ ಆಸೆ ಪೂರೈಸಲು ಮಾಯಾಮೃಗದ ಬೆನ್ನತ್ತಿದ ರಾಮನಿಗೆ ಅಸುರರ ಹುನ್ನಾರ ಅರ್ಥವಾಗಿ, ಮಾಯಾಜಿಂಕೆಗೆ ಬಾಣ ಬಿಟ್ಟು ಕೊಂದು ಹಾಕುತ್ತಾನೆ. ಹಾಗೆ ಮಾರೀಚ (ಮೃಗ) ಮೃತಪಟ್ಟ ಸ್ಥಳಕ್ಕೆ ''ಮೃಗವಧೆ' ಎಂಬ ಹೆಸರು ಬಂತು. ಕಾರಣಗಿರಿ: ಶಿವಮೊಗ್ಗ ಜಿಲ್ಲೆ ಹೊಸನಗರ-ಸಾಗರ ಮಾರ್ಗದ ಹೆದ್ದಾರಿಯಲ್ಲಿ ಕಾರಣಗಿರಿ (ಕಾರ್ಗಡಿ) ಸಿದ್ಧಿ ವಿನಾಯಕ ದೇವಸ್ಥಾನವಿದೆ. ಶ್ರೀರಾಮನು ಸೀತೆಯನ್ನು ಕರೆತರಲು ಲಂಕೆಗೆ ಹೋಗುವ ಮಾರ್ಗದಲ್ಲಿ ಇಲ್ಲಿಗೆ ಬಂದು ಅಗಸ್ತ್ಯ ಮಹರ್ಷಿಗಳ ದರ್ಶನ ಪಡೆದು ಇಲ್ಲಿನ ವಿನಾಯಕನನ್ನು ಪೂಜಿಸಿ ದನಂತೆ. ಸೀತೆಯೊಂದಿಗೆ ಹಿಂತಿರುಗಿ ಬರುವಾಗ ಮತ್ತೊಮ್ಮೆ ಬಂದು ಪೂಜಿಸಿ ಹೋಗುವಂತೆ ಅಗಸ್ತ್ಯರು ಶ್ರೀರಾಮನಿಗೆ ಸೂಚಿಸಿದರಂತೆ. ರಾವಣಾದಿಗಳನ್ನು ಮರ್ದಿಸಿ ಸೀತೆಯೊಂದಿಗೆ ಇದೇ ದಾರಿಯಲ್ಲಿ ಅಯೋಧ್ಯೆಗೆ ಹಿಂತಿರುಗುತ್ತಿದ್ದ ಶ್ರೀರಾಮ ಅಗಸ್ತ್ಯರ ಮಾತನ್ನು ಮರೆತು, ಮುಂದಕ್ಕೆ ಪ್ರಯಾಣಿಸುತ್ತಿದ್ದಂತೆ. ಆಗ, ಪುಷ್ಪಕ ವಿಮಾನಕ್ಕೆ ಬೃಹದಾಕಾರದ ಬೆಟ್ಟ(ಗಿರಿ)ಅಡ್ಡ ನಿಂತಿತು. ಆಗ ಶ್ರೀರಾಮನು ಕಿಂ ಕಾರಣಂ ಗಿರಿ (ಈ ಬೆಟ್ಟ ಅಡ್ಡವೇಕೆ) ಎಂದನಂತೆ. ಆಗ ಜೊತೆಗಿದ್ದ ಲಕ್ಷ್ಮಣ, ಅಗಸ್ತ್ಯರ ಮಾತನ್ನು ನೆನಪಿಸಿ ಸಿದ್ಧಿವಿನಾಯಕನನ್ನು ಪೂಜಿಸಲು ತಿಳಿಸಿದನಂತೆ.

> **ಸುಗ್ರೀವರ ಕೊನೆಯ ಕಾದಾಟ**

**ನಾಮದ ಚಿಲುಮೆ:** ತುಮಕೂರು ಜಿಲ್ಲೆಯ ದೇವರಾಯನದುರ್ಗದಲ್ಲಿ ನಾಮದ ಚಿಲುಮೆ ಇದೆ. ಶ್ರೀರಾಮನು ಲಂಕೆಗೆ ಹೋಗುವಾಗ ಈ ಸ್ಥಳದಲ್ಲಿ ನೆಲೆ ನಿಂತನಂತೆ. ರಾಮನು ತನ್ನ ಹಣೆಗೆ ನಾಮ' ಇಡಲು ನೀರಿಗಾಗಿ ಹುಡುಕಾಡಿದನಂತೆ. ಎಲ್ಲಿಯೂ ನೀರು ಸಿಗದಿದ್ದಾಗ ತನ್ನ ಬಿಲ್ಲನ್ನು ತೆಗೆದು ಈ ಸ್ಥಳದಲ್ಲಿ ಬಾಣ ಬಿಟ್ಟಾಗ, ಇಲ್ಲಿ ನೀರಿನ ಚಿಲುಮೆ ಹುಟ್ಟಿತಂತೆ. ಆದ್ದರಿಂದ ಇದನ್ನು ನಾಮದ ಚಿಲುಮೆ/ ರಾಮ ಚಿಲುಮೆ ಎಂದು ಕರೆಯುತ್ತಾರೆ ಎನ್ನುತ್ತದೆ ಸ್ಥಳ ಪುರಾಣ.

**ಚಳಕಾಪೂರ್:** ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಚಳಕಾಪೂರ್ ಗ್ರಾಮದಲ್ಲಿ ಆಂಜನೇಯ ದೇವಸ್ಥಾನವಿದೆ. ವನವಾಸದ ವೇಳೆ ಶ್ರೀರಾಮ, ಲಕ್ಷ್ಮಣರು ಚಳಕಾಪೂರ್ ಅರಣ್ಯದಲ್ಲಿ ವಾಸವಾಗಿದ್ದರಂತೆ. ಚಳಕಾ ದೇವಿಯ ಮಾತಿನಂತೆ ಶ್ರೀ ರಾಮ ಅಸುರರನ್ನು ಸಂಹಾರ ಮಾಡಿದ್ದರಿಂದ, ಚಳಕಾಪೂರ್ ಎಂದು ಹೆಸರು ಬಂದಿದೆ ಎನ್ನುವ ಪ್ರತೀತಿ ಇದೆ. ಹನುಮಂತ ಸಂಜೀವಿನಿ ಪರ್ವತವನ್ನು ಅಂಗೈಯಲ್ಲಿ ತೆಗೆದುಕೊಂಡು ಹೋಗಬೇಕಾದರೆ ಒಂದು ಸಣ್ಣ ತುಂಡು ಸ್ಥಳದಲ್ಲಿ ಬಿದ್ದಿರುವ ಕಾರಣ ಇಲ್ಲಿ ಆಂಜನೇಯ ನೆಲೆಸಿದ್ದಾನೆ ಎನ್ನುತ್ತಾರೆ ಸ್ಥಳೀಯರು.

# ಕಾಂಗ್ರೇಸ್‌ನಲ್ಲಿ ಆಂತರಿಕ ಗೊಂದಲ ಸೃಷ್ಟಿ: ಬಸವರಾಜ ಬೊಮ್ಮಾಯಿ

## ಸಿಎಂ ಕುರ್ಚಿ ಅಲ್ಲಾಡುತ್ತಿದೆ ಅನ್ನುವ ಭಾವನೆ ಸೃಷ್ಟಿಯಾಗಿದೆ, ಸಿಎಂ ಕುರ್ಚಿ ಮೇಲೆ ಕೂರಬೇಕೆಂಬ ಆಸೆ ಈಗ ಹೊರ ಹೊಮ್ಮುತ್ತಿದೆ

• **ಉದಯವಾಹಿನಿ ಗದಗ**

ರಾಜ್ಯ ರಾಜಕಾರಣದಲ್ಲಿ ಧಗಧಗಿಸ್ತಿರೋ ಮುಡಾ ಹಗರಣದ ಜ್ವಾಲೆ ರಾಜ್ಯ ಮಟ್ಟದಲ್ಲಿ ಮಾತ್ರವಲ್ಲದೇ ರಾಷ್ಟ್ರ ಮಟ್ಟದಲ್ಲೂ ಸಾಕಷ್ಟು ಸದ್ದು ಮಾಡುತ್ತಿದೆ. ಮುಡಾ ಕದನವನ್ನ ಗಂಭೀರವಾಗಿ ಪರಿಗಣಿಸಿರೋ ರಾಜ್ಯ ಕಾಂಗ್ರೆಸ್ ರಾಜ್ಯಪಾಲರ ವಿರುದ್ಧ ತೊಡೆ ತಟ್ಟಿ ನಿಂತಿದೆ. ಮುಡಾ ಹಗರಣದಿಂದ ಸಿದ್ದರಾಮಯ್ಯ ಅವರು ಜೈಲಿಗೆ ಹೋಗುತ್ತಾರೆ ಎಂದು ಕೆಲ ಬಿಜೆಪಿ ನಾಯಕರು ಭವಿಷ್ಯ ನುಡಿದಿರುವುದು ಅಚ್ಚರಿಗೆ ಕಾರಣವಾಗಿದೆ.

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಜೈಲಿಗೆ ಹೋಗುತ್ತಾರಾಯೇ ಎಂಬ ಮಾಧ್ಯಮಗಳ ಪ್ರಶ್ನೆಗೆ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಮಾತನಾಡಿ, ನಾನು ಜವಾಬ್ದಾರಿ ಇರುವ ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ನಾನು ಭವಿಷ್ಯ ಹೇಳುವುದಿಲ್ಲ. ಕಾನೂನು ತನ್ನ ಪ್ರಕ್ರಿಯೆ ನಡೆಸುತ್ತದೆ ಎಂದು ಹೇಳಿದರು.

ಶಾಸಕ ಆರ್. ವಿ. ದೇಶಪಾಂಡೆ ಅವರ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ನಾನು ಅವರ ಹೇಳಿಕೆ ಬಗ್ಗೆ ವ್ಯಾಖ್ಯಾನ ಮಾಡುವುದಿಲ್ಲ. ನಾನು ಸಣ್ಣವನು.

> **ರಾಜ್ಯ ಕಾಂಗ್ರೆಸ್ ನಾಯಕರು ಮುಡಾದಲ್ಲಿ ಹಗರಣ ಆಗಿಲ್ಲ ಅಂತ ಹೇಳುತ್ತಾರೆ. ಈಗ ಆ ಕಾಲದಲ್ಲಿದ್ದ ಕಮಿಷನರ್ ಅವರನ್ನು ತಾಂತ್ರಿಕ ಸಮಿತಿ ರಿಪೋರ್ಟ್ ಆಧಾರದಲ್ಲಿ ಅಮಾನತು ಮಾಡಲಾಗಿದೆ. ತಾಂತ್ರಿಕ ಸಮಿತಿ ತಪ್ಪು ಕಂಡು ಹಿಡಿದಿದೆ. ಸರ್ಕಾರ ಕಮಿಷನರ್ ಅವರನ್ನ ಸಸ್ಪೆಂಡ್ ಮಾಡಿದೆ. ಹೀಗಾಗಿ ಎಲ್ಲವೂ ಕಾನೂನು ಬದ್ಧವಾಗಿ ನಡೆದಿಲ್ಲ ಅಂತಾ ಸರ್ಕಾರ ಒಪ್ಪಿಕೊಂಡಂತಾಗಿದೆ**
>
> **-ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ**

ದೇಶಪಾಂಡೆ ಅವರ ಹೇಳಿಕೆಗೆ ಕಾರಣ ಗೊತ್ತಿಲ್ಲ. ಅವರ ಹೇಳಿಕೆ ನಂತರ ಕಾಂಗ್ರೇಸ್‌ನಲ್ಲಿ ಹಲವು ಪ್ರತಿಕ್ರಿಯೆ ಬಂದಿವೆ. ಕಾಂಗ್ರೇಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಅನ್ನುವುದಕ್ಕೆ ಕೈ ನಾಯಕರ ಪ್ರತಿಕ್ರಿಯೆ ಸಾಕ್ಷಿ ಎಂದು ಹೇಳಿದರು. ಕಳೆದ ವರ್ಷ ನಾವು ಆಡಳಿತ ಮಾಡುವಾಗ ಆರ್ಥಿಕ ಸುಭದ್ರತೆ ತಂದಿರುವುದರಿಂದ ಸರ್ಕಾರ ಅರ್ಧ ವರ್ಷದಿಂದ ಆಡಳಿತ ನಡೆಸಿಕೊಂಡು ಬಂದಿದ್ದರಿಂದ ಹೇಗೋ ನಡೆದುಕೊಂಡು ಹೋಯಿತು.


ಉದಯವಾಹಿನಿ ಚಿತ್ರ

ಈ ವರ್ಷ ಬಹಳ ಕಷ್ಟ ಇದೆ. ಅದರ ಜೊತೆಗೆ ಏಳನೇ ವೇತನ ಆಯೋಗದ ಶಿಫಾರಸ್ಸು ಈಡೇರಿಸಬೇಕು. ಹಕವಾರು ಖರ್ಚುಗಳು ಬರುತ್ತವೆ. ಇದೆಲ್ಲವನ್ನು ನೋಡಿದಾಗ ರಾಜ್ಯ ಸರ್ಕಾರ ಆರ್ಥಿಕವಾಗಿ ಕುಸಿಯುವ ಕಾಲ ಬಹಳ ದೂರವಿಲ್ಲ ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ ಈಗಲೂ ಹೇಳುತ್ತೇನೆ. ಈಗ ಅಂಗನವಾಡಿ ಕಾರ್ಯಕರ್ತೆಯರ ಸಂಬಳ ಮೂರು ನಾಲ್ಕು ತಿಂಗಳಿಗೆ ನೀಡುತ್ತಿದ್ದಾರೆ. ಮುಂದೆ ಸರ್ಕಾರಿ ನೌಕರರ ಸಂಬಳಕ್ಕೂ ಕಷ್ಟವಾಗಲಿದೆ ಎಂದು ಹೇಳಿದರು.ಕೊವಿಡ್ ವರದಿ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕೊವಿಡ್ ಪ್ರಕರಣವನ್ನು ಯಾರೂ ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ಕೋವಿಡ್ ಪೂರ್ಣ ವರದಿ ಹೊರಗಡೆ ಬರಲಿ. ಈಗ ಮಧ್ಯಂತರ ವರದಿ ಬಂದಿದೆ. ಫೈನಲ್ ವರದಿ ಬರಲಿ. ಆಮೇಲೆ ಚರ್ಚೆ ಮಾಡೋಣ. ಏನೇ ತರಾತುರಿ ಮಾಡಿದರೂ ಸತ್ಯಕ್ಕೆ ಜಯ ಇದೆ ಎಂದು ಹೇಳಿದರು. ಕಾಂಗ್ರೇಸ್‌ನಲ್ಲಿ ಆಂತರಿಕವಾಗಿ ಗೊಂದಲ ಸೃಷ್ಟಿಯಾಗಿದೆ. ಮುಖ್ಯಮಂತ್ರಿಗಳ ಕುರ್ಚಿ ಅಲ್ಲಾಡುತ್ತಿದೆ ಅನ್ನುವ ಭಾವನೆ ಸೃಷ್ಟಿಯಾಗಿದೆ. ಸಿಎಂ ಕುರ್ಚಿ ಮೇಲೆ ಕೂರಬೇಕೆಂಬ ಆಸೆ ಈಗ ಹೊರ ಹೊಮ್ಮುತ್ತಿದೆ. ಇದು ಸಹಜ ಪ್ರಕ್ರಿಯೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ. ಎಲ್ಲವೂ ಸರಿ ಇದೆ ಅಂತ ಹೇಳುತ್ತಲೇ ಒಳಗಡೆಯಿಂದ ದೋಣಿಗೆ ತೂತು ಕೊರೆಯುವುದು ರಾಜಕಾರಣ. ಕರ್ನಾಟಕದ ಇತಿಹಾಸ ನೋಡಿದಾಗ ಕಾಂಗ್ರೇಸ್‌ನಲ್ಲಿ ವಿರೇಂದ್ರ ಪಾಟೀಲರು ಅತ್ಯಂತ ಬಲಿಷ್ಠ ಮುಖ್ಯಮಂತ್ರಿಗಳಾಗಿದ್ದರು, ಅವರ ಅವಧಿಯಲ್ಲಿ ರಾತ್ರೋ ರಾತ್ರಿ ಎಲ್ಲಾ ಶಾಸಕರು ಬದಲಾದರು. ಮುಂದೆ ದೇವರಾಜ್ ಅರಸು ಅವರನ್ನು ರಾತ್ರೋ ರಾತ್ರಿ ಬದಲಾವಣೆ ಮಾಡಿ ಆರ್. ಗುಂಡೂರಾವ್ ಅವರು ಮುಖ್ಯಮಂತ್ರಿಗಳಾದರು. ದೇವರಾಜ ಅರಸು ಅವರು ಎರಡನೇ ಬಾರಿ ಸ್ವಂತ ಶಕ್ತಿಯಲ್ಲಿ ಆರಿಸಿ ಸಿಎಂ ಆದವರು. ಎಸ್. ಬಂಗಾರಪ್ಪ ಅವರಿಗೆ 183 ಶಾಸಕರ ಬಲವಿತ್ತು. ಆಗಲೂ ಸಿಎಂ ಬದಲಾದರು. ಈ ರಾಜಕಾರಣ ನಡಿಯುತ್ತಾ ಇರುತ್ತದೆ ಎಂದರು.

> **ವರ್ಷದಿಂದ ಏನೂ ಕೆಲಸ ಮಾಡಿಲ್ಲ**
>
> **ರಾಜ್ಯ ಸರ್ಕಾರ ಕಳೆದ ಒಂದು ವರ್ಷದಿಂರ ಏನೂ ಕೆಲಸ ಮಾಡಿಲ್ಲ. ಜನ ಭ್ರಮನಿರಸನರಾಗಿದ್ದಾರೆ, ಆಡಳಿತ ಪಕ್ಷದ ಶಾಸಕರೂ ಭ್ರಮ ನಿಸರನರಾಗಿದ್ದಾರೆ. ಇದೂ ಕೂಡ ಒಂದು ಪ್ರಮುಖ ಕಾರಣ. ಕಾಂಗ್ರೇಸ್‌ನಲ್ಲಿ ಆಂತರಿಕವಾಗಿ ಗೊಂದಲ ಸೃಷ್ಟಿಯಾಗಿದೆ. ಮುಖ್ಯಮಂತ್ರಿಗಳ ಕುರ್ಚಿ ಅಲ್ಲಾಡುತ್ತಿದೆ ಅನ್ನುವ ಭಾವನೆ ಸೃಷ್ಟಿಯಾಗಿದೆ. ಸಿಎಂ ಕುರ್ಚಿ ಮೇಲೆ ಕೂರಬೇಕೆಂಬ ಆಸೆ ಈಗ ಹೊರ ಹೊಮ್ಮುತ್ತಿದೆ.**


> **ನಾನು ಭವಿಷ್ಯ ಹೇಳುವುದಿಲ್ಲ**

---



## ಮಿನಿ ನ್ಯೂಸ್

### ಮಲ್ಲಿಕಾರ್ಜುನಲಿಂಗ ದೇವಾಸ್ಥಾನದ 8ನೇ ಜಾತ್ರಾ ಮಹೋತ್ಸವ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಚಿಮ್ಮಾನಚೋಡ ಗ್ರಾಮದ ಹತ್ತಿರ ಮುಲ್ಲಾಮಾರಿ ಜಲಾಶಯದ ಪಕ್ಕದಲ್ಲಿರುವ ಪರಮಪೂಜ್ಯ ಹವಾ ಮಲ್ಲಿನಾಥ ಮಹಾರಾಜ ಆಶ್ರಮದ ಮಲ್ಲಿಕಾರ್ಜುನಲಿಂಗ ದೇವಾಸ್ಥಾನದ 08ನೇ ಜಾತ್ರಾ ಮಹೋತ್ಸವದ ಹಾಗೂ ಶ್ರಾಮಣ ಮಾಸದ ಕೊನೆಯ ಸೋಮವಾರದಂದು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸತತವಾಗಿ ಜಿಟಿಜಿಟಿಯಾಗಿ ಸುರಿಯುತ್ತಿರುವ ಮಳೆಯಲ್ಲಿಯೇ ಪರಮಪೂಜ್ಯ ಡಾ.ಹವಾ ಮಲ್ಲಿನಾಥ ಮಹಾರಾಜರು ಭಕ್ತಿಯಿಂದ ಬಂದ ಸಾವಿರಾರು ಭಕ್ತರಿಗೆ ದರ್ಶನ ನೀಡಿದರು.

ಈ ಸಂದರ್ಭದಲ್ಲಿ ರಾಮರೆಡ್ಡಿ ಪೋಲಿಸ್ ಪಾಟೀಲ ಚಿಮ್ಮಾನಚೋಡ, ಶಂಕರಜೀ ಹೂವಿನಹಿಪ್ಪರಗಿ, ಶ್ರೀಧರ ವಗ್ಗಿ, ಗೋಪಾಲ ಬಾಜೆಪಳ್ಳಿ,ಶರಣು ಬಬಲಿ, ರಮೇಶ ಭೂತಪೂರ, ತುಕ್ಕಾರಾಮ ಭಕ್ತಂಪಳ್ಳಿ,ಜಗದೀಶ ಯಲಕಪಳ್ಳಿ, ಹಣಮಂತ ರೆಡ್ಡಿ, ರಾಮಯ್ಯಸ್ವಾಮಿ, ಚಿಮ್ಮಾನಚೋಡ ಗ್ರಾ.ಪಂ.ಅಧ್ಯಕ್ಷ ಮಲ್ಲಿಕಾರ್ಜುನ ಮೊಗಡಂಪಳ್ಳಿ,ಜಗನ್ನಾಥ ಇದ ಲಾಯಿ,ನಾಗಪ್ಪ ಇಟಗಿ,ಅನೇಕ ಭಕ್ತರಿದ್ದರು.

---

## ಮಳೆ ಹಾನಿ ಪ್ರದೇಶಕ್ಕೆ ಉಮೇಶ್ ಮುದ್ನಾಳ್ ಭೇಟಿ

• **ಉದಯವಾಹಿನಿ, ಯಾದಗಿರಿ**

ಯಾದಗಿರಿ ಜಿಲ್ಲೆಯಾದ್ಯಂತ ನಿನ್ನ ರಾತ್ರಿಯಿಡೀ ಸುರಿದ ಧಾರಾಕಾರ ಮಳೆ ಹಲವು ಅವಾಂತರ ಸೃಷ್ಟಿಯಾಗಿವೆ. ಯಾದಗಿರಿ ತಾಲ್ಲೂಕಿನ ಪಗಲಾಪುರ ಗ್ರಾಮದ ಕಿರು ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ. ಯಾದಗಿರಿ - ರಾಯಚೂರು ಸಂಪರ್ಕ ಸೇತುವೆ ಆಗಿದ್ದ ಪಗಲಾಪುರ ಕಿರು ಸೇತುವೆ ಆಗಿತ್ತು. ಪಗಲಾಪುರ ಸೇತುವೆ ಅಷ್ಟೇ ಅಲ್ಲದೆ ಕೊಯಿಲೂರ ಸೇರುವೆಯೂ ಮುಳುಗಡೆ ಆಗಿದೆ. ಪರಿಣಾಮವಾಗಿ ಸೇತುವೆ ನೀರು ಜಮೀನಿಗೆ ನುಗ್ಗಿ ನೂರಾರು ಎಕರೆ ಜಮೀನು ಜಲಾವೃತವಾಗಿವೆ. ರೈತರು ಬದುಕ ಕಂಗಾಲಾಗಿದೆ. ಇತ್ತ, ದೋರಣಹಳ್ಳಿ, ಪಗಲಾಪುರ, ಸೇರಿ ಹಲವು ಗ್ರಾಮಕ್ಕೆ ಮಳೆ ನೀರು ನುಗ್ಗಿವೆ. ಮಳೆ ನೀರು ನುಗ್ಗಿದ ಪರಿಣಾಮ ನೀರು ಹೊರ ಹಾಕಲು ಸಾಕಷ್ಟು ಪರದಾಟ ನಡೆಸಿದ್ದಾರೆ. ಕೂಡಲೇ ಜಿಲ್ಲಾಡಳಿತ ಹಾಳಾದ ರೈತರ ಬೆಳೆ ಹಾಗೂ ಮನೆಗೆ


ಉದಯವಾಹಿನಿ ಚಿತ್ರ

ನೀರು ನುಗ್ಗಿ ಹಾನಿ ಆಗಿರುವ ಕುಟುಂಬಸ್ಥರಿಗೆ ಸೂಕ್ತ ಪರಿಹಾರ ನೀಡಬೇಕು ಅಂತ ಒತ್ತಾಯಿಸಿದ್ದಾರೆ.

ಈ ವೇಳೆ ಮಾತನಾಡಿರುವ ಸಾಮಾಜಿಕ ಹೋರಾಟಗಾರ ಉಮೇಶ್ ಮುದ್ನಾಳ್ ಪಗಲಾಪುರ ಸೇತುವೆ ಕುಸಿದು ವಾರಗಳೇ ಕಳೆದಿವೆ. ಆದ್ರೂ ಅಧಿಕಾರಿಗಳು ಮಾತ್ರ ದುರಸ್ತಿ ಮಾಡುವ ಕೆಲಸಕ್ಕೆ ಮುಂದಾಗದಿರೋದು ದುರ್ದೈವ. ಈಗಲಾದರೂ ಎಚ್ಚೆತ್ತು ಅಧಿಕಾರಿಗಳು ಸೇತುವೆ ಮೇಲ್ದರ್ಜೆಗೆ ಏರಿಸಬೇಕು. ಇಲ್ಲದಿದ್ದರೆ ಯಾದಗಿರಿ ನಗರದ ಪ್ರಮುಖ ವೃತ್ತದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

---

## ಜಲ್ಲಿ ಕ್ರಷರ್ ನಿರ್ಮಾಣ ಬೇಡ: ಗ್ರಾಮಸ್ಥರ ವಿರೋಧ

• **ಉದಯವಾಹಿನಿ, ಕಾಪು**

ಪಾದೂರು ಗ್ರಾಮದಲ್ಲಿ ಜಲ್ಲಿ ಕ್ರಷರ್ ನಿರ್ಮಾಣವಾಗಬಾರದು. ಇದರಿಂದ ಜನರ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಮಜೂರು ಗ್ರಾಮಸ್ಥರು ಇಲ್ಲಿನ ಜಲಂಚಾರು ಮಹಾಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ವಿಶೇಷ ಗ್ರಾಮ ಸಭೆಯಲ್ಲಿ ವಿರೋಧ ವ್ಯಕ್ತಪಡಿಸಿದರು.

ಜಲ್ಲಿ ಕ್ರಷರ್ ನಿರ್ಮಾಣವಾದರೆ ಪರಿಸರದ ಮೇಲೆ, ಜನರು, ಜೀವಿಗಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಈಗಾಗಲೇ ಕೆಲವೇ ಕಿ.ಮೀ. ದೂರದಲ್ಲಿರುವ ಬೃಹತ್ ಯೋಜನೆಗಳಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರಿದೆ. ಜಲ್ಲಿ ಕ್ರಷರ್ ನಿರ್ಮಾಣ ಮಾಡಲು ಜಿಲ್ಲಾಡಳಿತ ಅವಕಾಶ ನೀಡಬಾರದು. ಇಲ್ಲದಿದ್ದರೆ ಸ್ಥಳೀಯ ಜನ ಜಾಗೃತಿ ಸಮಿತಿ ನೇತೃತ್ವದಲ್ಲಿ ಹೋರಾಟ ನಡೆಸಲಾಗುವುದು, ನ್ಯಾಯಾಲಯದ ಮೊರೆ


ಉದಯವಾಹಿನಿ ಚಿತ್ರ

ಹೋಗುವುದಾಗಿ ಎಚ್ಚರಿಸಿದರು. ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿ ಅಶ್ವಿನಿ ಮಾತನಾಡಿ, ಬೆಂಗಳೂರಿನ ಲಕ್ಷ್ಮೀ ಟ್ರಾವೆಲ್ಸ್ ಕಂಪನಿಯಲ್ಲಿ ಕ್ರಶರ್ ನಿರ್ಮಾಣಕ್ಕೆ ಐಎಸ್‌ಪಿಆರ್‌ಎಲ್ ಅರ್ಜಿ ಸಲ್ಲಿಸಿದ್ದು, ಇದುವರೆಗೂ ಯಾವುದೇ ಅನುಮತಿ ನೀಡಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ತೀರ್ಮಾನವಾಗಲಿದೆ. ಸ್ಥಳೀಯರ ವಿರೋಧದ ಬಗ್ಗೆ ಅವರ ಗಮನಕ್ಕೆ ತರಲಾಗುವುದು ಎಂದರು. ಅಧ್ಯಕ್ಷತೆ ವಹಿಸಿದ್ದ ಪಂಚಾಯತಿ ಅಧ್ಯಕ್ಷ ಪ್ರಸಾದ್ ಶೆಟ್ಟಿ ಮಾತನಾಡಿ, ಯೋಜನೆಯಿಂದ ಸ್ಥಳೀಯ ಗ್ರಾಮಸ್ಥರಿಗೆ ಸಮಸ್ಯೆ ಉಂಟಾಗಲಿದ್ದು, ಈ ನಿಟ್ಟಿನಲ್ಲಿ ಹೋರಾಟಕ್ಕೂ ಸಿದ್ಧ ಎಂದರು.

> **ಕಾಪು ಕ್ಷೇತ್ರದಲ್ಲಿ ಯಾವುದೇ ಜನವಿರೋಧಿ ಯೋಜನೆಗೆ ಅವಕಾಶ ನೀಡುವುದಿಲ್ಲ. ನಮ್ಮ ನೆಲ, ಜಲ, ಪ್ರಕೃತಿ, ಬದುಕಿನ ಹಕ್ಕನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಯೋಜನೆಗಳು ಶೂನ್ಯ ಮಾಲಿನ್ಯವಾಗಬೇಕು, ಸ್ಥಳೀಯರಿಗೆ ಉದ್ಯೋಗ ಸೃಷ್ಟಿಯಾಗಬೇಕು. ಯೋಜನೆ ವಿರುದ್ಧ ಹೋರಾಟದಲ್ಲಿ ಜನರ ಜೊತೆ ಇರುತ್ತೇನೆ**
>
> **-ಗುರ್ಮೆ ಸುರೇಶ್ ಶೆಟ್ಟಿ, ಶಾಸಕ**

---

## ಅತಿವೃಷ್ಠಿಯಿಂದಾದ ಹಾನಿ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಿ: ದರ್ಶನಾಪುರ

• **ಉದಯವಾಹಿನಿ, ಯಾದಗಿರಿ**

ಅತಿವೃಷ್ಠಿಯಿಂದಾದ ಬೆಳೆ ಹಾನಿ ಮತ್ತು ಮನೆ ಹಾನಿ ಕುರಿತಂತೆ ಪರಿಶೀಲನೆ ನಡೆಸಿ ಶೀಘ್ರ ವರದಿ ಸಲ್ಲಿಸುವುದರ ಜೊತೆಗೆ ಈ ಹಿಂದೆ ಮನೆ ಹಾನಿಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಪರಿಹಾರವನ್ನು ಆದ್ಯತೆ ಮೇಲೆ ವಿತರಿಸುವಂತೆ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಇಂದು ಪ್ರಕೃತಿ ವಿಕೋಪದ ಅಡಿಯಲ್ಲಿ ಬೆಳೆ,ರಸ್ತೆ, ಮೂಲಸೌಕರ್ಯ ಹಾನಿಯಾದ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯ ವಿವಿಧ ತಾಲ್ಲೂಕಗಳಲ್ಲಿ ಇತ್ತೀಚಿಗೆ ಸುರಿದ ಮಳೆಯಿಂದಾಗಿ ಬೆಳೆ ನಷ್ಟವಾಗಿರುವ ಬಗ್ಗೆ ಜಂಟಿ ಸಮೀಕ್ಷೆ ನಡೆಸಬೇಕು. ಅದರಂತೆ ಮನೆ ಹಾನಿ,ರಸ್ತೆ ಮೂಲಸೌಕರ್ಯಗಳ ಹಾನಿ ಕುರಿತು ಶೀಘ್ರ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ತಿಳಿಸಿದರು.

ಜಿಲ್ಲೆಯ ಸಿರವಾಳದಿಂದ ಅಣಬಿ ವರೆಗೆ ಹಾಗೂ ಶಹಾಪುರದಿಂದ ಶಿರವಾಳದ ವರೆಗೆ ಹಾಗೂ ಇಬ್ರಾ


ಉದಯವಾಹಿನಿ ಚಿತ್ರ

> **ನೋಂದಣಿ ಕುರಿತಂತೆ ಪರಿಶೀಲನೆ**
>
> **ಸಚಿವರು ಇದೇ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಆಗಿರುವ ಬಿತ್ತನೆ, ಬೆಳೆ ಹಾನಿ, ಭೀಮಾ, ಕೃಷ್ಣ ನದಿ ವ್ಯಾಪ್ತಿಯಲ್ಲಿ ಬೆಳೆ ಪರಿಸ್ಥಿತಿ, ರಸಗೊಬ್ಬರದ ಅವಶ್ಯಕತೆ, ಬೆಳೆವಿಮೆ ಪರಿಹಾರ ವಿತರಣೆ, ತೋಟಗಾರಿಕಾ ಇಲಾಖೆ ವ್ಯಾಪ್ತಿಯಲ್ಲಿ ಆದ ಬೆಳೆ ಹಾನಿ, ಫ್ರೂಟ್ಸ್ ತಂತ್ರಾಂಶದಲ್ಲಿ ರೈತರ ನೋಂದಣಿ ಕುರಿತಂತೆ ಪರಿಶೀಲನೆ ನಡೆಸಿದರು.**

ಹಿಂಪುರದಿಂದ ಚಟ್ನಳ್ಳಿ ವರೆಗೆ ರಸ್ತೆ ಹಾನಿಯಾಗಿದೆ. ಈ ರಸ್ತೆಗಳ ಮಧ್ಯೆ ಭಾರತಮಾಲಾ, ರೈಲ್ವೆ ಕಾಮಗಾರಿ ನಡೆಯುತ್ತಿರುವುದರಿಂದ ಈ ಕುರಿತಂತೆ ಜಂಟಿ ಸಹಯೋಗದೊಂದಿಗೆ ಸಾಧ್ಯತೆ ಇದ್ದಲ್ಲಿ ರಸ್ತೆ ದುರಸ್ತಿ ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ, ಅವಶ್ಯಕ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಇದಕ್ಕೂ ಮುಂಚೆ ಜಿಲ್ಲಾ ಉಸ್ತುವಾರಿ ಸಚಿವರು ಯಾದಗಿರಿ ತಾಲ್ಲೂಕಿನ ಪಗಲಾಪುರ ಸೇತುವೆ, ಭೀಮಾ ಹಳೆ ಸೇತುವೆ, ನಾಯ್ಕಲ್ ಗ್ರಾಮದ ಹೊರವಲಯದಲ್ಲಿರುವ ಹತ್ತಿಬೆಳೆ, ಹೆಸರು ಹಾಗೂ ಇನ್ನಿತರ ಬೆಳೆಗಳ ಹಾನಿಯ ಬಗ್ಗೆ ಖುದ್ದಾಗಿ ಪರಿಶೀಲನೆ ನಡೆಸಿ ರೈತರಿಂದ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳಿಗೆ ಜಿಲ್ಲೆಯಲ್ಲಿ ಆಗಿರುವ ಬೆಳೆಗಳ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಶಾಸಕ ಚೆನ್ನಾರೆಡ್ಡಿ ಪಾಟೀಲ ತುನ್ನೂರ, ಜಿಲ್ಲಾಧಿಕಾರಿ ಡಾ.ಸುಶೀಲ ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ ಸಂಗೀತ, ಅಪರ ಜಿಲ್ಲಾಧಿಕಾರಿ ಶರಣ ಬಸಪ್ಪ ಕೋಟೆಪ್ಪಗೋಳ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ವಿಜಯಕುಮಾರ ಮಡ್ಡೆ, ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ರತೇಂದ್ರನಾಥ ಸೂಗೂರು ಸೇರಿದಂತೆ ಎಲ್ಲಾ ತಾಲ್ಲೂಕಿನ ತಹಶೀಲ್ದಾರರ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

---


## ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ ನಡಹಳ್ಳಿ

• **ಉದಯವಾಹಿನಿ, ಮುದ್ದೇಬಿಹಾಳ**

ರಾಷ್ಟ್ರೀಯತೆ ರಾಷ್ಟ್ರೀಯ ಚಿಂತನೆಯನ್ನು ಬಿಜೆಪಿ ಪಕ್ಷ ಮಾತ್ರ ಹೊಂದಿದೆ ವಿಶ್ವದಲ್ಲೇ ಅತಿದೊಡ್ಡ ರಾಜಕೀಯ ಪಕ್ಷವಾಗಿ ಬಿಜೆಪಿ ಬೆಳೆದು ನಿಂತಿದೆ ಎಂದು ಮಾಜಿ ಶಾಸಕ ಬಿಜೆಪಿ ರಾಜ್ಯ ರೈತ ಮೋರ್ಚಾದ ಅಧ್ಯಕ್ಷ ಎ.ಎಸ್ ಪಾಟೀಲ್ ನಡಹಳ್ಳಿ ಹೇಳಿದರು.

ಅವರು ಮಂಗಳವಾರ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಸದಸ್ಯತ್ವದ ಅಭಿಯಾನಕ್ಕೆ ಚಾಲನೆಯನ್ನು ಪಟ್ಟಣದ ಸಂಗಮೇಶ್ವರ ನಗರದಲ್ಲಿ ನೀಡಿ ಬಿಜೆಪಿ ಮಂಡಲ ಕಾರ್ಯಾಗಾರ ಉದ್ದೇಶಿಸಿ ಮಾತನಾಡಿದರು .

2047 ವರೆಗೆ ಭಾರತ ವಿಶ್ವದ ಶಕ್ತಿಯುತ ಹಾಗೂ ಅತ್ಯಂತ ಶ್ರೀಮಂತ ರಾಷ್ಟ್ರವಾಗಲಿದೆ ಇದನ್ನು ಸಹಿಸಲಾಗದ ವಿದೇಶಿ ಶಕ್ತಿಗಳು ದೇಶದೊಳಗಿನ ಕೆಲ ವಿದ್ರೋಹಿಗಳು ನರೇಂದ್ರ ಮೋದಿ ನೇತೃತ್ವದ ಸರಕಾರವನ್ನು ಬೀಳಿಸುವ ತಂತ್ರ ಮಾಡುತ್ತಿದ್ದಾರೆ ಹೀಗಾಗಿ ಎಲ್ಲಾ ರಾಷ್ಟ್ರೀಯವಾದಿಗಳು ಬಿಜೆಪಿಗೆ ಬೆಂಬಲಿಸಬೇಕು ಸುಭದ್ರ ರಾಷ್ಟ್ರಕ್ಕಾಗಿ ಧರ್ಮ ರಕ್ಷಣೆಗೆ ಇರುವ ಏಕೈಕ ಸರಕಾರ ಅದು ಬಿಜೆಪಿ ಸರಕಾರವಾಗಿದೆ ಹೀಗಾಗಿ ಬಿಜೆಪಿ ಸದಸ್ಯತ್ವ ಅಭಿಯಾನದಲ್ಲಿ ಪ್ರತಿಯೊಬ್ಬರು


ಉದಯವಾಹಿನಿ ಚಿತ್ರ

ಬಿಜೆಪಿ ಸದಸ್ಯರಾಗಲು 8800002024 ನಂಬರ್ ಮಿಸ್ ಕಾಲ್ ಮಾಡಿ ಎಂದರು.

ಈ ವೇಳೆ ಬಿಜೆಪಿ ಪಕ್ಷದ ಹಿರಿಯ ಮುಖಂಡರಾದ ಪ್ರಭು ಕಡಿ ಮಲಕೇಂದ್ರಗೌಡ ಪಾಟೀಲ್, ಸರಕಾರಿ ನಿವೃತ್ತ ಸಂಘದ ಆರ್ ಬಿ ಮ್ಯಾಗೇರಿ, ವೈದ್ಯಕೀಯ ಪ್ರಕೋಷ್ಟದ ಜಿಲ್ಲಾ ಸಂಚಾಲಕ ಡಾ.ವಿರೇಶ ಪಾಟೀಲ್ ಮತ್ತು ಡಾ. ರೇವಣಸಿದ್ದಪ್ಪ ಮಸೂತಿ ಮಾತನಾಡಿದರು.

ಮಂಡಲ ಕಾರ್ಯದರ್ಶಿ ಸಂಜಯ ಬಾಗೇವಾಡಿ ಸದಸ್ಯತ್ವ ಕುರಿತು ಮಾಹಿತಿ ನೀಡಿದರು.

ಬಿಜೆಪಿ ಸದಸ್ಯತ್ವ ಅಭಿಯಾನದಲ್ಲಿ ಮಂಡಲ ಅಧ್ಯಕ್ಷ ಜಗದೀಶ್ ಪಂಪಣ್ಣನವರ, ಕೆಂಚಪ್ಪ ಬಿರಾದಾರ ಪುರಸಭೆ ಸದಸ್ಯರಾದ ಸದಾಶಿವ ಮಾಗಿ, ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ, ಬಾಪುಗೌಡ ಪಾಟೀಲ್, ಅಶೋಕ ಮಣಿ, ಪ್ರೀತಿ ಕಂಬಾರ, ಕಾವೇರಿ ಕಂಬಾರ, ರೇಖಾ ಕೊಂಡಗೂಳಿ, ರಾಜು ಬಳ್ಳೊಳ್ಳಿ, ಹಣಮಂತ ನಲವಡೆ, ಸೋಮನಗೌಡ ಬಿರಾದಾರ, ಸಂಜಯ ಬಾಗೇವಾಡಿ, ಪರಶುರಾಮ ನಾಲತವಾಡ ಶ್ರೀಶೈಲ್ ದೂಡಮನಿ, ಸಂತೋಷ ಬಾದರಬಂಡಿ, ಬಸವರಾಜ ತಟ್ಟಿ, ರಾಮು ಪವಾರ, ಸೇರಿದಂತೆ ಬಿಜೆಪಿ ಪಕ್ಷದ ಕಾರ್ಯಕರ್ತರು ಪದಾಧಿಕಾರಿಗಳು ನಿವೃತ್ತ ಸರಕಾರಿ ನೌಕರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಂಗಮೇಶ್ವರ ನಗರದ ಮನೆ ಮನೆಗಳಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಮಾಡಲಾಯಿತು.

> **ಅಂದಾಜು 50000 ಸದಸ್ಯರನ್ನು ನೇಮಿಸುವ ಗುರಿ**
>
> **ಮುದ್ದೇಬಿಹಾಳ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯ 3 ಪಟ್ಟಣ, 110ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಬಿಜೆಪಿಯ ಅಂದಾಜು 50000 ಸದಸ್ಯರನ್ನು ನೇಮಿಸುವ ಗುರಿ ಹಾಕಿಕೊಳ್ಳಲಾಗಿದೆ.**

---

## ಬಿಡಾಡಿ ದನಗಳಿಗೆ ವಿಶ್ರಾಂತಿ ತಾಣವಾದ ರಾಷ್ಟ್ರೀಯ ಹೆದ್ದಾರಿ

• **ವೀರೇಶ್ ಹೊಸಳ್ಳಿ**

• **ಉದಯವಾಹಿನಿ ಸಿಂಧನೂರು**

ಬೀದರ್ ಟು ಚಾಮರಾಜನಗರ ಬೆಂಗಳೂರು ದಾವಣಗೆರೆ ಟು ಹೈದರಾಬಾದ್ ಸಿಂಧನೂರು ಮೇಲೆ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿಯಲ್ಲಿ ಬಿಡಾಡಿ ದಿನಗಳಿಗೆ ವಿಶ್ರಾಂತಿ ತಾಣವಾಗಿದ್ದು ಸಂಚಾರಕ್ಕೆ ಅಡ್ಡಿಯಾಗುತ್ತಿದೆ

ರಾಷ್ಟ್ರೀಯ 150 ೦ ಹೆದ್ದಾರಿ ಮದ್ಯದಲ್ಲಿ ಬಿಡಾಡಿ ದಿನಗಳು ಕೆಲವು ಮಲಗತ್ತಿವೆ ಇನ್ನು ಕೆಲವು ಓಡಾಡುವ ಸಮಯದಲ್ಲಿ ದಿಢೀರನೆ ವಾಹನಗಳು ಬರುವಾಗ ರಾತ್ರಿಯಲಿ ದಿನಗಳು ಕಾಣದೆ ಎಸೆ ಅಪಘಾತಗಳು ಸಂಭವಿಸಿವೆ. ಮತ್ತು ದ್ವಿಚಕ್ರ ವಾಹನಗಳ ಸವಾರರು ಬಿದ್ದುಗಾಯಗೊಂಡು ಇನ್ನು ಚೇತರಿಕೆ ಕಂಡ ಬರುತ್ತಿಲ್ಲ. ಬಿಡಾಡಿ ದಿನಗಳ ಮಾಲೀಕರು ದನಗಳನ್ನು ನಗರದ ವಿವಿಧ ವಾರ್ಡುಗಳಲ್ಲಿ, ಕಾಯಿಪಲ್ಲೆ ಮಾರುಕಟ್ಟೆಯಲ್ಲಿ, ಮೇಯಿಸಲು ಬಿಡುತ್ತಾರೆ. ಹಗಲೆಲ್ಲ ಕಾಯಿಪಲ್ಲೆ ತಿನ್ನುತ್ತಾ ರಾತ್ರಿ ವೇಳೆ ನಗರ ಬಸ್ ನಿಲ್ದಾಣದ ಹಾಗೂ ರಾಷ್ಟ್ರೀಯ 150ಎ ಹೆದ್ದಾರಿಯಲ್ಲಿ ಮಲಗುವು. ಆದರೆ ಇಷ್ಟೆಲ್ಲಾ ಸಮಸ್ಯೆಗಳು ಆದರೂ ಸಹ ನಗರ ಸಭೆ ಅಧಿಕಾರಿಗಳು ಈ ಬಿಡಾಡಿ ದಿನಗಳ ಯಾರು ಮಾಲೀಕರು ಎಂಬುದು ಪತ್ತೆ ಮಾಡಿದೆ ಕಣ್ಣು ಮುಚ್ಚಿಕೊಂಡೆ ದ್ದಾರೆ. ಎಂದು ವಾಹನಗಳು ಸವಾರ ಮಾಡುವ ಸಾರ್ವಜನಿಕರು ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ.


ಉದಯವಾಹಿನಿ ಚಿತ್ರ

ಇಂದೇ ನಗರ ಸಭೆ ಪೌರಾಯುಕ್ತ ವಿರೂಪಾಕ್ಷ ಮೂರ್ತಿ ಅಧಿಕಾರಿ ನೆನಪಿಸಿಕೊಳ್ಳುವ ದಿನಾ ಇಂದೇ ನಗರ ಸಭೆ ಅಧಿಕಾರಿಗಳು ನಗರದ ವಿವಿಧ ವಾರ್ಡುಗಳ ರಸ್ತೆಯಲ್ಲಿ ಮತ್ತು ಹೆದ್ದಾರಿಯಲ್ಲಿ ಬಿಡಾಡಿ ದನಗಳ ಹಾವಳಿ ಹೆಚ್ಚಾಗಿದ್ದು. ಕಂಡು ಬಂದರೆ ಸಾಕು ಎಚ್ಚೆತ್ತು ಕೊಂಡು ಕೂಡಲೇ ಬಿಡಾಡಿ ದನಗಳನ್ನು ಗೋಶಾಲೆಗೆ ತೆಗೆದು ಕೊಂಡು ಹೋಗಿ ಬಿಡುತ್ತಿದ್ದರು .ದನಗಳ ಮಾಲೀಕರು ಯಾರಾದರೂ ಬಂದರೆ ಐದು ಸಾವಿರ ರೂ ದಂಡ ಹಾಕುತ್ತಿದ್ದರು. ಏಕೆಂದರೆ ರಾತ್ರಿ ರಸ್ತೆಯಲ್ಲಿ ಬಿಡಾಡಿ ದನಗಳು ಒಂದಕ್ಕೊಂದು ಜಗಳ ಮಾಡಿಕೊಂಡು ಸಂಚರಿಸುವಾಗ ವಾಹನಗಳು ಮೇಲೆ ಡಿಕ್ಕಿ ಹೊಡೆದು ಎಷ್ಟು ಜನರು ಕೈ ಕಾಲು ಮುರಿದುಕೊಂಡು ಎಷ್ಟು ಉದಾಹರಣೆ ಗಳವೆ ಎಂದು ಸ್ಥಳ ನಿವಾಸಿ ಹಾಗೂ ಕಾಂಗ್ರೆಸ್ ಮುಖಂಡ ಅಮರೇಶ ಗಿರಿಜಾಲಿ ಅಭಿಪ್ರಾಯ ವ್ಯಕ್ತಪಡಿಸಿದರು. ನಾವು ಹೊದ ಸಲ ಎಲ್ಲಾ ಬಿಡಾಡಿ ದಿನಗಳನ್ನು ಹಿಡಿದುಕೊಂಡು ರಾಯಚೂರು ರಸ್ತೆಯ ಗೋಶಾಲೆಯಲ್ಲಿ ಬಿಟ್ಟಿದ್ದು ಸರ ಈ ದನಗಳನ್ನು ಬಿಡಬೇಡಿ. ಈ ದನಗಳಿಗೆ ಮಾಲೀಕರು ಇದ್ದಾರೆ. ನೀವು ಮಾಲೀಕರು ಯಾರು ಇಲ್ಲದೆ ಇರುವ ಬಿಡಾಡಿ ದನಗಳನ್ನು ಬಿಡುವುದಕ್ಕೆ ಅವಕಾಶ ಇದೆ. ಅದಕ್ಕೆ ಸ್ವಲ್ಪ ಸಮಸ್ಯೆಯಾಗಿದ್ದು. ಮಾಲೀಕರು ಸಹ ಆಲ್ರೆಡಿ ತಿಳಿಸಿದ್ದೇವೆ. ನಿಮ್ಮ ದನಗಳನ್ನು ಬಿಡುತ್ತವೆ. ಇನ್ನು ಮುಂದೆ ದನಗಳನ್ನು ರಸ್ತೆಗೆ ಬಿಡಬೇಡಿ ತಿಳಿಸಿದ್ದೇವೆ.

> **ಅದೆಷ್ಟು ಬೇಗ ಶೀಘ್ರ ಕ್ರಮ**
>
> **ಈಗಾಗಲೇ ನಮ್ಮ ನಗರ ಸಭೆ ವತಿಯಿಂದ ಒಂದು ತಂಡವನ್ನು ರಚನೆ ಮಾಡಲಾಗಿದೆ. ಈಗಾಗಿ ಬಿಡಾಡಿ ದನಗಳಿಗಾಗಿ ಮಾನ್ವಿ. ಮಂತ್ರಾಲಯ ಸೇರಿದಂತೆ ಎಲ್ಲಾ ಕಡೆಗೆ ಗೋಶಾಲೆ ನೋಡ್ತಾ ಇದ್ದೇವೆ . ಎಲ್ಲಾದರೂ ಗೋಶಾಲೆಯಲ್ಲಿ ಸಿಕ್ಕರೆ ಅಲ್ಲಿ ತೆಗೆದುಕೊಂಡು ಹೋಗಿ ಬಿಡೋಣ ಎಂದು ಈ ಈಗಾಗಲೇ ಡಿ ವಾಯು ಎಸ್ಪಿ ಅವರು ಜೊತೆಗೆ ಮಾತನಾಡಿದ್ದೇನೆ. ಅದೆಷ್ಟು ಬೇಗ ಶೀಘ್ರದಲ್ಲಿ ಕ್ರಮ ಕೈಗೊಳ್ಳುತ್ತೇವೆ ಎಂದು ನಗರ ಸಭೆ ಪೌರಾಯುಕ್ತರು ಮಂಜುನಾಥ ಗುಂಡೂರ ತಿಳಿಸಿದರು.**

---

## ನನ್ನ ತಂಟೆಗೆ ಬಂದ್ರೆ ಬೆತ್ತಲೆ ಮಾಡಿ, ಮೆರವಣಿಗೆ ಮಾಡ್ತೇನೆ : ಮಾಜಿ-ಹಾಲಿ ಶಾಸಕರ ವಾಕ್ಸಮರ

• **ಉದಯವಾಹಿನಿ ಬೆಳಗಾವಿ**

ಬೆಳಗಾವಿಯಲ್ಲಿ ಹಾಲಿ ಮತ್ತು ಮಾಜಿ ಶಾಸಕರ ನಡುವೆ ವಾಕ್ಸಮರ ಅತಿರೇಕಕ್ಕೆ ಏರಿದ್ದು, ಹಾಲಿ ಶಾಸಕ ರಾಜು ಕಾಗೆ, ಮಾಜಿ ಶಾಸಕ ಶ್ರೀಮಂತ ಪಾಟೀಲ್ ವಿರುದ್ಧ ವಾಗ್ದಾಳಿ ನಡೆಸಿದ್ದು, ನನ್ನ ತಂಟೆಗೆ ಬಂದ್ರೆ, ಬಟ್ಟೆ ಬಿಚ್ಚಿ ಬೆತ್ತಲೆ ಮಾಡಿ, ಮೆರವಣಿಗೆ ಮಾಡುತ್ತೇನೆ ಎಂದು ನಾಲಿಗೆ ಹರಿಬಿಟ್ಟಿದ್ದಾರೆ. ಹೌದು ರಾಜು ಕಾಗೆ, ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಐನಾಪುರ ಪಟ್ಟಣದಲ್ಲಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ರಾಜು ಕಾಗೆ, ನನ್ನ ಬಗ್ಗೆ ಮಾತನಾಡಲು ನಿನಗೆ ಯೋಗ್ಯತೆ ಇಲ್ಲ. ನೀನು ನನ್ನ ಬಗ್ಗೆ ಮಾತನಾಡ ಬೇಡ, ಅಪ್ಪಿ-ತಪ್ಪಿ ಮಾತನಾಡಿದರೆ ನಾನು ನಿನ್ನ ಬಟ್ಟೆ ಬಿಚ್ಚಿ ಮೆರವಣಿಗೆ ಮಾಡುತ್ತೇನೆ ಎಂದು ನಾಲಿಗೆ ಹರಿಬಿಟ್ಟರು.

ಮುಂದುವರೆದು, ನೀನು ಬಹಳ ಸತ್ಯ ಹರಿಶ್ಚಂದ್ರ ತರಹ ಮಾತನಾಡುತ್ತಿದ್ದೀಯಾ. ನಿಮ್ಮ ಕಾರ್ಖಾನೆಯಲ್ಲಿ ಕಾಟಾ ಯಾರು ಹೊಡೆದ್ರಿ, ಕಾರ್ಮಿಕರ ದುಡ್ಡಿನಲ್ಲಿ ಹುಟ್ಟು ಹಬ್ಬ ಆಚರಿಸಿದವರು ಯಾರು? ಎಂದು ಪ್ರಶ್ನಿಸಿದರು. ಈ ಹಿಂದೆ ರಾಜು ಕಾಗೆ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಾಸಕ ರಾಜು ಕಾಗೆ ಮಾಜಿ ಶಾಸಕ ಶ್ರೀಮಂತ್ ಪಾಟೀಲ್ ವಿರುದ್ಧ ಹರಿಹಾಯ್ದಿದ್ದಾರೆ ಎನ್ನಲಾಗಿದೆ.

---

# 5 ಸಾವಿರ ಎಕರೆ ಅರಣ್ಯ ಒತ್ತುವರಿ ತೆರವು ಬಾಕಿ

## ತೆರವು ಕಾರ್ಯಾಚರಣೆ ಚುರುಕು, 2015ರ ಬಳಿಕ ಅರಣ್ಯ ಪ್ರದೇಶ ಅತಿಕ್ರಮಣ ಮಾಡಿಕೊಂಡವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

• **ಉದಯವಾಹಿನಿ ದಾವಣಗೆರೆ**

ಜಿಲ್ಲೆಯಲ್ಲಿ 5,000 ಎಕರೆಗೂ ಹೆಚ್ಚು ಅರಣ್ಯ ಪ್ರದೇಶವನ್ನು ಒತ್ತುವರಿ ಎಂಬುದಾಗಿ ಪರಿಗಣಿಸಿರುವ ಅರಣ್ಯ ಇಲಾಖೆ, ತೆರವು ಕಾರ್ಯಾಚರಣೆ ಚುಕುರುಗೊಳಿಸಿದೆ. ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವ ಪ್ರಕರಣ ಹಾಗೂ 2015ರ ಬಳಿಕ ಅರಣ್ಯ ಪ್ರದೇಶ ಅತಿಕ್ರಮಣ ಮಾಡಿಕೊಂಡವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಮುಂದಾಗಿದೆ.

ಜಿಲ್ಲೆಯಲ್ಲಿ 29,000 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವಿದೆ. ಇದರಲ್ಲಿ ಚನ್ನಗಿರಿ ತಾಲ್ಲೂಕಿನಲ್ಲಿಯೇ ಸುಮಾರು 20,000 ಹೆಕ್ಟೇರ್‌ಗೂ ಅಧಿಕ ಪ್ರಮಾಣದ ಕಾಡು ಇದೆ. ಪರಿಸರ ಸಮತೋಲನಕ್ಕೆ ಶೇ 33ರಷ್ಟು ಕಾಡು ಅಗತ್ಯವಾದರೂ 6 ತಾಲ್ಲೂಕು ವ್ಯಾಪ್ತಿಯಲ್ಲಿರುವುದು ಶೇ 12ರಷ್ಟು ಅರಣ್ಯ ಮಾತ್ರ.

ದಾವಣಗೆರೆ ಕಂದಾಯ ಜಿಲ್ಲೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ವ್ಯಾಪ್ತಿಯ ಎರಡು ವಿಭಾಗಗಳಿವೆ. ದಾವಣಗೆರೆ, ನ್ಯಾಮತಿ, ಹೊನ್ನಾಳಿ, ಜಗಳೂರು ಹಾಗೂ ಹರಿಹರ ತಾಲ್ಲೂಕು ಒಂದು ವಿಭಾಗವಿದ್ದು, ಚನ್ನಗಿರಿ ತಾಲ್ಲೂಕು ಭದ್ರಾವತಿ ಉಪ ಅರಣ್ಯ ಸಂರಕ್ಷಣಾಧಿಕಾರಿ ವ್ಯಾಪ್ತಿಗೆ ಒಳಪಟ್ಟಿದೆ. ಅರಣ್ಯ ಒತ್ತುವರಿ ಹಾಗೂ ತೆರವಿಗೆ ಬಾಕಿ ಇರುವುದು ಕೂಡ ಚನ್ನಗಿರಿ ತಾಲ್ಲೂಕಿನಲ್ಲಿಯೇ ಹೆಚ್ಚು.


ಉದಯವಾಹಿನಿ ಚಿತ್ರ

> **ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಅತಿದೊಡ್ಡ ತೆರವು ಕಾರ್ಯಾಚರಣೆ**
>
> **ಜಿಲ್ಲೆಯಲ್ಲಿ ಸಾವಿರಾರು ಎಕರೆ ಅರಣ್ಯ ಒತ್ತುವರಿ ಎಂಬುದಾಗಿ ಪರಿಗಣಿಸಿದ ಪ್ರಕರಣಗಳಲ್ಲಿ ಸುಮಾರು 170 ಎಕರೆಯನ್ನು ಮಾತ್ರ ತೆರವುಗೊಳಿಸಲು ಸಾಧ್ಯವಾಗಿದೆ. ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ ಅರಣ್ಯ ವಲಯ ವ್ಯಾಪ್ತಿಯಲ್ಲಿ ಒತ್ತುವರಿ ತೆರವು ಕಾರ್ಯ ಚುರುಕಾಗಿ ನಡೆಯುತ್ತದೆ. ಶೃಂಗಾರ ಬಾಗು ಹಾಗೂ ಬುಳ್ಳನಾಯಕನಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ 52 ಎಕರೆ ಒತ್ತುವರಿ ತೆರವುಗೊಳಿಸಲಾಗಿದೆ. ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಅತಿದೊಡ್ಡ ತೆರವು ಕಾರ್ಯಾಚರಣೆ ಇದಾಗಿದೆ. ಹೊನ್ನಾಳಿ ತಾಲ್ಲೂಕಿನಲ್ಲಿ 15 ಎಕರೆ ಹಾಗೂ ಚನ್ನಗಿರಿ ವಲಯ ಅರಣ್ಯ ವ್ಯಾಪ್ತಿಯಲ್ಲಿ 5 ಎಕರೆ ತೆರವುಗೊಳಿಸಲಾಗಿದೆ.**

ಪಶ್ಚಿಮಘಟ್ಟದಲ್ಲಿ ಗುಡ್ಡ ಕುಸಿತದ ಪರಿಣಾಮಗಳನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರ, ಅರಣ್ಯ ಸಂರಕ್ಷಣೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಲು ಆದೇಶಿಸಿದೆ. ಕರ್ನಾಟಕ ಅರಣ್ಯ ಕಾಯ್ದೆ -1964 ಕಾಲಂ 64 'ಎ' ಪ್ರಕಾರ ಅರಣ್ಯ ಒತ್ತುವರಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳಲ್ಲಿ ತೆರವು ಕಾರ್ಯಾಚರಣೆ ಕೈಗೆತ್ತಿಕೊಳ್ಳುವಂತೆ ತಾಕೀತು ಮಾಡಿದೆ. 2015ರ ನಂತರದ ಅರಣ್ಯ ಒತ್ತುವರಿಯನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ 4,723 ಪ್ರಕರಣಗಳು ದಾಖಲಿಸಿದೆ. ಅರಣ್ಯ ಪ್ರದೇಶ ಸಮೀಕ್ಷೆ ನಡೆಸುವ ಅರಣ್ಯ ಇಲಾಖೆ ಸಿಬ್ಬಂದಿ ಒತ್ತುವರಿ ಎಂಬುದಾಗಿ ಎಸಿಎಫ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ. ಅಗತ್ಯ ದಾಖಲೆಗಳನ್ನು ಒದಗಿಸುವುದು ವಾರಸುದಾರರ ಕರ್ತವ್ಯ. ವಿಚಾರಣೆ ವೇಳೆ ಸೂಕ್ತ ದಾಖಲೆಗಳನ್ನು ಒದಗಿಸಲು ವಿಫಲವಾದರೆ ಎಸಿಎಫ್ ನ್ಯಾಯಾಲಯದಲ್ಲಿ 64 'ಎ' ಅಡಿ ಆದೇಶ ಪ್ರಕಟಿಸುತ್ತದೆ. ಹೀಗೆ ಆದೇಶವಾಗಿರುವ ಪ್ರಕರಣಗಳಲ್ಲಿಯೂ ತೆರವು ಕಾರ್ಯಾಚರಣೆ ಬಾಕಿ ಇದೆ.

ಮೂರು ಎಕರೆಗಿಂತ ಮೇಲ್ಪಟ್ಟು ಒತ್ತುವರಿ ಮಾಡಿಕೊಂಡ 1,032 ಪ್ರಕರಣಗಳನ್ನು ಗುರುತಿಸಲಾಗಿದೆ. ಬಹುತೇಕರು ಅಡಿಕೆ ತೋಟ ಮಾಡಿಕೊಂಡಿದ್ದು, ಒಂದಷ್ಟು ಜನರು ಮೆಕ್ಕೆಜೋಳ ಹಾಗೂ ತರಕಾರಿ ಬೆಳೆಯುತ್ತಿದ್ದಾರೆ. ಚನ್ನಗಿರಿ ಅರಣ್ಯ ವಲಯ ವ್ಯಾಪ್ತಿಯಲ್ಲಿ 172 ಪ್ರಕರಣಗಳಲ್ಲಿ 696 ಎಕರೆ 25 ಗುಂಟೆ ಅರಣ್ಯ ಒತ್ತುವರಿಯಾಗಿದೆ. ದಾವಣಗೆರೆ ಉಪ ಅರಣ್ಯ ಸಂರಕ್ಷಣಾಧಿಕಾರಿ ವ್ಯಾಪ್ತಿಯಲ್ಲಿ 34 ಪ್ರಕರಣಗಳಲ್ಲಿ 151 ಎಕರೆ ಒತ್ತುವರಿಯಾಗಿದೆ.

ಮೂರು ಎಕರೆಗಿಂತ ಕಡಿಮೆ ಒತ್ತುವರಿಯನ್ನು (ಪಟ್ಟಾ ಭೂಮಿಯೂ ಸೇರಿ) ತೆರವುಗೊಳಿಸದಂತೆ ರಾಜ್ಯ ಸರ್ಕಾರ ಸೂಚಿಸಿದೆ. ಅತಿಕ್ರಮಣ ಎಂಬುದು ಕಾನೂನು ಪ್ರಕಾರ ನಿರೂಪಿತವಾದರೂ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆಗೆ ಸಾಧ್ಯವಾಗುತ್ತಿಲ್ಲ. ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ ವಲಯ ಅರಣ್ಯ ವ್ಯಾಪ್ತಿಯಲ್ಲಿ ಇಂತಹ 2615 ಚನ್ನಗಿರಿ ವಲಯ ವ್ಯಾಪ್ತಿಯಲ್ಲಿ 760 ಪ್ರಕರಣಗಳನ್ನು ಗುರುತಿಸಲಾಗಿದೆ. ಉಳಿದ ತಾಲ್ಲೂಕುಗಳಲ್ಲಿ 110 ಪ್ರಕರಣಗಳಿವೆ. ಜನರು ಜೀವನೋಪಾಯಕ್ಕಾಗಿ ಮಾಡಿಕೊಂಡ ಒತ್ತುವರಿ ಕುರಿತು ಸರ್ಕಾರ ತಟಸ್ಥ ನಿಲುವು ತಳೆದಿದೆ.

> **400 ಎಕರೆಗೂ ಹೆಚ್ಚು ಅರಣ್ಯವನ್ನು ಒತ್ತುವರಿ ಎಂಬುದಾಗಿ ಪರಿಗಣಿಸಲಾಗಿದೆ. ಇದರಲ್ಲಿ ಮೂರು ಎಕರೆ ಮೇಲ್ಪಟ್ಟ ಒತ್ತುವರಿಯನ್ನು ಮಾತ್ರ ಕಾನೂನು ಪ್ರಕಾರ ತೆರವುಗೊಳಿಸಲಾಗುತ್ತಿದೆ. ಆಶಿಶ್ ರೆಡ್ಡಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಭದ್ರಾವತಿ ಈವರೆಗೆ ಆಗಿರುವ ದೊಡ್ಡ ಒತ್ತುವರಿಗಳನ್ನು ತೆರವುಗೊಳಿಸಲಾಗುತ್ತಿದೆ. ಹೊಸ ಒತ್ತುವರಿ ಆಗದಂತೆ ಎಚ್ಚರಿಕೆ ವಹಿಸಲಾಗಿದೆ. ಸರ್ಕಾರದ ನಿರ್ದೇಶನದ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ**
>
> **-ಶಶಿಧರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ದಾವಣಗೆರೆ**

---

## ಜೈಲಲ್ಲಿ ಅಧಿಕಾರಿಗಳಿಗೆ ಹೊಸ ತಲೆನೋವು ನಟನ ದರ್ಶನಕ್ಕೆ 'ಕೈದಿ ಫ್ಯಾನ್ಸ್' ಪಟ್ಟು

• **ಉದಯವಾಹಿನಿ ಬಳ್ಳಾರಿ**

ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್ ಅವರು ಬಳ್ಳಾರಿ ಜೈಲಿಗೆ ಸ್ಥಳಾಂತರಗೊಳ್ಳುತ್ತಿದ್ದಂತೆ ಬೇರೆ ಬೇರೆ ಜೈಲುಗಳಲ್ಲಿ ವಿಶೇಷ ಬೆಳವಣಿಗೆಗಳು ನಡೆಯುತ್ತಿವೆ. ಮೊನ್ನೆಯಷ್ಟೆ ಹಿಂಡಲಗಾ ಜೈಲಿನಲ್ಲಿ ಕೈದಿಗಳು ಪ್ರತಿಭಟನೆ ಮಾಡಿದ್ದರು. ಇದೀಗ ಬಳ್ಳಾರಿ ಜೈಲಲ್ಲಿ ನೆಚ್ಚಿನ ನಟನಿಗಾಗಿ ಕೈದಿಗಳು ಜೈಲಾಧಿಕಾರಿಗಳ ಮೇಲೆ ದುಂಬಾಲು ಬಿದ್ದಿದ್ದಾರೆ. ಇದು ಅಧಿಕಾರಿಗಳು ಹೊಸ ತಲೆ ನೋವಾಗಿ ಪರಿಣಮಿಸಿದೆ.

ಬಳ್ಳಾರಿ ಜೈಲಿನಲ್ಲಿ ಕೈದಿಗಳು ತಮ್ಮ ನೆಚ್ಚಿನ ನಟನನ್ನು ತೋರಿಸುವಂತೆ ಅಧಿಕಾರಿಗಳ ಮುಂದೆ ಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ. ನಟ ದರ್ಶನ್ ಬಳ್ಳಾರಿ ಕಾರಾಕಗೃತಕ್ಕೆ ಸ್ಥಳಾಂತರ ಆಗಿ ಸುಮಾರು ನಾಲ್ಕು ದಿನಗಳು ಕಳೆಯುತ್ತಾ ಬಂದಿವೆ.

ಈ ವೇಳೆ ಅಲ್ಲಿನ ಸಹ ಕೈದಿಗಳಲ್ಲಿ ಒಂದಷ್ಟು ಮಂದಿ ನಟ ದರ್ಶನ್ ಮೇಲೆ ಅಪಾರ ಅಭಿಮಾನ ಇಟ್ಟುಕೊಂಡಿದ್ದಾರೆ. ಹೀಗಾಗಿ ನೆಚ್ಚಿನ ನಟನನ್ನು ನೋಡಲು ಹಾತೊರೆಯುತ್ತಿದ್ದಾರೆ.

ಪರಪ್ಪನ ಅಗ್ರಹಾರದಲ್ಲಿ ಆರಂಭದಲ್ಲಿ ಹೊಂದಿಕೊಳ್ಳಲು ಕಷ್ಟಪಟ್ಟಿದ್ದ ನಟ ದರ್ಶನ್ ಅವರಿಗೆ ಇದೀಗ ಬಳ್ಳಾರಿ ಜೈಲಿನ ಪರಿಸರಕ್ಕೆ ಅವರು ಹೊಂದಿಕೊಳ್ಳುತ್ತಿದ್ದಾರೆ. ಈ ಮಧ್ಯೆ ಕೈದಿಗಳು ತಮ್ಮ ಸೆಲ್ ಮುಂದೆ ಓಡಾಡುವ ಜೈಲು ಅಧಿಕಾರಿಗಳು, ವಾರ್ಡನ್, ಸಿಬ್ಬಂದಿ ಮುಂದೆ ನಟನನ್ನು ತೋರಿಸುವಂತೆ ಅಂಚಲಾಚುತ್ತಿದ್ದಾರೆ.

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ಇಂದು ನೀವು ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಬಹುದು.

**ವೃಷಭ** ಇದು ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಬೇಕಾಗಿಲ್ಲ. ನಿಮ್ಮ ಸುತ್ತಲಿನ ಜನರು ನಿಮ್ಮ ಸ್ಥೈರ್ಯ ಮತ್ತು ಚೈತನ್ಯಗಳನ್ನು ಹೆಚ್ಚಿಸುತ್ತಾರೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

**ಮಿಥುನ** ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಹಣದ ಪರಿಸ್ಥಿತಿ ದಿನದಲ್ಲಿ ನಂತರ ಸುಧಾರಿಸುತ್ತದೆ.

**ಕರ್ಕಾಟಕ** ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ.

**ಸಿಂಹ** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ.

**ಕನ್ಯಾ** ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

**ತುಲಾ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ವೃಶ್ಚಿಕ** ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು.

**ಧನಸ್ಸು** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

**ಮಕರ** ಸಕಾರಾತ್ಮಕ ದೃಷ್ಟಿಕೋನ ಮತ್ತು ಆತ್ಮವಿಶ್ವಾಸದಿಂದ ನಿಮ್ಮ ಸುತ್ತಲಿರುವ ಜನರನ್ನು ಪ್ರಭಾವಿಸಬಹುದಾದ ಸಾಧ್ಯತೆಗಳಿವೆ. ಯಾರಿಂದಲೂ ಸಲಹೆಯನ್ನು ತೆಗದುಕೊಳ್ಳದೆ ಹಣವನ್ನು ಎಲ್ಲಿಯೂ ಹೂಡಿಕೆ ಮಾಡಬಾರದು.

**ಕುಂಭ** ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ಇಂದು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮೀನ** ಜನರು ಮತ್ತು ಅವರ ಉದ್ದೇಶಗಳ ಬಗ್ಗೆ ಅವಸರದ ತೀರ್ಮಾನ ಕೈಗೊಳ್ಳಬೇಡಿ –ಅವರು ಒತ್ತಡದಲ್ಲಿರಬಹುದು ಮತ್ತು ಅವರಿಗೆ ನಿಮ್ಮ ಸಹಾನುಭೂತಿ ಮತ್ತು ತಿಳುವಳಿಕೆಯ ಅಗತ್ಯವಿರುತ್ತದೆ.

# ಧಾರಾಕಾರ ಮಳೆ: ತುಂಬಿದ ಚಂದ್ರಂಪಳ್ಳಿ-ಮುಲ್ಲಾಮಾರಿ ಜಲಾಶಯ

## ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತ,ತುಂಬಿದ ಚಂದ್ರಂಪಳ್ಳಿ –ಮುಲ್ಲಾಮಾರಿ ಜಲಾಶಯ ಸಣ್ಣಕೆರೆಗಳು ಭರ್ತಿ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನಾದ್ಯಂತ ಕಳೆದ ಎಡ್ಮೂರು ದಿನಗಳಿಂದ ಸತತವಾಗಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಚಂದ್ರಂಪಳ್ಳಿ–ಮುಲ್ಲಾಮಾರಿ ನಾಗರಾಳ ಜಲಾಶಯ ಮತ್ತು ಸಣ್ಣಕೆರೆಗಳು ಭರ್ತಿಯಾಗಿ ಜನಜೀವನ ಅಸ್ತವ್ಯಸ್ತಗೊಂಡರೆ ಮತ್ತೊಂದೆಡೆ ಜಲಾಶಯ ನೀರು ಬಿಟ್ಟಿರುವುದರಿಂದ ಅನೇಕ ಸೇತುವೆಗಳು ಜಲಾವೃತಗೊಂಡು ರಸ್ತೆ ಸಂಚಾರಕ್ಕೆ ಅಡ್ಡಿಯಾದರೆ ಮತ್ತೊಂದೆಡೆ ಸುಮಾರು ತಾಲ್ಲೂಕಿನಾದ್ಯಂತ 30–35ಮನೆಗಳಿಗೆ ನೀರು ನುಗ್ಗಿ ದವಸ ಧ್ಯಾನಗಳು ನಷ್ಟವಾದರೆ 12–15 ಮನೆಗಳು ಕುಸಿದುಬಿದ್ದಿವೆ.

ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿಯ ನಾಗರಾಳ ಜಲಾಶಯ ಚಂದ್ರಂಪಳ್ಳಿ ಜಲಾಶಯ ಸೇರಿದಂತೆ 12–14 ಸಣ್ಣಕೆರೆಗಳು ತುಂಬಿದ್ದು ಎಲ್ಲಾ ಜಲಾಶಯ ಹಾಗೂ ಸಣ್ಣಕೆರೆಗಳ ನೀರು ಹರಿದು ಬಿಡಲಾಗಿದೆ ಇದರಿಂದ ತಾಲ್ಲೂಕಿನ ಚಿಮ್ಮಾನಚೋಡ,ಕನಕಪುರ,ಗಾರಂಪಳ್ಳಿ,ತಾಜಲಾಪೂರ,ಪೋಲಕಪಳ್ಳಿ–ಅಣವಾರ,ಗಂಗನಪಳ್ಳಿ– ಅಣವಾರ,ಭಕ್ತಂಪಳ್ಳಿ–ಗರಗಪಳ್ಳಿ, ಸೇರಿದಂತೆ ವಿವಿಧ ಬ್ರೀಜ್ ಕಂ ಬ್ಯಾರೇಜ್ ಹಾಗೂ ಸೇತುವೆಗಳು ಮುಳುಗಡೆಯಾಗಿ ಸಂಚಾರಕ್ಕೆ ಅಡ್ಡಿಯಾಗಿ ಗ್ರಾಮದ ಜನರು ಗ್ರಾಮದಲ್ಲೇ ಠಿಕಾಣಿ ಹೂಡುವಂತೆ ಮಳೆರಾಯ ಮಾಡಿದೆ.

ಕಳೆದ ಅನೇಕ ವರ್ಷಗಳಿಂದ ಮನೆಗಳಿಗೆ ನೀರು ನುಗ್ಗಿ ಹಾನಿಯಾಗುತ್ತಿದ್ದರು ತಾತ್ಕಾಲಿಕವಾಗಿ ಅಧಿಕಾರಿಗಳು ಜನಪ್ರತಿನಿಧಿಗಳು ಆಗಮಿಸಿ ವರದಿ ಪಡೆದು ಹೋಗುತ್ತಾರೆ ಆದರೆ ಇಲ್ಲಿಯವರೆಗೆ ಯಾವುದೇ ಶಾಶ್ವತ ಪರಿಹಾರ ದೊರಕಿಸಿಕೊಡುವಲ್ಲಿ ಸರ್ಕಾರ ಜನಪ್ರತಿನಿಧಿಗಳು ವಿಫಲವಾಗಿದ್ದಾರೆ ಎಂದು ಯುವ ಮುಖಂಡ ರಾಯಪ್ಪಗೌಡ ಬೆನಕನಳ್ಳಿ ತಿಳಿಸಿದ್ದಾರೆ.

**ಕಳೆದ ಎರಡು ದಿನಗಳ ಮಳೆ ವಿವರ:** ಚಿಂಚೋಳಿ 62.2ಮಿಮೀ, ಕುಂಚಾವರಂ 65.4ಮಿಮೀ, ಸುಲೇಪೇಟ 48.6ಮಿಮೀ, ಚಿಮ್ಮಾನಚೋಡ 56.6ಮಿಮೀ, ಐನಾಪೂರ 35.6ಮಿಮೀ, ಕೋಡ್ಲಿ 62.2ಮಿಮೀ, ನಿಡಗುಂದಾ 70ಮಿಮೀ ಮಳೆಯಾಗಿದೆ.

**ಕೆಳದಂಡೆ ಮುಲ್ಲಾಮಾರಿ ನಾಗರಾಳ ಜಲಾಶಯ:** ರವಿವಾರ ನಾಲ್ಕು ಗೇಟ್ ಮೂಲಕ 4000ಸಾವಿರ ಕ್ಯೂಸೇಕ್ ನೀರು ಹೊರ ಬೀಡಲಾಗಿದೆ,ಸೋಮವಾರ ಎರಡು ಗೇಟ್ ಗಳಿಂದ 1600ಕ್ಯೂಸೇಕ್ ನೀರು ಮುಲ್ಲಾಮಾರಿ ನದಿಗೆ ಹೊರಬೀಡಲಾಗಿದೆ ಅಷ್ಟೆ ಕ್ಯೂಸೇಕ್ ನೀರು ಒಳಹರಿವುಯಿದೆ ಎಂದು ಎಇಇ ಅಮೃತ ಪವ್ವಾರ ತಿಳಿಸಿದ್ದಾರೆ.

**ಚಂದ್ರಂಪಳ್ಳಿ ಜಲಾಶಯ:** ಚಂದ್ರಂಪಳ್ಳಿ ಜಲಾಶಯದಿಂದ ರವಿವಾರ 3500ಕ್ಯೂಸೇಕ್ ನೀರು ಹೊರಬೀಡಲಾಗಿದ್ದು ಸೋಮವಾರ 800ಕ್ಯೂಸೇಕ್ ನೀರು ಹೊರಬೀಡಲಾಗಿದೆ ಅಷ್ಟೆ ಕ್ಯೂಸೇಕ್ ನೀರು ಒಳ ಹರಿವು ಬರುತ್ತಿದೆ ಎಂದು ಎಇಇ ಚೇತನ ಕಳಸ್ಕರ ತಿಳಿಸಿದ್ದಾರೆ.

ನದಿಯ ಪಾತ್ರದಲ್ಲಿರುವ ಗ್ರಾಮಗಳಾದ ಐನೋಳ್ಳಿ, ಚಂದ್ರಂಪಳ್ಳಿ, ಚಿಮ್ಮಾನಚೋಡ, ಕನಕಪುರ, ತಾಜಲಾಪೂರ,ಗಾರಂಪಳ್ಳಿ,ಗೌಡನಹಳ್ಳಿ, ಗರಗಪಳ್ಳಿ, ಅಣವಾರ, ಪೋಲಕಪಳ್ಳಿ ,ಇರಕಪಳ್ಳಿ,ಭಕ್ತಂಪಳ್ಳಿ,ಚಿತ್ರಸಾಲ,ಖರ್ಚಖೇಡ ಗ್ರಾಮಗಳ ಸಾರ್ವಜನಿಕರು ರೈತರು ಏಚ್ಚರಿಕೆಯಿಂದ ಇರಬೇಕು ಯಾರು ಕೂಡ ನದಿಯ ದಂಡೆಯಲ್ಲಿ ಹೋಗಬಾರದು ಎಂದು ಜಲಾಶಯಗಳ ಎಇಇ ಅಮೃತ ಚವ್ಹಾಣ,ಚೇತನ ಕಳಸ್ಕರ ತಿಳಿಸಿದ್ದಾರೆ.

ಮಳೆಯಿಂದ ಕಲಬುರ್ಗಿ ಜಿಲ್ಲಾಧಿಕಾರಿಗಳು ಎಲ್ಲಾ ಶಾಲೆಗಳಿಗೆ ರಜೆ ಘೋಷಿಸಿದರು. ಮಳೆಯಿಂದ ಕಲಬುರ್ಗಿ ಹೋಗುವ ಗೋಟೂರ ಮುಖ್ಯ ರಸ್ತೆ ಸೇತುವೆ ಮೇಲೆ ನೀರು ಬಂದಿರುವುದರಿಂದ ರಸ್ತೆ ಸಂಚಾರ ಬಂದ್ ಮಾಡಲಾಗಿತ್ತು,ಚಿಂಚೋಳಿ ತಾಂಡೂರಗೆ ಹೋಗುವ ರಸ್ತೆ ಕೂಡ ಮಿರಿಯಾಣ ಗಡಿಭಾಗದಲ್ಲಿ ಸೇತುವೆ ಮೇಲೆ ನೀರು ಹರಿಯುವುದರಿಂದ ರಸ್ತೆ ಸಂಚಾರ ಕೆಲಹೊತ್ತು ಬಂದ್ ಆಗಿತ್ತು,ಗಾರಂಪಳ್ಳಿ ಗ್ರಾಮಕ್ಕೆ ಹೋಗುವ ಸೇತುವೆ ಮುಳುಗಡೆ ಆಗಿರುವುದರಿಂದ ಕುರಿಗಾಯಿಗಳಿಗೆ ಕುರಿಗಳು ಮನೆಗಳಿಗೆ ಹೋಗಲು ಹರಸಾಹಸ ಪಡಬೇಕಾಯಿತು ಕೊನೆಯಲ್ಲಿ ಸಾರ್ವಜನಿಕರ ಸಹಾಯದಿಂದ ಸೇತುವೆ ಜೀವ ಕೈಯಲ್ಲಿ ಹಿಡಿದುಕೊಂಡು ದಾಟಿಸಲಾಯಿತು ಅನೇಕ ವರ್ಷಗಳಿಂದ ಗಾರಂಪಳ್ಳಿ ಸೇತುವೆ ಮೇಲ್ದರ್ಜೆಗೆ ಏರಿಸುವಂತೆ ಸಚಿವರಿಗೆ ಶಾಸಕರಿಗೆ ಉಸ್ತುವಾರಿ ಸಚಿವರಿಗೆ ಅನೇಕ ಬಾರಿ ಮನವಿಪತ್ರ ಹಾಗೂ ಹೋರಾಟ ಮಾಡಿದರು ಯಾರು ಗಮನ ಕೊಡುತ್ತಿಲ್ಲಾ ಶೀಘ್ರದಲ್ಲೇ ಸೇತುವೆ ಮೇಲ್ದರ್ಜೆಗೆರಿಸಬೇಕು ಎಂದು ಸಮಾಜ ಸೇವಕ ಗೋಪಾಲ ಗಾರಂಪಳ್ಳಿ ತಿಳಿಸಿದ್ದಾರೆ. ತಾಜಲಾಪೂರ ಗ್ರಾಮಕ್ಕೆ ಹೋಗುವ ಸೇತುವೆ ರಸ್ತೆ ಬಂದ್ ಆಗಿರುವುದರಿಂದ ಗ್ರಾಮದ ಜನರು ತುರ್ತು ಕೆಲಸ ಹಾಗೂ ಆಸ್ಪತ್ರೆಗಳಿಗೆ ತೆರಳಲು ಜನರು ಬಹಳಷ್ಟು ಕಷ್ಟಪಡಬೇಕಾಗುತ್ತಿದೆ ಸರ್ಕಾರಕ್ಕೆ ಅನೇಕ ಬಾರಿ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ ಸೇತುವೆ ಮೇಲ್ದರ್ಜೆಗೆರಿಸಬೇಕು ಎಂದು ಸತೀಶರೆಡ್ಡಿ ತಾಜಲಾಪೂರ ತಿಳಿಸಿದ್ದಾರೆ.





☛ ಉದಯವಾಹಿನಿ ಚಿತ್ರ

### ಕುಂಚಾವರಂ ವಲಯ

ಕುಂಚಾವರಂ ವಲಯದಲ್ಲಿ ದಟ್ಟವಾದ ವನ್ಯಜೀವಿ ಧಾಮದ ಸುಂದರವಾದ ಅರಣ್ಯ ಪ್ರದೇಶದಲ್ಲಿ ಅತಿಯಾದ ಮಳೆ ಸುರಿಯುತ್ತಿರುವುದರಿಂದ ಎತ್ತಿಪೋತ,ಮಾಣಿಕಪುರ ಜಲಪಾತ ಮೈತುಂಬಿ ಹರಿಯುತ್ತಿದೆ,ತೆಲಂಗಾಣ ಆಂದ್ರಪ್ರದೇಶ ರಾಜ್ಯಗಳಲ್ಲಿ ಅತಿಯಾದ ಮಳೆ ಬರುತ್ತಿರುವುದರಿಂದ ಅರಣ್ಯ ಪ್ರದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಬರುತ್ತಿದೆ ಕಾರಣ ಎತ್ತಿಪೋತ ಮಾಣಿಕಪುರ ಜಲಪಾತ ನೋಡಲು ದೂರ ದೂರದಿಂದ ಪ್ರವಾಸಿಗರು ಎತ್ತಿಪೋತ ಮಾಣಿಕಪುರ ಜಲಪಾತ ನೋಡಲು ಬರುತ್ತಿದ್ದಾರೆ.

### ಮಳೆಯಿಂದ ಬೆಳೆ ನಷ್ಟ

ಸತತವಾಗಿ ಮೂರು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಜಲಾಶಯ ಹಳ್ಳಕೊಳ್ಳಗಳು ನದಿಗಳು ಚರಂಡಿಗಳಲ್ಲಿ ನೀರು ಹರಿಯುತ್ತಿರುವುದರಿಂದ ನದಿಯ ದಂಡೆಯಲ್ಲಿರುವ ರೈತರ ಅನೇಕ ಹೊಲಗದ್ದೆಗಳಲ್ಲಿ ಬೆಳೆ ನಷ್ಟವಾಗಿದೆ ಅಧಿಕಾರಿಗಳು ಜನಪ್ರತಿನಿಧಿಗಳು ರೈತರ ನೆರವಿಗೆ ಬಂದು ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಮುಖಂಡ ಮಸ್ತಾನಪಟೇಲ ನೀಮಾಹೋಸಳ್ಳಿ ಮನವಿ ಮಾಡಿದ್ದಾರೆ.

### ಮನೆಗಳಲ್ಲಿ ನುಗ್ಗಿದ ನೀರು

ಮತ್ತೊಂದೆಡೆ ಸತತವಾಗಿ ಧಾರಾಕಾರ ಮಳೆ ಹಾಗೂ ಜಿಣಿಜಿಣಿಯಾಗಿ ಸುರಿಯುತ್ತಿರುವ ಮಳೆಯಿಂದ ಅನೇಕ ಗ್ರಾಮಗಳಾದ ಬೆನಕನಳ್ಳಿ,ರೋಡ್ ಕಲ್ಲೂರ, ಚಿಂಚೋಳಿ, ಚಂದಾಪುರ,ದೇಗಲಮಡಿ,ಐನೋಳ್ಳಿ,ಕೋಳ್ಳೂರ, ಸೇರಿದಂತೆ ಅನೇಕ ಗ್ರಾಮಗಳ ಮನೆಗಳಲ್ಲಿ ನೀರು ನುಗ್ಗಿ ದವಸ ಧಾನ್ಯಗಳು ಹಾಳಾಗಿವೆ,ಬೆನಕನಳ್ಳಿ ಒಂದೇ ಗ್ರಾಮದಲ್ಲಿ 25ಕ್ಕೂ ಹೆಚ್ಚು ಮನೆಗಳಲ್ಲಿ ನೀರು ನುಗ್ಗಿ ದವಸ ಧಾನ್ಯಗಳನ್ನು ನಷ್ಟವಾಗಿವೆ.

**ಮಳೆಗೆ ಜನಜೀವನ ಅಸ್ತವ್ಯಸ್ತ**

## ಮುಸ್ಲಿಂ ಸಂಪ್ರದಾಯದಂತೆ ಫಕಿರೇಶ್ವರ ಜಾತ್ರಾ ಮಹೋತ್ಸವ

• **ಉದಯವಾಹಿನಿ, ಮುದ್ದೇಬಿಹಾಳ**

ಮುದ್ದೇಬಿಹಾಳ ಶಿರೋದ ಹಿಂದೂ ಮುಸ್ಲಿಂ ಭಾವೈಕ್ಯತೆಯ ಶ್ರೀ ಫಕಿರೇಶ್ವರ ಜಾತ್ರೆ ಮಹೋತ್ಸವ ಮಂಗಳವಾರ ಸಂಪನ್ನಗೊಂಡಿತು.

ರವಿವಾರದಂದು ಲಿಂಗೈಕ್ಯ ನಿಜಲಿಂಗಯ್ಯಾ ಶಿವಯೋಗಿಮಠ ಅವರ ಮನೆಯಿಂದ ಫಕಿರೇಶ್ವರ ಗದ್ದುಗೆಯ ಉತ್ಸವ ಮೂರ್ತಿ ಪಲ್ಲಕ್ಕಿ ಮೆರವಣಿಗೆ ಮಾಡಲಾಗಿತ್ತು ಶ್ರಾವಣ ಮಾಸದ ಕೊನೆಯ ಸೋಮವಾರ ಜಾತ್ರೆ ಮತ್ತು ಜಂಗಮ ವಟುಗಳಿಗೆ ಅಯ್ಯಚಾರ ದೀಕ್ಷೆ ಧರ್ಮಸಭೆ ಕಾರ್ಯಕ್ರಮ ಜರುಗಿತ್ತು ಮಂಗಳವಾರ ಜಾತ್ರೆಯ ಕೊನೆಯ ದಿನ ಮರಿಪ್ರಸ್ತ ಅಂಥ ಅನ್ನ ಪ್ರಸಾದ ಇರುತ್ತದೆ. ಹಿಂದೂ ಮುಸ್ಲಿಂ ಭಾವೈಕ್ಯತೆಯ ಶ್ರೀಮಠದ ಸಾಂಪ್ರದಾಯದಂತೆ ಶಿರೋಳದ ಮುಲ್ಲಾ ಮನೆತನದ ಮಹಿಬೂಬ ದಸ್ತಿಗೀರಸಾಬ ತಮದಡ್ಡಿ ಅವರು ದೇವಾಲಯದಲ್ಲಿ ಮತ್ತು ಪಾದಗಟ್ಟಿಯಲ್ಲಿ ಫಾತೆ ನೀಡಿದರು. ಈ ಮೂಲಕ ಜಾತ್ರೆ ಸಂಪನ್ನವಾಯಿತು.



☛ ಉದಯವಾಹಿನಿ ಚಿತ್ರ

ಶ್ರಾವಣ ಮಾಸದ ಒಂದು ತಿಂಗಳ ಅನ್ನ ಪ್ರಸಾದ ಮಾಡಿದ ಜಾತ್ರಾ ಕಮಿಟಿ ಬರುವ ಅಮವಾಸ್ಯೆಯಿಂದ ಪ್ರತಿ ಅಮವಾಸ್ಯೆ ಫಕಿರೇಶ್ವರ ದೇವಾಲಯದಲ್ಲಿ ಅನ್ನ ಪ್ರಸಾದ ಮಾಡುವ ಆಶಯವನ್ನು ಹೊಂದಿದ್ದಾರೆ ಸದ್ಭಕ್ತರು ಪ್ರತಿ ಅಮವಾಸ್ಯೆ ಮಹಾ ಪ್ರಸಾದ ಸ್ವೀಕರಿಸಲು ಕೋರಿದ್ದಾರೆ.

ಈ ವೇಳೆ ಚನ್ನವೀರಸ್ವಾಮಿ ಶಿವಯೋಗಿಮಠ, ಡಾ.ಸಿ ಕೆ ಶಿವಯೋಗಿಮಠ, ಕುಮಾರಸ್ವಾಮಿ ಶಿವಯೋಗಿಮಠ, ನಿಂಗರಾಜ ಓತಗೇರಿ, ಆನಂದ ಶಿವಯೋಗಿಮಠ, ಶಿವಾನಂದ ಹಿರೇಮಠ, ರಾಜಶೇಖರ ಶಿವಯೋಗಿಮಠ, ಶಿವಾನಂದ ಹಿರೇಮಠ ಮುಂತಾದವರು ಇದ್ದರು.

## ಅರಣ್ಯ ಇಲಾಖೆ ಕಿರುಕುಳ ಆರೋಪ: ರೈತರ ಪ್ರತಿಭಟನೆ

• **ಉದಯವಾಹಿನಿ, ತರೀಕೆರೆ**

ತಾಲ್ಲೂಕಿನ ತರೀಕೆರೆ ಮತ್ತು ಲಕ್ಕವಳ್ಳಿ ಅರಣ್ಯ ವಲಯಗಳ ವ್ಯಾಪ್ತಿಯ ಕೆಲವು ಭಾಗಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅರಣ್ಯ ಮತ್ತು ಎಂಪಿಎಂ ನೌಕರರು ಅನಗತ್ಯ ಕಿರುಕುಳ ನೀಡುತ್ತಿರುವುದನ್ನು ವಿರೋಧಿಸಿ ರೈತರು ಪಟ್ಟಣದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಶಾಸಕ ಜಿ.ಎಚ್. ಶ್ರೀನಿವಾಸ್, ಮಾಜಿ ಶಾಸಕ ಡಿ.ಎಸ್. ಸುರೇಶ್ ಮತ್ತು ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಎಂ. ನರೇಂದ್ರ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ರೈತರ ಪ್ರತಿಭಟನೆಗೆ ಬೆಂಬಲ ನೀಡಿದ್ದವು. ಎಪಿಎಂಸಿ ಆವರಣದಿಂದ ಅಪಾರ ಸಂಖ್ಯೆಯ ರೈತರು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಮಿನಿ ವಿಧಾನ ಸೌಧದ ಮುಂಭಾಗಕ್ಕೆ ಬಂದು, ಅಲ್ಲಿ ಬಹಿರಂಗ ಸಭೆ ನಡೆಸಿದರು.



☛ ಉದಯವಾಹಿನಿ ಚಿತ್ರ

**ಎಂಪಿಎಂ ನೌಕರರು ಅನಗತ್ಯ ಕಿರುಕುಳ**

ಪಾರಂಪರಿಕ ಅರಣ್ಯ ವಾಸಿಗಳಿಗೆ ಹಕ್ಕು ಪತ್ರ ನೀಡಬೇಕು. ಅರಣ್ಯ ವ್ಯಾಪ್ತಿಯಲ್ಲಿರುವ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಬೇಕು. ಭದ್ರಾ ಜಲಾಶಯದ ಮುಳುಗಡೆ ಸಂತ್ರಸ್ತರಿಗೆ ಆರಣ್ಯ ಇಲಾಖೆ ನೋಟಿಸ್ ನೀಡಿ ಕಿರುಕುಳ ನೀಡುತ್ತಿರುವುದನ್ನು ನಿಲ್ಲಿಸಬೇಕು. ಪಾರಂಪರಿಕ ಅರಣ್ಯ ಹಕ್ಕು ಕಾಯ್ದೆ ಅಡಿ 75 ವರ್ಷ ಕಾಲಮಿತಿಯನ್ನು ಸಡಿಲಗೊಳಿಸಿ 25 ವರ್ಷಕ್ಕೆ ಸೀಮಿತಗೊಳಿಸಬೇಕು. ಅರಣ್ಯ ಹಕ್ಕು ಕಾಯ್ದೆ ಅಡಿ ಮಂಜೂರಾದ ಬುಡಕಟ್ಟು ಜನಾಂಗದ ಭೂಮಿಗಳಿಗೆ 9 ರಿಂದ 11ಕ್ಕೆ ಸೇರಿಸುವುದು. ಅರಣ್ಯ ಮತ್ತು ಎಂ.ಪಿ.ಎಂ. ಅಧಿಕಾರಿಗಳು ರೈತರಿಗೆ ತೊಂದರೆ ಕೊಡುತ್ತಿರುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ರೈತ ಮುಖಂಡರಾದ ತೀರ್ಥಪ್ಪ, ಮೂಡಲಗಿರಿಯಪ್ಪ, ಮಹೇಶಣ, ಸೋಮಣ್ಣ, ಜಯ ಕರ್ನಾಟಕ ಜಗದೀಶ್, ಕೆ.ಆರ್. ಧೃವಕುಮಾರ್, ಮುನಿಸ್ವಾಮಣ್ಣ, ಗಂಗಾಧರ, ವಸಂತಕುಮಾರ್, ಎಚ್.ಎನ್. ಮಂಜುನಾಥ್, ಸೀತಾರಾಮ್ ಮತ್ತಿತರರು ಇದ್ದರು.

## ಪಿಓಪಿ ಗಣೇಶ ಮೂರ್ತಿಗಳನ್ನು ಬಳಸಿದರೆ ಕಾನೂನು ಕ್ರಮ: ಪುರಸಭೆ ಮುಖ್ಯಾಧಿಕಾರಿ

• **ಉದಯವಾಹಿನಿ, ಚಿತ್ರದುರ್ಗ**

ಸರ್ಕಾರ ಸೂಚನೆಯಂತೆ ಪಿ.ಓ.ಪಿ ಮತ್ತು ರಾಸಾಯನಿಕ ಗುಣವುಳ್ಳ ವಸ್ತುಗಳನ್ನು ಬಳಸಿ ಗಣಪತಿ ವಿಗ್ರಹಗಳ ತಾಯಾರಿಕೆ, ಸಂಗ್ರಹ, ಮಾರಾಟ ಮತ್ತು ವಿಸರ್ಜನೆಯನ್ನು ನಿಷೇಧಿಸಲಾಗಿದೆ. ಸಾರ್ವಜನಿಕರು ಪರಿಸರ ಸ್ನೇಹಿ, ಬಣ್ಣ ರಹಿತ, ಮಣ್ಣಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು. ಸಾರ್ವಜನಿಕವಾಗಿ ಮೂರ್ತಿ ಪ್ರತಿಷ್ಠಾಪನೆ ಮೊದಲು ಸಕ್ಷಮ ಪ್ರಾಧಿಕಾರ ಅಥವಾ ಇಲಾಖೆಗಳಿಂದ ಅನುಮತಿ ಪಡೆಯಬೇಕು. ಗಣೇಶ ಉತ್ಸವಗಳಲ್ಲಿ ಏಕ ಬಳಕೆ ಪ್ಲಾಸ್ಟಿಕನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಸ್ವಚ್ಚತೆಯನ್ನು ಕಾಪಾಡುವುದು ದಿನನಿತ್ಯ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪುರಸಭೆ ವಾಹನಕ್ಕೆ ನೀಡಬೇಕು. ಹೊಳಲ್ಕೆರೆ ಪಟ್ಟಣದಲ್ಲಿನ ಗಣೇಶ ವಿಸರ್ಜನೆಗಾಗಿ ಪುರಸಭೆಯಿಂದ ತಾಲ್ಲೂಕು ಪಂಚಾಯತ್ ಹಿಂಭಾಗದಲ್ಲಿರುವ ಎನ್.ಇ.ಎಸ್ ಕಾಲೋನಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಯೇ ಸ್ಥಳದಲ್ಲಿಯೇ ಗಣಪತಿ ವಿಗ್ರಹಗಳನ್ನು ವಿಸರ್ಜಿಸಬೇಕು. ಆದೇಶವನ್ನು ಮೀರಿ ಪಿ.ಓ.ಪಿ ಮತ್ತು ರಾಸಾಯನಿಕ ಗುಣವುಳ್ಳ ವಸ್ತುಗಳನ್ನು ಬಳಸಿ ವಿಗ್ರಹಗಳನ್ನು ತಯಾರಿಸುತ್ತಿರುವುದು ಮತ್ತು ಮಾರಾಟ ಮಾಡುತ್ತಿರುವುದು ಕಂಡುಬಂದಲ್ಲಿ ಅಥವಾ ನಿಗಧಿತ ಸ್ಥಳದಲ್ಲಿ ಬಿಟ್ಟು ಬೇರೆ ಕಡೆ ವಿಸರ್ಜನೆ ಮಾಡುತ್ತಿರುವುದು ತಿಳಿದುಬಂದಲ್ಲಿ, ಮೂರ್ತಿಗಳನ್ನು ವಶಪಡಿಸಿಕೊಳ್ಳುವುದಲ್ಲದೇ ದಂಡ ಮತ್ತು ಕಾನೂನು ಕ್ರಮಕ್ಕೆ ಗೊಳ್ಳಲಾಗುವುದು ಹೊಳಲ್ಕೆರೆ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಂತಿ ಸಾಮರಸ್ಯದಿಂದ ಹಬ್ಬಗಳನ್ನು ಆಚರಿಸಿ : ಎಸ್.ಪಿ.ಶೋಭಾರಾಣಿ

• **ಉದಯವಾಹಿನಿ, ಸಿರುಗುಪ್ಪ**

ನಗರದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಪೋಲೀಸ್ ಇಲಾಖೆ ವತಿಯಿಂದ ನಡೆದ ಶ್ರೀಗೌರಿ ಗಣೇಶ ಮತ್ತು ಈದ್‌ಮಿಲಾದ್ ಹಬ್ಬಗಳ ಶಾಂತಿ ಸಭೆಯನ್ನುದ್ದೇಶಿಸಿ ಎಸ್.ಪಿ. ಡಾ.ಶೋಭಾರಾಣಿ.ವಿ.ಜೆ ಅವರು ಮಾತನಾಡಿದರು.

ಧಾರ್ಮಿಕತೆಯ ಹಬ್ಬಗಳನ್ನು ಶ್ರದ್ದಾ ಭಕ್ತಿಯಿಂದ ಆಚರಿಸಬೇಕಿದೆ. ಗಣೇಶನ ಪ್ರತಿಷ್ಟಾಪನೆಗೆ ಅನುಮತಿ ಕಡ್ಡಾಯವಾಗಿದ್ದು, ಪರ್ಮಿಷನ್‌ಗಾಗಿ ವಿವಿಧ ಇಲಾಖೆಗಳಿಗೆ ಅಲೆಯುವುದನ್ನು ತಪ್ಪಿಸಲು ಒಂದು ಕಡೆಯಲ್ಲಿ ಅನುಮತಿ ನೀಡುವ ಕೇಂದ್ರವನ್ನು ಅಳವಡಿಸಲಾಗುತ್ತದೆ. ಶ್ರೀ ಗಣೇಶನನ್ನು ಪ್ರತಿಷ್ಟಾಪನೆಯ ಸ್ಥಳದಲ್ಲಿ ಮಹಿಳೆಯರು, ಮಕ್ಕಳು, ವೃದ್ದರು ಪೂಜೆಗೆಂದು ಬರುತ್ತಾರೆ. ರಾತ್ರಿ ವೇಳೆ ವಿದ್ಯುತ್ ಬೆಳಕಿನ ಸೌಲಭ್ಯವಿರಬೇಕು. ಕೂರಿಸಿದ ದಿನದಿಂದ ವಿಸರ್ಜನೆಯವರೆಗೂ ಸುರಕ್ಷತಾ ಮುಂಜಾಗ್ರತೆ ಆಯೋಜನೆಯ ವ್ಯವಸ್ಥಾಪಕರು ವಹಿಸಬೇಕು. ಶ್ರೀರಾಮ ಸೇನೆಯ ಮುಖಂಡ ಕಂಬಳಿ ಮಲ್ಲಿಕಾರ್ಜುನ ಮಾತನಾಡಿ ಬ್ರಿಟಿಷರ ವಿರುದ್ದ ಹೋರಾಟ ನಡೆಸಲೆಂದು ಜನರನ್ನು ಒಗ್ಗೂಡಿಸಲು ಸ್ವಾತಂತ್ರ್ಯ ಪೂರ್ವದಿಂದಲೂ ಬಾಲಾ ಗಂಗಾಧರ ತಿಲಕ್ ಅವರು ಈ ಗಣೇಶ ಪ್ರತಿಷ್ಟಾಪನೆಯ ಆಚರಣೆಯನ್ನು ಸಾರ್ವಜನಿಕ ಹಬ್ಬದಂತೆ ಆಚರಿಸಿದ್ದರು. ಯಾರೋ ಕಿಡಿಗೇಡಿಗಳು, ಎಲ್ಲೋ ನಡೆಯುವ ಘಟನೆಗಳ ಹೋಲಿಕೆ ಮಾಡಿ ಇಂತಹ ಸಾರ್ವಜನಿಕ ಹಬ್ಬಗಳಿಗೂ ಕಾನೂನು ಬಿಗಿಗೊಳಿಸುವುದು ವಿಷಾದನೀಯವೆಂದರು.

ಇದೇ ವೇಳೆ ತಹಶೀಲ್ದಾರ್ ಹೆಚ್.ವಿಶ್ವನಾಥ, ಗ್ರೇಡ್–2 ತಹಶೀಲ್ದಾರ್ ಸತ್ಯಮ್ಮ, ಇ.ಓ ಪವನ್ ಕುಮಾರ್ ಎಸ್.ದಂಡಪ್ಪನವರ್, ನಗರಸಭೆ ಆಯುಕ್ತ ಗುರುಪ್ರಸಾದ್, ಡಿವೈಎಸ್‌ಪಿ ವೆಂಕಟೇಶ, ಅಬಕಾರಿ ನಿರೀಕ್ಷಕಿ ಕೀರ್ತನಾ, ಅಗ್ನಿಶಾಮಕ ಪ್ರಭಾರಿ ಠಾಣಾಧಿಕಾರಿ ಆರ್.ಎಲ್.ಪೂಜಾರಿ, ನಗರಸಭೆ ಅಧ್ಯಕ್ಷೆ ರೇಣುಕಮ್ಮ, ತೆಕ್ಕಲಕೋಟೆ ಪಟ್ಟಣ ಪಂಚಾಯಿತಿ ಅಧ್ಯಕ್ಷ ಎಸ್. ಆನಂದಪ್ಪ ಇನ್ನಿತರ ಇಲಾಖೆಗಳ ಅಧಿಕಾರಿಗಳು ಮತ್ತು ಸಾರ್ವಜನಿಕರು ಇದ್ದರು.



☛ ಉದಯವಾಹಿನಿ ಚಿತ್ರ


> ಸಾರ್ವಜನಿಕರ ಹಿತದೃಷ್ಟಿಯಿಂದ ಡಿಜೆ ನಿಷೇದಿಸಲಾಗಿದೆ. ನಮ್ಮ ಇಲಾಖೆಯೊಂದಿಗೆ ಅರಣ್ಯ, ಜೆಸ್ಕಾಂ, ಅಗ್ನಿಶಾಮಕ, ನಗರಸಭೆ ಇನ್ನಿತರ ಇಲಾಖೆಗಳ ಸಲಹೆ ಸೂಚನೆಗಳು ಪಡೆಯುವುದು ಅಗತ್ಯ
> –ಎಸ್.ಪಿ.ಶೋಭಾರಾಣಿ

## ಸರ್ಕಾರಿ ಬಾಲಮಂದಿರಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭೇಟಿ, ಪರಿಶೀಲನೆ

• **ಉದಯವಾಹಿನಿ, ಚಿತ್ರದುರ್ಗ**

ನಗರದ ಜಿಲ್ಲಾ ಪಂಚಾಯತ್ ಹತ್ತಿರದ ಬಾಲಕರ ಮತ್ತು ಬಾಲಕಿಯರ ಸರ್ಕಾರಿ ಬಾಲಮಂದಿರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಕ್ಕಳಿಗೆ ಪೌಷ್ಠಿಕ ಹಾಗೂ ಗುಣಮಟ್ಟದ ಆಹಾರ ನೀಡಬೇಕು. ಮಕ್ಕಳ ಸುರಕ್ಷತೆ ಹೆಚ್ಚಿನ ಒತ್ತು ನೀಡಬೇಕು. ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿ ಉತ್ತಮ ಶೈಕ್ಷಣಿಕ ಪ್ರಗತಿ ಸಾಧಿಸಲು ನಿಲಯ ಪಾಲಕರು ಪ್ರೋತ್ಸಾಹ ನೀಡಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆ ನಿರ್ದೇಶಕ ಸಿದ್ದೇಶ್ವರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಬಣಕಾರ್, ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ತಿಮ್ಮಪ್ಪ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸವಿತಾ, ಜಿಲ್ಲಾ ಕಲ್ಯಾಣ ಸಮಿತಿ ಅಧ್ಯಕ್ಷ ಪ್ರಭಾಕರ್, ತಹಶೀಲ್ದಾರ್ ನಾಗವೇಣಿ ಸೇರಿದಂತೆ ಮತ್ತಿತರರು ಇದ್ದರು.



☛ ಉದಯವಾಹಿನಿ ಚಿತ್ರ

## ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಪಾಲಿಕೆ ಅನುಮತಿ

• **ಉದಯವಾಹಿನಿ ಹುಬ್ಬಳ್ಳಿ**

ನಗರದ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿಯನ್ನು ಸ್ಥಾಪಿಸುವುದಕ್ಕೆ ಹುಬ್ಬಳ್ಳಿ–ಧಾರವಾಡ ಪಾಲಿಕೆಯಿಂದ ಒಪ್ಪಿಗೆ ಸೂಚಿಸಿ, ಆಯೋಜಕರಿಗೆ ಅನುಮತಿಯನ್ನು ನೀಡಲಾಗಿದೆ. ಕಳೆದ ಮೂರು ವರ್ಷಗಳಿಂದ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಗಣೇಶಮೂರ್ತಿ ಪ್ರತಿಸ್ಥಾಪನೆಯೇ ಸಖತ್ ಸುದ್ದಿಯಾಗಿತ್ತು. ಈ ವರ್ಷವೂ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿಯನ್ನು ಸ್ಥಾಪಿಸಲು ಅನುಮತಿಯನ್ನು ಕೋರಿ 4 ರಿಂದ 5 ಸಂಘಟನೆಗಳಿಂದ ಅರ್ಜಿಯನ್ನು ಸಲ್ಲಿಸಲಾಗಿತ್ತು. ಈ ಅರ್ಜಿಗಳನ್ನು ಪರಿಶೀಲಿಸಿದಂತ ಹುಬ್ಬಳ್ಳಿ–ಧಾರವಾಡ ಪಾಲಿಕೆಯ ಆಯುಕ್ತ ಈಶ್ವರ ಉಳ್ಳಾಗಡ್ಡಿ ಅವರು, ಗಜಾನನ ಉತ್ಸವ ಮಹಾ ಮಂಡಳಿಗೆ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿಯನ್ನು ಕೂರಿಸುವುದಕ್ಕೆ ಒಪ್ಪಿಗೆ ಪತ್ರವನ್ನು ನೀಡಿದ್ದಾರೆ. ಪಾಲಿಕೆಯಿಂದ ಅನುಮತಿ ದೊರೆತ ಕಾರಣ, ಸೆ.7ರಿಂದ ಮೂರು ದಿನಗಳ ಕಾಲ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಹಬ್ಬವನ್ನು ಆಚರಿಸಲಾಗುತ್ತದೆ.


## ಅತ್ಯಾಚಾರ- ಯೋಗ ಗುರು ಪ್ರದೀಪ್ ಉಲ್ಲಾಳ್ ಬಂಧನ

• **ಉದಯವಾಹಿನಿ, ಚಿಕ್ಕಮಗಳೂರು**

ಹಿಂದಿನ ಜನ್ಮದಲ್ಲಿ ಸಂಬಂಧ ಇತ್ತು ಎಂದು ವಿದೇಶಿ ಮಹಿಳೆಯನ್ನು ನಂಬಿಸಿ ಅತ್ಯಾಚಾರ ಎಸಗಿದ ಆರೋಪದಲ್ಲಿ 'ಕೇವಲ ಫೌಂಡೇಷನ್'ನ ಯೋಗ ಗುರು ಪ್ರದೀಪ್ ಉಲ್ಲಾಳ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.'ಆನ್‌ಲೈನ್‌ನಲ್ಲಿ ಯೋಗ ತರಬೇತಿ ಪಡೆಯುತ್ತಿದ್ದ ನನ್ನನ್ನು ಮಲ್ಲೇನಹಳ್ಳಿ ಬಳಿ ಇರುವ ಯೋಗ ಕೇಂದ್ರಕ್ಕೆ 2021 ಮತ್ತು 2022ರಲ್ಲಿ ಮೂರು ಬಾರಿ ಕರೆಸಿಕೊಂಡು ಅತ್ಯಾಚಾರ ಎಸಗಿದ್ದ' ಎಂದು ಯುವತಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

'ಪಂಜಾಬ್‌ನ ನನ್ನ ಕುಟುಂಬ 2010ರಿಂದ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದೆ. 2020ರಲ್ಲಿ ಸ್ನೇಹಿತನೊಬ್ಬನ ಮೂಲಕ ಪರಿಚಯವಾದ ಪ್ರದೀಪ್ ಉಲ್ಲಾಳ್, ಆನ್‌ಲೈನ್‌ನಲ್ಲಿ ಯೋಗಭ್ಯಾಸ ಮಾಡಿಸುತ್ತಿದ್ದ. 2021ರ ನವೆಂಬರ್ 1ರಂದು ಮಲ್ಲೇನಹಳ್ಳಿಗೆ ಕರೆಸಿಕೊಂಡಿದ್ದ. 21 ದಿನ ಇಲ್ಲೇ ಉಳಿದಿದ್ದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಹಿಂದಿನ ಜನ್ಮದಲ್ಲಿ ನಮ್ಮಿಬ್ಬರ ನಡುವೆ ಸಂಬಂಧ ಇತ್ತು ಎಂದು ಹೇಳಿ ಮೈ ಮುಟ್ಟುತ್ತಿದ್ದ.



☛ ಉದಯವಾಹಿನಿ ಚಿತ್ರ

ಎನರ್ಜಿ ವರ್ಕ್, ಕುಂಡಲಿ ಬ್ಲಾಕ್, ಡಿವೈನ್ ಲವ್ ಮಾಡುತ್ತಿದ್ದೇನೆ ಎಂದು ಆಧ್ಯಾತ್ಮಿಕವಾಗಿ ಮಾತನಾಡಿ ಅತ್ಯಾಚಾರ ಮಾಡಿದ್ದ. ಕ್ಯಾಲಿಫೋರ್ನಿಯಾಕ್ಕೆ ವಾಪಸ್ ಹೋಗಿ 2022ರ ಫೆ.2ರಂದು ಮತ್ತೆ ವಾಪಸ್ ಬಂದು 10 ದಿನ ಉಳಿದಿದ್ದೆ. ಆ ಸಮಯದಲ್ಲಿ ಐದಾರು ಬಾರಿ ಅತ್ಯಾಚಾರ ಮಾಡಿದ್ದ. ಅದೇ ವರ್ಷ ಜುಲೈನಲ್ಲಿ ಮತ್ತೆ ಬಂದು 21 ದಿನ ತಂಗಿದ್ದೆ. ಅಗಲೂ ಎರಡು–ಮೂರು ಬಾರಿ ಅತ್ಯಾಚಾರ ಎಸಗಿದ್ದ. ಇದರಿಂದ ಗರ್ಭಿಣಿ ಸಹ ಆದೆ. ಇದೆಲ್ಲವೂ ಕೃಷ್ಣಲೀಲೆ ಹೀಗಾಗಲು ಸಾಧ್ಯವಿಲ್ಲ ಎಂದು ಹೇಳಿದ್ದ. ಕೊನೆಗೆ ಗರ್ಭಪಾತವಾಯಿತು' ಎಂದು ವಿವರಿಸಿದ್ದಾರೆ. ಪ್ರದೀಪ್‌ಗೆ ಈವರೆಗೆ 20 ಲಕ್ಷ ಮೌಲ್ಯದ ಉಡುಗೊರೆ ಕೊಟ್ಟಿದ್ದೇನೆ. ಮ್ಯೂಸಿಕ್ ಸಿಸ್ಟಮ್, ಕಾಶ್ಮೀರಿ ಕಾರ್ಪೆಟ್, 2 ಲ್ಯಾಪ್‌ಟಾಪ್, ಇನ್ನಿತರ ವಸ್ತುಗಳನ್ನು ಕೊಟ್ಟಿದ್ದೇನೆ. ಯೋಗ ಗುರೂಜಿ ಎಂದು ಹೇಳಿ ಇದೇ ರೀತಿ ಹಲವರಿಗೆ ಮೋಸ ಮಾಡಿದ್ದಾನೆ' ಎಂದು ದೂರಿದ್ದಾರೆ.ಪ್ರಕರಣ ದಾಖಲಿಸಿಕೊಂಡಿರುವ ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

## ವಂಚನೆಗೊಳಗಾದವರಿಂದ ಪ್ರತಿಭಟನೆ

• **ಉದಯವಾಹಿನಿ ರಾಯಚೂರು**

ಜಿಲ್ಲೆಯಲ್ಲಿ ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮಾಡಿ ವಂಚನೆಗೊಳಗಾದ ಸಂತ್ರಸ್ತರಿಗೆ ಅನಿಯಂತ್ರಿತ ಠೇವಣಿ ಯೋಜನೆ 2019ರ ಅಡಿಯಲ್ಲಿ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ 'ವಂಚನೆ ಸಂತ್ರಸ್ತ ಠೇವಣಿದಾರ ಕುಟುಂಬ' ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲೆಯಲ್ಲಿ ಅನೇಕರು ಪಿಎಸಿಎಲ್, ಸಾಯಿ ಪ್ರಸಾದ್, ಸಮೃದ್ಧ ಜೀವನ, ಗರಿಮಾ ಹಿಂದೂಸ್ತಾನ, ಅಗ್ರಿಗೋಲ್ಡ್ ಕಂಪನಿಗಳಲ್ಲಿ ಹಣ ಹೂಡಿಕೆ ಮಾಡಿದ್ದು ಕಂಪನಿಗಳು ಮುಚ್ಚಿಹೋದ ಪರಿಣಾಮ 2014ರಿಂದ ಇದುವರೆಗೂ ಗ್ರಾಹಕರಿಗೆ ಹಣ ಮರು ಪಾವತಿಯಾಗಿಲ್ಲ. ಸರ್ಕಾರ ಕಂಪನಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡು ಸಂತ್ರಸ್ತರಿಗೆ ನ್ಯಾಯ ಒದಗಿಸಿಲ್ಲ ಎಂದು ದೂರಿದರು. ಹಣ ಹೂಡಿದ ಸಂತ್ರಸ್ತರಲ್ಲಿ ಬಡ, ಮಧ್ಯಮ ವರ್ಗದವರೇ ಹೆಚ್ಚಾಗಿದ್ದು ಸರ್ಕಾರದಿಂದ ನ್ಯಾಯ ಒದಗಿಸಬೇಕು ಎಂದು ಪ್ರತಿಭಟನಾನಿರತ ಹನುಮಂತಪ್ಪ, ಕಳಕಪ್ಪ, ರಾಜಾರಾಮ ಹಾಗೂ ಭೀಮನಗೌಡ ಒತ್ತಾಯಿಸಿದ್ದಾರೆ.

# ಪಿಡಿಓ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಡಾ. ಶ್ರೀಪಾದ ಸಬನೀಸ ಜೊತೆಗೆ ಅಸಭ್ಯವಾಗಿ ವರ್ತಿಸಿ ನಿಂದನೆ

• **ಉದಯವಾಹಿನಿ, ಸವದತ್ತಿ**

ತಾಲ್ಲೂಕಿನ ಇಂಚಲ ಗ್ರಾಮದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಲ್ಲಪ್ಪ ಹಾರುಗೊಪ್ಪ ಈತನು ಸವದತ್ತಿ ತಾಲ್ಲೂಕಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಡಾಕ್ಟರ್ ಶ್ರೀಪಾದ ಸಬನೀಸ ಇವರ ಜೊತೆಗೆ ಅಸಭ್ಯವಾಗಿ ವರ್ತಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಒರಟಾಗಿ ದೂರವಾಣಿಯಲ್ಲಿ ಮಾತನಾಡಿದ್ದಾನೆ ಇದನ್ನು ಖಂಡಿಸಿ ಆರೋಗ್ಯ ಇಲಾಖೆ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಆಶಾ ಕಾರ್ಯಕರ್ತೆಯರು ಸೇರಿಕೊಂಡು ತಾಲ್ಲೂಕಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಿಂದ ಮೌನ ಮೆರವಣಿಗೆಯ ಮುಖಾಂತರ ನೌಕರರ ಸಂಘದ ಅಧ್ಯಕ್ಷರಾದ ಆನಂದಕುಮಾರ್ ಮೂಗಬಸವ ಇವರ ಮಾರ್ಗದರ್ಶನದಲ್ಲಿ ಸವದತ್ತಿ ತಾಲ್ಲೂಕಿನ ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗಣ್ಣವರ ಇವರಿಗೆ ಸದರಿ ವಿಷಯದ ಕುರಿತು ಪಿಡಿಓ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಹಾಗೂ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಸದರಿ ವಿಷಯದ ಕುರಿತು ಕ್ರಮವಹಿಸಲು ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರರು ಈ ರೀತಿಯ ಘಟನೆಯ ಬಗ್ಗೆ ಬೇಸರ ವ್ಯಕ್ತಪಡಿಸಿದರು ಹಾಗೂ ಸದರಿ ವಿಷಯದ ಕುರಿತು ಮೇಲಾಧಿಕಾರಿಗಳವರ ಗಮನಕ್ಕೆ ತರುವ ದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಡಾಕ್ಟರ್ ವಿಜಯಕುಮಾರ್ ನರಗುಂದ ಕವಿತಾ ಕೊಣ್ಣೂರ ವೀಣಾ ಇಟ್ನಾಳಮಠ ಪ್ರಮೋದ್ ಆಸೀಫ್ ನರಸಾರೆಡ್ಡಿ ಬಳ್ಳೂರ ಡ ಅರುಣಾ ಆಯುಷ್ ವೈದ್ಯರು ಕೃಷ್ಣಾ ಹನಸಿ ಜ್ಯೋತಿ ಬಸರಿ ಹಿರೇಕುಂಬಿ ದಂಡಗಿ ಶಿವನಗೌಡರ ನೌಕರರ ಸಂಘದ ಕಾರ್ಯಾಧ್ಯಕ್ಷರಾದ ಎ ಕೆ ಮುಲ್ಲಾ ಅಶೋಕ್ ಮುರಗೋಡ ಶಂಕರ ನಾಯ್ಕ ಎಸ್ ಆಯ್ ಡೋಣಿ ದುಂಡಪ್ಪ ಬಗನಾಳ ಶಿವಶಂಕರ ಶಬ್ಬೀರ್ ಹೊಸಮನಿ ಹನುಮಂತ ಪಚ್ಚಿಯವರ ಜಯಾ ಹೊಂಗಲ ರುಬೀನಾ ಶೇಖ್ ಮಾರುತಿ ನಾಯಕ್ ಈರಯ್ಯ ದಿಗಂಬರಮಠ ಅಬ್ದುಲ್ ಸೈಯದ್ ರಮೇಶ್ ಸುನಂದಾ ಮುರುಗೇಶ್ ಬೆಟಗೇರಿ ವಿಶ್ವಾ ಹಿರೇಮಠ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಪದಾಧಿಕಾರಿಗಳಾದ ದಾಸರ ಹಡಪದ ಸುರೇಶ್ ಬಣಗಾರ ಗಣೇಶ ವಿಜಯ ಬಟಕುರ್ಕಿ ಆಯ್ ಆರ್ ಗಂಜಿ ಸುಮಿತ್ರಾ ಪೂಜಾರ ಆರ್ ಬಿ ಎಸ್ ಕೆ ತಂಡದವರು ಅರೇ ವೈದ್ಯಕೀಯ ಸಿಬ್ಬಂದಿಗಳು ಎನ್ ಎಚ್ ಎಮ್ ಸಿಬ್ಬಂದಿಗಳು ಆರೋಗ್ಯ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳು ಆಶಾ ಕಾರ್ಯಕರ್ತೆಯರು ಮುಂತಾದವರು ಉಪಸ್ಥಿತರಿದ್ದರು.



☛ ಉದಯವಾಹಿನಿ ಚಿತ್ರ

**ಕ್ರಮವಹಿಸಲು ಆಗ್ರಹಿಸಿ ಪ್ರತಿಭಟನೆ**

> ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಲ್ಲಪ್ಪ ಹಾರುಗೊಪ್ಪ ದೂರವಾಣಿಯಲ್ಲಿ ಆರೋಗ್ಯ ಅಧಿಕಾರಿಗಳು ಶ್ರೀಪಾದ ಸಬನೀಸ ಇವರ ಜೊತೆಗೆ ಏಕವಚನದಲ್ಲಿ ಮಾತನಾಡಿದ್ದನ್ನು ಹಾಗೂ ಅಧಿಕಾರಿಗಳೊಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದನ್ನು ಖಂಡಿಸಿದರು. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು
> – ಆನಂದಕುಮಾರ್ ಮೂಗಬಸವ, ನೌಕರರ ಸಂಘದ ಅಧ್ಯಕ್ಷರು ಹಾಗೂ ಸಾರ್ವಜನಿಕ ಆಸ್ಪತ್ರೆ, ಮುಖ್ಯ ವೈದ್ಯಾಧಿಕಾರಿಗಳು ಡಾಕ್ಟರ್ ಮಲ್ಲನಗೌಡರ

# ಕಮಲಾ ಹ್ಯಾರಿಸ್‌ಗೆ ಮೆಲಾನಿಯಾ ರಹಸ್ಯ ಬೆಂಬಲ?

## ಡೊನಾಲ್ಡ್ ಟ್ರಂಪ್ ಗೆಲ್ಲೋದು ಪತ್ನಿಗೇ ಬೇಡ, ಡೆಮಾಕ್ರೆಟಿಕ್ ಹಾಗೂ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಗಳು ಪರಸ್ಪರ ವಾಕ್ಸಮರ

**ವಾಷಿಂಗ್ಟನ್:** ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪತ್ನಿ ಮೆಲಾನಿಯಾ ಟ್ರಂಪ್ ಅವರು ತಮ್ಮ ಪತಿಯನ್ನು ದ್ವೇಷಿಸುತ್ತಾರಂತೆ, ಇದೇ ಕಾರಣಕ್ಕಾಗಿ ಡೆಮಾಕ್ರೆಟಿಕ್ ಪಕ್ಷದ ಅಧ್ಯಕ್ಷೀಯ ಚುನಾವಣಾ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರ ಗೆಲುವಿಗಾಗಿ ರಹಸ್ಯವಾಗಿ ಬೆಂಬಲ ನೀಡುತ್ತಿದ್ದಾರಂತೆ. ಹೀಗಂತ ಹೇಳಿರೋದು ಡೊನಾಲ್ಡ್ ಟ್ರಂಪ್ ತಂಡದಲ್ಲಿದ್ದ ನಿವೃತ್ತ ವೈಟ್ ಹೌಸ್ ಸಂವಹನ ನಿರ್ದೇಶಕ ಆಂಥೋಣಿ ಸ್ಕಾರಮುಚ್ಚಿ ಹೇಳಿದ್ದಾರೆ. ನವೆಂಬರ್‌ನಲ್ಲಿ ನಡೆಯಲಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ವಿರುದ್ಧ ಕಮಲಾ ಹ್ಯಾರಿಸ್ ಅವರೇ ಗೆಲುವು ದಾಖಲಿಸಲಿದ್ದಾರೆ ಎಂದು ಆಂಥೋಣಿ ಸ್ಕಾರಮುಚ್ಚಿ ಭವಿಷ್ಯ ನುಡಿದಿದ್ದಾರೆ.

**ನವೆಂಬರ್ 5 ರಂದು ಮತದಾನ**

2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆ ಅಖಾಡ ಈಗಾಗಲೇ ರಂಗೇರಿದೆ. ಡೆಮಾಕ್ರೆಟಿಕ್ ಹಾಗೂ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಗಳು ಪರಸ್ಪರ ವಾಕ್ಸಮರದಲ್ಲಿ ತೊಡಗಿದ್ದಾರೆ. ನವೆಂಬರ್ 5 ರಂದು ಮತದಾನ ಪ್ರಕ್ರಿಯೆ ನಡೆಯಲಿದೆ.

ಈ ಚುನಾವಣೆ ಹಿನ್ನೆಲೆಯಲ್ಲಿ ಮಾಧ್ಯಮ ಸಂಸ್ಥೆಯೊಂದರ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಟ್ರಂಪ್ ತಂಡದ ಮಾಜಿ ಸದಸ್ಯ ಆಂಥೋಣಿ ಸ್ಕಾರಮುಚ್ಚಿ ಮೆಲಾನಿಯಾ ಟ್ರಂಪ್ ಅವರು ತಮ್ಮ ಪತಿ ಡೊನಾಲ್ಡ್ ಟ್ರಂಪ್ ಅವರ ಗೆಲುವಿಗಿಂತಲೂ ಕಮಲಾ ಹ್ಯಾರಿಸ್ ಅವರ ಗೆಲುವನ್ನು ಸಂಭ್ರಮಿಸಲು ಉತ್ಸುಕರಾಗಿದ್ದಾರೆ ಎಂದು ಹೇಳಿದ್ದಾರೆ.

ಮೆಲಾನಿಯಾ ಟ್ರಂಪ್ ಅವರು ತಮ್ಮ ಪತಿಯನ್ನು ದ್ವೇಷಿಸುತ್ತಾರೆ ಅನ್ನೋದು ನಿರ್ವಿವಾದ ಎಂದಿರುವ ಆಂಥೋಣಿ ಸ್ಕಾರಮುಚ್ಚಿ, ಇತ್ತೀಚಿನ ಮೆಲಾನಿಯಾ ಅವರ ನಡವಳಿಕೆಗಳನ್ನ ಗಮನಕ್ಕೆ ತಂದರು. ಟ್ರಂಪ್ ಅವರ ರಿಪಬ್ಲಿಕನ್ ಪಕ್ಷದ ರಾಜಕೀಯ ಸಮಾವೇಶಗಳಲ್ಲಿ ಮೆಲಾನಿಯಾ ಟ್ರಂಪ್ ಅವರು ತುಂಬಾನೇ ಕಡಿಮೆ ಉತ್ಸುಕತೆಯಿಂದ ಭಾಗಿಯಾಗುತ್ತಿದ್ದಾರೆ. ಅವರು ತಮ್ಮನ್ನು ತಾವು ದೊಡ್ಡ ಮಟ್ಟದಲ್ಲಿ ಬಿಂಬಿಸಿಕೊಳ್ಳಲು ಆಸೆ ಪಡುತ್ತಿಲ್ಲ.

ಇನ್ನು ಟ್ರಂಪ್ ಅವರ ಹತ್ಯೆಯತ್ನ ನಡೆದ ಪೆನ್ಸಿಲ್ವೇನಿಯಾ ಸೇರಿದಂತೆ ಹಲವೆಡೆ ನಡೆದ ರಿಪಬ್ಲಿಕನ್ ಪಕ್ಷದ ದೇಣಿಗೆ ಸಂಗ್ರಹ ಅಭಿಯಾನದಲ್ಲೂ ಮೆಲಾನಿಯಾ ಟ್ರಂಪ್ ಅವರು ಅತಿ ಕಡಿಮೆ ಕಾಣಿಸಿಕೊಂಡಿದ್ದರು.

ಇದೇ ವೇಳೆ ನನ್ನ ಪತ್ನಿ ಕೂಡಾ ಟ್ರಂಪ್ ಅವರನ್ನು ದ್ವೇಷಿಸುತ್ತಾರೆ ಎಂದು ಆಂಥೋಣಿ ಸ್ಕಾರಮುಚ್ಚಿ ಹೇಳಿಕೊಂಡಿದ್ದಾರೆ. ನನ್ನ ಪತ್ನಿ ಕೂಡಾ ಮೆಲಾನಿಯಾ ಟ್ರಂಪ್ ಅವರಷ್ಟೇ ಟ್ರಂಪ್ ಅವರನ್ನು ದ್ವೇಷಿಸುತ್ತಾರೆ ಎಂದು ಆಂಥೋಣಿ ಸ್ಕಾರಮುಚ್ಚಿ ಹೇಳಿಕೊಂಡಿದ್ದಾರೆ.



- 2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆ ಅಖಾಡ ರಂಗೇರಿದೆ
- ಡೆಮಾಕ್ರೆಟಿಕ್ ಹಾಗೂ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಗಳ ವಾಕ್ಸಮರ
- ಕಮಲಾ ಹ್ಯಾರಿಸ್ ಗೆಲುವನ್ನು ಸಂಭ್ರಮಿಸಲು ಟ್ರಂಪ್ ಪತ್ನಿ ಉತ್ಸುಕ?

### 11 ದಿನಕ್ಕೇ ಕೆಲಸ ಕಳೆದುಕೊಂಡಿದ್ದ ಆಂಥೋಣಿ ಸ್ಕಾರಮುಚ್ಚಿ

ಆಂಥೋಣಿ ಸ್ಕಾರಮುಚ್ಚಿ ಅವರನ್ನು ದಿ ಮೂಚ್ ಎಂದೂ ಕರೆಯಲಾಗುತ್ತದೆ. ಇವರು ಅಮೆರಿಕದ ಹಣಕಾಸು ತಜ್ಞರಾಗಿಯೂ ಕಾರ್ಯ ನಿರ್ವಹಿಸಿದ್ದರು. ಅಮೆರಿಕ ಅಧ್ಯಕ್ಷೀಯ ಕಚೇರಿ ವೈಟ್ ಹೌಸ್‌ನ ಸಂವಹನ ನಿರ್ದೇಶಕರಾಗಿ ಅವರು ಕೇವಲ 11 ದಿನಗಳ ಕಾಲವಷ್ಟೇ ಕೆಲಸ ಮಾಡಿದ್ದರು. 2017ರ ಜುಲೈ 21 ರಂದು ಅವರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಇದಾದ 11 ದಿನಕ್ಕೇ ಅಂದರೆ 2017ರ ಜುಲೈ 31 ರಂದು ಟ್ರಂಪ್ ಅವರು ಆಂಥೋಣಿ ಸ್ಕಾರಮುಚ್ಚಿ ಅವರನ್ನು ಹುದ್ದೆಯಿಂದ ಕಿತ್ತು ಹಾಕಿದ್ದರು.

---

# ಆಯುಷ್ಯ ಹೆಚ್ಚಿಸಿಕೊಳ್ಳಲು 12 ವರ್ಷದಿಂದ ದಿನಕ್ಕೆ 30 ನಿಮಿಷ ಮಾತ್ರ ನಿದ್ದೆ ಮಾಡುತ್ತಿರುವ ಜಪಾನ್ ವ್ಯಕ್ತಿ

**ಟೋಕಿಯೋ:** ಉತ್ತಮ ಆರೋಗ್ಯಕ್ಕಾಗಿ ಮನುಷ್ಯರು ದಿನಕ್ಕೆ 7 ರಿಂದ 8 ಗಂಟೆ ಮಲಗಬೇಕು ಎಂದು ವೈದ್ಯರು ಹೇಳುತ್ತಾರೆ. ಆದರೆ, ಇಲ್ಲೊಬ್ಬ ಮನುಷ್ಯ ಕಳೆದ 12 ವರ್ಷಗಳಿಂದ ದಿನಕ್ಕೆ ಅರ್ಧ ಗಂಟೆ ಮಾತ್ರವೇ ನಿದ್ದೆ ಮಾಡುತ್ತಿದ್ದಾರೆ.

ಹೌದು, ಅಚ್ಚರಿ ಎನ್ನಿಸಿದರೂ ಇದು ಸತ್ಯ. ತನ್ನ ದೇಹ ಹಾಗೂ ಮೆದುಳನ್ನು ತರಬೇತಿಗೊಳಿಸಿ ದೀರ್ಘಾಯುಷ್ಯ ಪಡೆಯುವ ನಿಟ್ಟಿನಲ್ಲಿ ಅತೀ ಕಡಿಮೆ ನಿದ್ದೆ ಮಾಡುವ ತಂತ್ರವನ್ನು ಜಪಾನಿನ ಈ ವ್ಯಕ್ತಿ ಅಳವಡಿಸಿಕೊಂಡು ಸತತವಾಗಿ ಪಾಲನೆ ಮಾಡುತ್ತಿದ್ದಾರೆ. ಈ ಬಗ್ಗೆ ದಕ್ಷಿಣ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ. ಆ ದೇಶದ ಡೈಸುಕೆ ಹೋರಿ ಎಂಬ ಜಪಾನಿನ ವ್ಯಕ್ತಿಯು



ತನ್ನ ಜೀವನದ ಆಯುಷ್ಯವನ್ನು ಡಬಲ್ ಮಾಡಲು 12 ವರ್ಷಗಳಿಂದ ದಿನಕ್ಕೆ ಕೇವಲ 30 ನಿಮಿಷಗಳ ನಿದ್ರೆ ಮಾಡುತ್ತಿದ್ದಾರೆ. ಇವರಿಗೆ ಸದ್ಯ 40 ವರ್ಷ ವಯಸ್ಸಾಗಿದ್ದು, ತಮ್ಮ ದೇಹ ಮತ್ತು ಮೆದುಳಿಗೆ ಕನಿಷ್ಠ ನಿದ್ರೆಯೊಂದಿಗೆ ಸಾಮಾನ್ಯವಾಗಿ ಕಾರ್ಯನಿರ್ವಹಿಸಲು ತರಬೇತಿ ನೀಡುತ್ತಿದ್ದಾರೆ ಎನ್ನಲಾಗಿದೆ.

**ಗೂಗಲ್‌ನಲ್ಲಿ ಟ್ರೆಂಡ್**

**30 ನಿಮಿಷ ಮಾತ್ರ ನಿದ್ದೆ ಮಾಡುವ ಜಪಾನಿನ ಈ ವ್ಯಕ್ತಿ ಗೂಗಲ್ ಟ್ರೆಂಡ್‌ನಲ್ಲಿ ಇದ್ದಾರೆ. ಜನರು ಈ ಬಗ್ಗೆ ಮಾಹಿತಿಗಾಗಿ ಗೂಗಲ್‌ನಲ್ಲಿ ಸಾಕಷ್ಟು ಹುಡುಕಾಡುತ್ತಿದ್ದಾರೆ. ಈ ಕುರಿತು ಚಂಡೀಗಡದಲ್ಲಿ ಶೇ 100ರಷ್ಟು ಹುಡುಕಾಟವಿದೆ. ತ್ರಿಪುರದಲ್ಲಿ ಶೇ. 98, ಬಿಹಾರದಲ್ಲಿ ಶೇ 60, ಉತ್ತರ ಪ್ರದೇಶದಲ್ಲಿ ಶೇ 60 ಹಾಗೂ ದೆಹಲಿಯಲ್ಲಿ ಶೇ 52, ಕರ್ನಾಟಕದಲ್ಲಿ ಶೇ 48 ರಷ್ಟು ಜನರು ಶೋಧಿಸಿದ್ದಾರೆ. ಭಾರತದ ಹಲವು ರಾಜ್ಯಗಳಲ್ಲಿ ಈ ವಿಷಯ ಟ್ರೆಂಡ್ ಆಗಿದೆ.**

**ಕೆಲಸದ ದಕ್ಷತೆ ಹೆಚ್ಚಳ**

**ಕೇವಲ 30 ನಿಮಿಷ ಮಲಗುವ ಈ ಅಭ್ಯಾಸವು ನನ್ನ ಕೆಲಸದ ದಕ್ಷತೆಯಲ್ಲಿ ಗಮನಾರ್ಹ ಸುಧಾರಣೆ ತಂದಿದೆಯಂತೆ. ವಾಣಿಜ್ಯೋದ್ಯಮಿಯಾಗಿ ನನಗೆ ದೀರ್ಘ ಕಾಲದ ನಿದ್ದೆಗಿಂತ ಗುಣಮಟ್ಟದ ನಿದ್ದೆ ಅತ್ಯಂತ ಮುಖ್ಯ ಎನಿಸುತ್ತದೆ. ತಮ್ಮ ಕೆಲಸದಲ್ಲಿ ನಿರಂತರ ಏಕಾಗ್ರತೆಯ ಅಗತ್ಯವಿರುವ ನನ್ನಂಥಹ ಜನ ದೀರ್ಘ ನಿದ್ರೆಗಿಂತ ಉತ್ತಮ ಗುಣಮಟ್ಟದ ನಿದ್ರೆಯಲ್ಲಿ ನಂಬಿಕೆ ಇಟ್ಟಿದ್ದಾರೆ. ಹೆಚ್ಚು ಅರ್ಧ ಗಂಟೆ ಮಲಗಿದರೂ ನಾನು ಗುಣಮಟ್ಟದ ನಿದ್ದೆ ಮಾಡುತ್ತೇನೆ ಎಂದು ಡೈಸುಕೆ ಹೋರಿ ಹೇಳಿಕೊಂಡಿದ್ದಾರೆ.**

---

# ಇಂಫಾಲದಲ್ಲಿ ಡ್ರೋನ್ ದಾಳಿ, ಮೂವರ ಸ್ಥಿತಿ ಗಂಭೀರ

**ಇಂಫಾಲ್:** ಮಣಿಪುರದ ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಡ್ರೋನ್ ಬಳಸಿ ಶಂಕಿತ ಉಗ್ರರು ಹೊಸ ಬಾಂಬ್ ದಾಳಿ ನಡೆಸಿದ್ದು, 23 ವರ್ಷದ ಮಹಿಳೆ ಸೇರಿದಂತೆ ಮೂವರು ಗಾಯಗೊಂಡಿದ್ದಾರೆ.

ನಿನ್ನೆ ಸಂಜೆ 6.20 ರ ಸುಮಾರಿಗೆ ವಸತಿ ಪ್ರದೇಶದಲ್ಲಿ ಡ್ರೋನ್‌ನಿಂದ ಕನಿಷ್ಠ ಎರಡು ಸ್ಫೋಟಕಗಳನ್ನು ಬೀಳಿಸಲಾಯಿತು, ಇದರಲ್ಲಿ ಮಹಿಳೆ ಮತ್ತು ಇತರ ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಿಳೆ ಸೆಂಜಮ್ ಚಿರಾಂಗ್ ಪ್ರದೇಶದ ತನ್ನ ನಿವಾಸದಲ್ಲಿದ್ದಾಗ ಬಾಂಬ್ ತನ್ನ ಮನೆಯ ಸುಕ್ಕುಗಟ್ಟಿದ ಕಬ್ಬಿಣದ ಮೇಲ್ಛಾವಣಿಯ ಶೀಟ್‌ಗಳ ಮೂಲಕ ತೂರಿಕೊಂಡು ಸ್ಫೋಟಗೊಂಡಿತು ಎಂದು ಅವರು ಹೇಳಿದರು. ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾಂಗ್‌ಪೋಕ್ಪಿ ಜಿಲ್ಲೆಯ ಬೆಟ್ಟದ ಮೇಲಿನ ಸ್ಥಾನಗಳಿಂದ ತಗ್ಗು ಪ್ರದೇಶದ ಸೆಜಮ್ ಚಿರಾಂಗ್ ಗ್ರಾಮದ ಮೇಲೆ ಉಗ್ರರು ಮನಬಂದಂತೆ ಗುಂಡು ಹಾರಿಸಿದ್ದಾರೆ ಎಂದು ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಸ್ಥಳವು ಕೌಟ್ರುಕ್‌ನಿಂದ ಕೇವಲ 3 ಕಿಮೀ ದೂರದಲ್ಲಿದೆ, ಭಾನುವಾರದಂದು ಇದೇ ರೀತಿಯ ಡ್ರೋನ್ ಬಾಂಬ್ ಮತ್ತು ಗುಂಡಿನ ದಾಳಿಯಲ್ಲಿ ಇಬ್ಬರು ಸಾವನ್ನಪ್ಪಿ, ಒಂಬತ್ತು ಮಂದಿ ಗಾಯಗೊಂಡಿದ್ದರು. ಏತನ್ಮಧ್ಯೆ, ಮಣಿಪುರ ಪೊಲೀಸರು ಹೇಳಿಕೆಯಲ್ಲಿ, ಶೋಧ ಕಾರ್ಯಾಚರಣೆಯ ಸಮಯದಲ್ಲಿ ಕಾಂಗ್‌ಪೋಕ್ಪಿ ಜಿಲ್ಲೆಯ ಸಮೀಪದ ಖರಂ ವೈಫೇಯ್ ಗ್ರಾಮದಿಂದ ಡ್ರೋನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಕಾಂಗ್ ಪೋಕ್ಪಿ ಜಿಲ್ಲೆಯ ಕಾಂಗ್‌ಚುಪ್ ಪೊನ್ಲೆನ್‌ನಲ್ಲಿ ಭದ್ರತಾ ಪಡೆಗಳು ನಡೆಸಿದ ಶೋಧ ಕಾರ್ಯಾಚರಣೆಗಳು ಮತ್ತು ಪ್ರದೇಶದ ಪ್ರಾಬಲ್ಯವು ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲು ಕಾರಣವಾಯಿತು.

---

# ಭಕ್ತರಿದ್ದ ವಾಹನಕ್ಕೆ ಟ್ರಕ್ ಡಿಕ್ಕಿ, 8 ಮಂದಿ ಸಾವು

**ಚಂಡೀಗಢ:** ಹರಿಯಾಣದ ಜಿಂದ್ ಜಿಲ್ಲೆಯಲ್ಲಿ ಭಕ್ತರನ್ನು ಸಾಗಿಸುತ್ತಿದ್ದ ವಾಹನಕ್ಕೆ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಎಂಟು ಮಂದಿ ಸಾವನ್ನಪ್ಪಿದ್ದು, ಹತ್ತು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿಸ್ಸಾರ್ ರಾಷ್ಟ್ರೀಯ ಹೆದ್ದಾರಿಯ ಬಿಧರನಾ ಗ್ರಾಮದಲ್ಲಿ ಮಧ್ಯರಾತ್ರಿ ಈ ಅಪಘಾತ ಸಂಭವಿಸಿದೆ.

ಗಾಯಾಳುಗಳನ್ನು ಹಿಸಾರ್ನ ಜಿಂದ್ ಮತ್ತು ಆಗ್ರೋಹಾ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ ಎಂದು ಸದರ್ ನರ್ವಾನಾದ ಎಸ್‌ಎಚ್‌ಒ ಇನ್ಸ್‌ಪೆಕ್ಟರ್ ಕುಲದೀಪ್ ತಿಳಿಸಿದ್ದಾರೆ.

ಕುರುಕ್ಷೇತ್ರ ಜಿಲ್ಲೆಯಿಂದ ರಾಜಸ್ಥಾನದ ಗೊಗಮೇಡಿ ಎಂಬಲ್ಲಿನ ದೇವಸ್ಥಾನಕ್ಕೆ ತೆರಳುತ್ತಿದ್ದ ವೇಳೆ ಅವಘಡ ಸಂಭವಿಸಿದೆ ಎಂದು ಅವರು ಹೇಳಿದ್ದಾರೆ. ಭಕ್ತರ ಗುಂಪು ಗೋಗಮೇಡಿಗೆ ತೆರಳುತ್ತಿದ್ದ ಲಘು ವಾಣಿಜ್ಯ ವಾಹನಕ್ಕೆ ಟ್ರಕ್ ಡಿಕ್ಕಿ ಹೊಡೆದಿದೆ. ಘಟನೆಯ ಸಮಯದಲ್ಲಿ,



ಭಕ್ತರು ಸ್ವಲ್ಪ ಸಮಯದವರೆಗೆ ನಿಲ್ಲಿಸಿದ್ದರು ಮತ್ತು ಅವರ ವಾಹನ ನಿಂತಿತ್ತು ಎಂದು ಎಸ್‌ಎಚ್‌ಒ ಪಿಟಿಐಗೆ ಫೋನ್ ಮೂಲಕ ತಿಳಿಸಿದರು.

ಘಟನೆಯಲ್ಲಿ ಇಬ್ಬರು ಮಹಿಳೆಯರು ಮತ್ತು ಹದಿಹರೆಯದವರು ಸೇರಿದಂತೆ ಎಂಟು ಜನರು ಸಾವನ್ನಪ್ಪಿದ್ದಾರೆ ಮತ್ತು ಹತ್ತು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳು ಅಪಾಯದಿಂದ ಪಾರಾಗಿದ್ದಾರೆ ಎಂದು ಅವರು ಹೇಳಿದರು. ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

---

# ಸಿಂಗಾಪುರ-ಭಾರತ ಸಂಬಂಧ ಪಕ್ವವಾಗುವ ಸಮಯ ಬಂದಿದೆ : ಜೈಶಂಕರ್

**ಸಿಂಗಾಪುರ:** ಸಿಂಗಾಪುರಕ್ಕೆ ಅಧಿಕತ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಆಗಮಿಸುವ ಮುನ್ನ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಉಭಯ ದೇಶಗಳು ತಮ ದ್ವಿಪಕ್ಷೀಯ ಸಂಬಂಧವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಸಮಯ ಪಕ್ವವಾಗಿದೆ ಎಂದು ಹೇಳಿದ್ದಾರೆ.

ಭಾರತದಲ್ಲಿ ನಡೆಯುತ್ತಿರುವ ಪರಿವರ್ತನೆ ಮತ್ತು ಪ್ರಪಂಚದ ಬದಲಾವಣೆಗಳನ್ನು ಗಮನಿಸಿದರೆ, ಅವರು ಹೆಚ್ಚು ಸಮಕಾಲೀನರಾಗಬೇಕು. ಅನೇಕ ವಿಧಗಳಲ್ಲಿ, ಅದಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು ತಮ ಮೂರನೇ ಅವಧಿಯ ಆರಂಭದಲ್ಲಿ ಸಿಂಗಾಪುರಕ್ಕೆ ಭೇಟಿ ನೀಡಲು ನಿರ್ಧರಿಸಿದ್ದಾರೆ ಎಂದು ಜೈಶಂಕರ್ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಕೆಲವೊಮೆ, ಪ್ರಾಮಾಣಿಕವಾಗಿ ಹೇಳಬೇಕೆಂದರೆ, ನಿಮ ಅಂತ್ಯದಲ್ಲಿನ ಅನಿಸಿಕೆಗಳು ಸ್ವಲ್ಪಮಟ್ಟಿಗೆ ಹಳೆಯದಾಗಿವೆ ಎಂದು ನಾನು ಭಾವಿಸುತ್ತೇನೆ ಎಂದು ಜೈಶಂಕರ್ ಗಮನಸೆಳೆದರು. ಭಾರತದಲ್ಲಿ, ನಾವು ರಾಷ್ಟ್ರೀಯ ಬೆಳವಣಿಗೆ ಮತ್ತು ಆಧುನೀಕರಣವನ್ನು ವೇಗಗೊಳಿಸಲು ಕಳೆದ ದಶಕದ ಸಾಧನೆಗಳನ್ನು ಸ್ಪ್ರಿಂಗ್‌ಬೋರ್ಡ್‌ನಂತೆ ಬಳಸುತ್ತಿದ್ದೇವೆ ಎಂದು ಸಚಿವರು ಹೇಳಿದರು.

**ಸಿಂಗಾಪುರದ ಬಗ್ಗೆ ವಿಶೇಷ ಭಾವನೆ**



ದ್ವಿಪಕ್ಷೀಯ ಸಂಬಂಧಗಳನ್ನು ಮೀರಿ, ಬಾಷ್ಪಶೀಲ ಮತ್ತು ಅನಿಶ್ಚಿತ ಜಗತ್ತಿನಲ್ಲಿ ನಿಕಟ ಸಹಯೋಗದ ಸಮಸ್ಯೆಯೂ ಇದೆ. ಈ ನಿಟ್ಟಿನಲ್ಲಿ, ನಮದು ಉನ್ನತ ಮಟ್ಟದ ನಂಬಿಕೆ ಮತ್ತು ತಿಳುವಳಿಕೆಯ ಆಧಾರದ ಮೇಲೆ ಪಾಲುದಾರಿಕೆಯಾಗಿದೆ ಎಂದು ನಾವು ಗುರುತಿಸಬೇಕು ಎಂದು ಸಚಿವರು ಹೇಳಿದರು. ಈ ಗುಣಲಕ್ಷಣಗಳು ಮೌಲ್ಯಮಾಪನಗಳನ್ನು ಹಂಚಿಕೊಳ್ಳಲು ಮತ್ತು ನಮ್ಮ ಒಮುಖವನ್ನು ಅನ್ವೇಷಿಸಲು ನಮಗೆ ಅನುವು ಮಾಡಿಕೊಡುತ್ತದೆ ಎಂದು ಅವರು ಹೇಳಿದರು.

ಪ್ರಧಾನ ಮಂತ್ರಿಯವರು ಯಾವಾಗಲೂ ಸಿಂಗಾಪುರದ ಬಗ್ಗೆ ವಿಶೇಷ ಭಾವನೆಯನ್ನು ಹೊಂದಿದ್ದಾರೆ ಮತ್ತು ನಾಯಕತ್ವದ ಸಂಪರ್ಕವು ಹಿಂದೆಂದಿಗಿಂತಲೂ ಹೆಚ್ಚು ಮುಖ್ಯವಾಗಿದೆ ಎಂದು ಜೈಶಂಕರ್ ಅವರು ಒತ್ತಿಹೇಳಿದರು.

> **ಭಾರತ ಮತ್ತು ಸಿಂಗಾಪುರದ ದ್ವಿಪಕ್ಷೀಯ ಸಂಬಂಧಗಳು ಕಳೆದ ಎರಡು ದಶಕಗಳಲ್ಲಿ ಅತ್ಯಂತ ಬಲಿಷ್ಠವಾಗಿವೆ ಎಂದು ಅವರು ಹೇಳಿದರು. ಸಿಂಗಾಪುರಕ್ಕೆ 1992 ರಲ್ಲಿ ಮತ್ತು ನಂತರ 2006 ರಲ್ಲಿ ಅವಕಾಶ ಸಿಕ್ಕಿದಂತೆಯೇ, ಅದು ಕ್ಷಣವನ್ನು ಪಡೆದುಕೊಳ್ಳಬೇಕು ಮತ್ತು ಹೊಸ ಭೂದೃಶ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು -ಜೈಶಂಕರ್**

---

# ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾದ ನಿಷೇಧಿತ ಜಮಾತ್-ಎ-ಇಸ್ಲಾಮಿ ಸಂಘಟನೆ ಮುಖ್ಯಸ್ಥ

**ನವದೆಹಲಿ:** ಮುಂಬರುವ ಜಮು ಮತ್ತು ಕಾಶೀರ ವಿಧಾನ ಸಭಾ ಚುನಾವಣೆಯಲ್ಲಿ ತಮ್ಮ ಧ್ವನಿ ಎತ್ತಲು ಚುನಾವಣೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದೇವೆ ಎಂದು ನಿಷೇಧಿತ ಸಂಘಟನೆಯ ಗುಲಾಮ್ ಖಾದಿರ್ ಲೋನ್ ಹೇಳಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ಕೇಂದ್ರ ಸಮಿತಿಯ ಸದಸ್ಯ ಮತ್ತು ಜಮಾತ್-ಎ-ಇಸ್ಲಾಮಿಯಾದ ಮಾಜಿ ಪ್ರಧಾನ ಕಾರ್ಯದರ್ಶಿ ಲೋನ್ ಅವರು ತಮ ಮೇಲೆ ಹೇರಲಾಗಿರುವ ನಿಷೇಧವನ್ನು ತೆಗೆದುಹಾಕಲು ಚುನಾವಣೆಯಲ್ಲಿ ಸ್ಪರ್ಧಿಸಲು ಹೋರಾಡುತ್ತಿದ್ದೇವೆ ಎಂದಿದ್ದಾರೆ.

ಕೇಂದ್ರ ಗಹ ಸಚಿವಾಲಯದ ನಿಷೇಧದಿಂದಾಗಿ ಸಂಘಟನೆಯು ಚುನಾವಣೆಯಲ್ಲಿ ಭಾಗವಹಿಸುವಂತಿಲ್ಲ. 1987 ರಿಂದ ಯಾವುದೇ ಚುನಾವಣೆಗಳಲ್ಲಿ ಭಾಗವಹಿಸಿಲ್ಲ.ನಾವು ಕಾನೂನಿಗೆ ವಿರುದ್ಧ ವಾದ ಏನನ್ನೂ ಮಾಡಿಲ್ಲ ಮತ್ತು ಯಾವಾಗಲೂ ಭಾರತೀಯ ಸಂವಿಧಾನದ ಚೌಕಟ್ಟಿನೊಳಗೆ ನಮ ಚಟುವಟಿಕೆಗಳನ್ನು ನಡೆಸುತ್ತೇವೆ. ಹಾಗಾಗಿ ಕೇಂದ್ರವು ನಮ ಮೇಲೆ ನಿಷೇಧ ಹೇರಲು ನಿರ್ಧರಿಸಿದಾಗ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇದು ಹೇಗೆ ಸಂಭವಿಸಿತು ಎಂದು ನಮಗೆ ಆಶ್ಚರ್ಯವಾಯಿತು. ಹಾಗಾಗಿ ಧ್ವನಿ ಎತ್ತಲು ನಾವು ಚುನಾವಣೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದೇವೆ ಎಂದು ಗುಲಾಮ್



ಖಾದಿರ್ ಲೋನ್ ತಿಳಿಸಿದರು. ಜಮಾತ್ ತಮ ಪಕ್ಷದ ಹೆಸರನ್ನು ಜಮು ಕಾಶೀರ ಜಸ್ಟೀಸ್ ಅಂಡ್ ಡೆವಲಪ್ಮೆಂಟ್ ಫ್ರಂಟ್ ಎಂಬ ನೋಂದಣಿಗಾಗಿ ಭಾರತೀಯ ಚುನಾವಣಾ ಆಯೋಗದ ಮುಂದೆ ಅರ್ಜಿಯನ್ನು ಸಲ್ಲಿಸಿತ್ತು ಆದರೆ ಅವರ ನಿಷೇಧವನ್ನು ಅನುಮೋದಿಸಿದಾಗ, ಅವರು ಸ್ವತಂತ್ರರಾಗಿ ಚುನಾವಣೆಗಳನ್ನು ಎದುರಿಸಲು ನಿರ್ಧರಿಸಿದರು. ನಮ ಅಭ್ಯರ್ಥಿಗಳು ಜನರಿಗಾಗಿ ಕೆಲಸ ಮಾಡಬೇಕೆಂದು ನಾವು ಬಯಸುತ್ತೇವೆ. ಅವರು ನಮ ಮೇಲೆ ಹೇರಿದ ನಿಷೇಧದ ಬಗ್ಗೆ ಧ್ವನಿ ಎತ್ತಬೇಕು ಮತ್ತು ನೆಲದ ಮಟ್ಟದಲ್ಲಿ ಕೆಲಸ ಮಾಡಬೇಕು ಎಂದು ಲೋನ್ ಹೇಳಿದರು.

ಜಮಾತ್ ಬಿಜೆಪಿಯ ಪ್ರಾಕ್ಸಿ ಆಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೆಚ್ಚಿನ ರಾಜಕೀಯ ಪಕ್ಷಗಳು ಏಕೆ ಹೇಳುತ್ತಿವೆ ಎಂದು ಕೇಳಿದಾಗ, ಗುಲಾಮ್ ಖಾದಿರ್ ಲೋನ್ ಇದು ತಪ್ಪು ಎಂದು ಹೇಳಿದರು.

---

# ಯುದ್ಧ ವಿಮಾನ ಪತನ ಪೈಲೆಟ್ ಸುರಕ್ಷಿತ

**ಬಾರ್ಮರ್:** ಭಾರತೀಯ ವಾಯುಪಡೆಯ ಮಿಗ್-29 ಯುದ್ಧ ವಿಮಾನವು ತಾಂತ್ರಿಕ ದೋಷದಿಂದ ಸೋಮವಾರ ರಾಜಸ್ಥಾನದ ಬಾರ್ಮರ್ ಬಳಿ ಪತನಗೊಂಡಿದೆ. ಪೈಲಟ್ ಸುರಕ್ಷಿತವಾಗಿದ್ದು, ಯಾವುದೇ ಪ್ರಾಣ ಅಥವಾ ಆಸ್ತಿ ನಷ್ಟ ಸಂಭವಿಸಿಲ್ಲ ಎಂದು ವಾಯುಪಡೆ ತಿಳಿಸಿದೆ. ನಿಯಮಿತ ಅಭ್ಯಾಸದ ವೇಳೆ ಈ ಅವಘಡ ಸಂಭವಿಸಿದೆ. ಅಪಘಾತದ ಬಗ್ಗೆ ಮಾಹಿತಿ ಬಂದ ತಕ್ಷಣ ನಾಗನ ಪೊಲೀಸ್ ಠಾಣೆ ಹಾಗೂ ವಾಯುಪಡೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದಾರೆ. ಅಪಘಾತದ ನಂತರ, ವಿಮಾನದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಮತ್ತು ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ವಾಹನಗಳನ್ನು ಸ್ಥಳಕ್ಕೆ ಧಾವಿಸಿವೆ. ಆದರೆ, ಈ ದುರ್ಘಟನೆ ಹೇಗೆ ಸಂಭವಿಸಿತು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ವಾಯುಪಡೆ ತಿಳಿಸಿದೆ. ಜನವಸತಿ ಪ್ರದೇಶದಿಂದ ಯುದ್ಧ ವಿಮಾನ ಪತನಗೊಂಡಿದೆ. ಸೋಮವಾರ ರಾತ್ರಿ 10 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ.

---

# ಮೋದಿಯವರೇ ಮಣಿಪುರಕ್ಕೆ ಯಾವಾಗ ಭೇಟಿ ನೀಡ್ತೀರಾ..? : ಕಾಂಗ್ರೆಸ್ ಪ್ರಶ್ನೆ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಬ್ರೂನೈ ಮತ್ತು ಸಿಂಗಾಪುರಕ್ಕೆ ಭೇಟಿ ನೀಡುತ್ತಿದ್ದಂತೆ ಕಾಂಗ್ರೆಸ್ ಅವರನ್ನು ತರಾಟೆಗೆ ತೆಗೆದುಕೊಂಡಿದೆ. ವಿದೇಶಿ ವ್ಯಾಮೋಹದ ಪ್ರಧಾನಿಗಳು ಗಲಭೆ ಪೀಡಿತ ಮಣಿಪುರ ರಾಜ್ಯಕ್ಕೆ ಯಾವಾಗ ಮಾನವೀಯ ಭೇಟಿ ನೀಡುತ್ತಾರೆ ಎಂದು ಪ್ರಶ್ನಿಸಿದೆ.

ಅಸ್ತಿತ್ವದಲ್ಲಿರುವ ಎಲ್ಲಾ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಇನ್ನಷ್ಟು ಬಲಪಡಿಸಲು ಸುಲ್ತಾನ್ ಹಾಜಿ ಹಸನಲ್ ಬೊಲ್ಕಿಯಾ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಸೆಪ್ಟೆಂಬರ್ 3-4 ರಂದು ಬ್ರೂನೈಗೆ ಭೇಟಿ ನೀಡುತ್ತಿದ್ದಾರೆ.

ಅವರ ಸಿಂಗಾಪುರದ ಸಹವರ್ತಿ ಲಾರೆನ್ಸ್ ವಾಂಗ್ ಅವರ ಆಹ್ವಾನದ ಮೇರೆಗೆ ಅವರು ಸೆಪ್ಟೆಂಬರ್ 4-5 ರಂದು ಸಿಂಗಾಪುರಕ್ಕೆ ಭೇಟಿ ನೀಡಲಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮಾತನಾಡಿ, ಜೈವಿಕವಲ್ಲದ



ಪ್ರಧಾನಿ ಬ್ರೂನೈಗೆ ಐತಿಹಾಸಿಕ ಭೇಟಿ ಎಂದು ಬಿಂಬಿಸುತ್ತಿದ್ದಾರೆ, ನಂತರ ಅವರು ಸಿಂಗಾಪುರಕ್ಕೆ ಹೋಗುತ್ತಾರೆ. ನಮ ಆಗಾಗ್ಗೆ ಪ್ರಯಾಣಿಸುವವರು ಯಾವಾಗ ತೊಂದರೆಗೀಡಾದ ಮಣಿಪುರ ರಾಜ್ಯಕ್ಕೆ ಭೇಟಿ ನೀಡುತ್ತೀರಾ? ಎಂದು ಪ್ರಶ್ನಿಸಿದ್ದಾರೆ.

ಮಣಿಪುರದಲ್ಲಿ ಹಿಂಸಾಚಾರ ಸ್ಫೋಟಗೊಂಡು ಇಂದಿಗೆ ಸರಿಯಾಗಿ 16 ತಿಂಗಳುಗಳು, ಇದು ನೂರಾರು ಜನರ ಸಾವಿಗೆ ಕಾರಣವಾಯಿತು ಮತ್ತು ಪರಿಹಾರ ಶಿಬಿರಗಳಲ್ಲಿ ಹೀನಾಯ ಸ್ಥಿತಿಯಲ್ಲಿ ವಾಸಿಸುವ ಸಾವಿರಾರು ಜನರ ಸ್ಥಳಾಂತರಕ್ಕೆ ಕಾರಣವಾಗಿದೆ ಎಂದು ರಮೇಶ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

---

# ವೆನೆಜುವೆಲಾ ಅಧ್ಯಕ್ಷರ ವಿಮಾನವನ್ನೇ ವಶಕ್ಕೆ ಪಡೆದ ದೊಡ್ಡಣ್ಣ

## ವೆನೆಜುವೆಲಾ ಅಧ್ಯಕ್ಷರು ನಕಲಿ ಕಂಪನಿಗಳ ಹೆಸರಲ್ಲಿ ವಿಮಾನ ಖರೀದಿ: ಅಮೆರಿಕದ ನ್ಯಾಯ ಇಲಾಖೆ ಆರೋಪ

**ಅಮೆರಿಕ:** ವೆನೆಜುವೆಲಾ ಅಧ್ಯಕ್ಷ ನಿಕೋಲಸ್ ಮಡುರೊ ಅವರ ವಿಮಾನವನ್ನೇ ಅಮೆರಿಕ ತನ್ನ ವಶಕ್ಕೆ ಪಡೆದಿದೆ. ಅಮೆರಿಕದ ನಿರ್ಬಂಧಗಳನ್ನು ಉಲ್ಲಂಘನೆ ಮಾಡಿದ ಆರೋಪದ ಮೇಲೆ ಅಮೆರಿಕ ಸರ್ಕಾರ ಈ ಕಠಿಣ ಕ್ರಮ ಕೈಗೊಂಡಿದೆ. ಡೊಮಿನಿಕನ್ ರಿಪಬ್ಲಿಕ್ ದೇಶದಲ್ಲಿ ವೆನೆಜುವೆಲಾ ಅಧ್ಯಕ್ಷರ ವಿಮಾನವನ್ನು ಅಮೆರಿಕ ವಶಕ್ಕೆ ಪಡೆಯಿತು. ನಂತರ ಈ ವಿಮಾನವನ್ನು ಅಮೆರಿಕದ ಫ್ಲೋರಿಡಾ ವಿಮಾನ ನಿಲ್ದಾಣಕ್ಕೆ ತರಲಾಗಿದೆ.

ಡಸಾಲ್ಟ್ ಫಾಲ್ಕನ್ 900ಇಎಕ್ಸ್ ಖಾಸಗಿ ಜೆಟ್ ವಿಮಾನವನ್ನು ವೆನೆಜುವೆಲಾ ದೇಶದ ಅಧ್ಯಕ್ಷ ನಿಕೋಲಸ್ ಮಡುರೊ ಹಾಗೂ ಅವರ ಸರ್ಕಾರದ ಸದಸ್ಯರು ಬಳಸುತ್ತಿದ್ದರು.

ಆದರೆ, ಈ ವಿಮಾನವನ್ನು ಅಕ್ರಮವಾಗಿ ಖರೀದಿ ಮಾಡಲಾಗಿದೆ ಎಂದು ಅಮೆರಿಕದ ನ್ಯಾಯ ಇಲಾಖೆ ಆರೋಪ ಮಾಡಿದೆ. ವೆನೆಜುವೆಲಾ ಅಧ್ಯಕ್ಷರು ನಕಲಿ ಕಂಪನಿಗಳ ಹೆಸರಲ್ಲಿ 13 ಮಿಲಿಯನ್ ಅಮೆರಿಕನ್



- ವೆನೆಜುವೆಲಾ ಅಧ್ಯಕ್ಷರು ನಕಲಿ ಕಂಪನಿಗಳ ಹೆಸರಲ್ಲಿ ವಿಮಾನ ಖರೀದಿ
- 13 ಮಿಲಿಯನ್ ಅಮೆರಿಕನ್ ಡಾಲರ್ ಮೊತ್ತಕ್ಕೆ ಅಕ್ರಮವಾಗಿ ವಿಮಾನ ಖರೀದಿ
- ಈ ವಿಮಾನವನ್ನು ಅಮೆರಿಕದಿಂದ ಅಕ್ರಮವಾಗಿ ಕಳ್ಳಸಾಗಣೆ ಮಾಡಲಾಗಿತ್ತು

ಡಾಲರ್ ಮೊತ್ತಕ್ಕೆ ಅಕ್ರಮವಾಗಿ ವಿಮಾನ ಖರೀದಿ ಮಾಡಿದ್ದಾರೆ ಎಂದು ಅಮೆರಿಕದ ನ್ಯಾಯ ಇಲಾಖೆ ಆಪಾದನೆ ಮಾಡಿದೆ. ಅಷ್ಟೇ ಅಲ್ಲ, ಈ ವಿಮಾನವನ್ನು ಅಮೆರಿಕದಿಂದ ಅಕ್ರಮವಾಗಿ ಕಳ್ಳಸಾಗಣೆ ಮಾಡಲಾಗಿತ್ತು ಎಂದೂ ಆಪಾದನೆ ಮಾಡಿರುವ ಅಮೆರಿಕದ ನ್ಯಾಯ ಇಲಾಖೆ, ವೆನೆಜುವೆಲಾ ಅಧ್ಯಕ್ಷರು ಹಾಗೂ ಅವರ ಸಹಚರರೇ ಈ ಕೃತ್ಯ ಎಸಗಿದ್ದರು ಎಂದೂ ಕಿಡಿ ಕಾರಿದೆ.

**ಅಮೆರಿಕದಲ್ಲಿ ವಹಿವಾಟು**

**2022ರ ಅಂತ್ಯ ಹಾಗೂ 2023ರ ಆರಂಭದ ಹೊತ್ತಲ್ಲಿ ವೆಸ್ಟ್ ಇಂಡೀಸ್‌ನ ಕೆರಿಬಿಯನ್ ದ್ವೀಪಗಳ ಮೂಲದ ನಕಲಿ ಕಂಪನಿಯೊಂದು ವೆನೆಜುವೆಲಾ ಅಧ್ಯಕ್ಷ ನಿಕೋಲಸ್ ಮಡುರೊ ಅವರ ಪರವಾಗಿ ಅಮೆರಿಕದಲ್ಲಿ ವಹಿವಾಟು ನಡೆಸಿತ್ತು. ಇದೇ ಕಂಪನಿಯ ಪ್ರತಿನಿಧಿಗಳು ಎಂದು ಹೇಳಿಕೊಂಡ ಮಡುರೊ ಆಪ್ತರು ಅಕ್ರಮವಾಗಿ ವಿಮಾನ ಖರೀದಿ ಮಾಡಿದ್ದರು. ಬಳಿಕ ಏಪ್ರಿಲ್ 2023ರಲ್ಲಿ ವಿಮಾನವನ್ನು ಅಮೆರಿಕದಿಂದ ಕೆರಿಬಿಯನ್ ದ್ವೀಪಗಳಿಗೆ ಕೊಂಡೊಯ್ದು, ಆ ನಂತರ ಅದನ್ನು ವೆನೆಜುವೆಲಾ ದೇಶಕ್ಕೆ ರವಾನೆ ಮಾಡಲಾಗಿತ್ತು.**

**ದೊಡ್ಡಣ್ಣನಿಗೇ ಮಡುರೊ ಟೋಪಿ**

ಈ ವಿಮಾನದ ಮೇಲೆ ಅಮೆರಿಕ ನಿಗಾ ವಹಿಸಿತ್ತು. ಕಳೆದ ಸೋಮವಾರ ಬೆಳಗ್ಗೆ ಈ ವಿಮಾನ ಸ್ಯಾಂಟೋ ಡೊಮಿಂಗೊ ವಿಮಾನ ನಿಲ್ದಾಣದಿಂದ ಫೋರ್ಟ್ ಲಾಡರ್ಡೇಲ್ ವಿಮಾನ ನಿಲ್ದಾಣಕ್ಕೆ ಹೊರಟಿದೆ ಎಂಬ ಮಾಹಿತಿಯನ್ನು ರೆಕಾರ್ ನೀಡಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಅಮೆರಿಕ ವಿಮಾನವನ್ನು ವಶಕ್ಕೆ ಪಡೆದಿದೆ.

2023ರ ಮೇ ತಿಂಗಳಿಂದಲೂ ಈ ವಿಮಾನ ವೆನೆಜುವೆಲಾ ದೇಶದ ಸೇನಾ ನೆಲೆ ಸೇರಿದಂತೆ ಹಲವೆಡೆ ನಿರಂತರವಾಗಿ ಹಾರಾಟ ನಡೆಸುತ್ತಲೇ ಇದೆ. 2024ರ ಜುಲೈ 28 ರಂದು ವೆನೆಜುವೆಲಾ ದೇಶದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿಭಟನೆ ಹಾಗೂ ಅಕ್ರಮ ಆರೋಪಗಳ ನಡುವಲ್ಲೂ ಅಧ್ಯಕ್ಷ ನಿಕೋಲಸ್ ಮಡುರೊ ತಮ್ಮ ಗೆಲುವನ್ನು ಘೋಷಣೆ ಮಾಡಿಕೊಂಡಿದ್ದರು.

ಚುನಾವಣೆ ವೇಳೆ ಹಿಂಸಾಚಾರ ನಡೆದು ಹತ್ತಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದರು. 2,400ಕ್ಕೂ ಹೆಚ್ಚು ಮಂದಿಯ ಬಂಧನವಾಗಿತ್ತು. ವೆನೆಜುವೆಲಾ ದೇಶದ ವಿರೋಧ ಪಕ್ಷಗಳು ತಮ್ಮ ದೇಶದ ಸಾರ್ವತ್ರಿಕ ಚುನಾವಣೆಯಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎಂದು ಆರೋಪ ಮಾಡಿದ್ದರೂ ಯಾವುದೇ ಪ್ರಯೋಜನ ಆಗಿರಲಿಲ್ಲ.


ಎಡಪಂಥೀಯ ನಿಕೋಲಸ್ ಮಡುರೊ ಸರ್ಕಾರ ತನ್ನ ವಿರೋಧಿಗಳನ್ನೆಲ್ಲಾ ಮೆಟ್ಟಿ ನಿಂತು ಅಂತಾರಾಷ್ಟ್ರೀಯ ಒತ್ತಡಗಳ ನಡುವೆಯೂ ತಮ್ಮ ಅಧಿಕಾರ ಸ್ಥಾಪನೆ ಮಾಡಿದ್ದರು.

---

## ಮಿನಿ ನ್ಯೂಸ್

### ದನ ಕಳ್ಳಸಾಗಣೆದಾರ ಎಂದು ಭಾವಿಸಿ ವಿದ್ಯಾರ್ಥಿಯನ್ನು ಕೊಂದ ಗೋರಕ್ಷಕರು

**ಚಂಡೀಗಡ:** ಹರಿಯಾಣದ ರಿದಾಬಾದ್ನಲ್ಲಿ 12 ನೇ ತರಗತಿ ವಿದ್ಯಾರ್ಥಿಯೊಬ್ಬನನ್ನು ದನ ಕಳ್ಳಸಾಗಣೆದಾರ ಎಂದು ತಪ್ಪಾಗಿ ಭಾವಿಸಿ ಗೋರಕ್ಷಕರು ಕಾರಿನಲ್ಲಿ ಹಿಂಬಾಲಿಸಿ ಕೊಂದಿದ್ದಾರೆ ಎಂದು ಆರೋಪಿಸಲಾಸಗಿದೆ.ಆ.23 ರಂದು ನಡೆದ ದಾಳಿಗೆ ಸಂಬಂಧಿಸಿದಂತೆ ಗೋರಕ್ಷಕ ಗುಂಪಿನ ಐವರನ್ನು ಬಂಧಿಸಲಾಗಿದೆ. ಬಂಧಿತ ಆರೋಪಿ ಗಳಾದ ಅನಿಲ್ ಕೌಶಿಕ್, ವರುಣ್, ಕೃಷ್ಣ, ಆದೇಶ್ ಮತ್ತು



ಸೌರಭ್ ಅವರು ಆರ್ಯನ್ ಮಿಶ್ರಾ, ಮತ್ತು ಆತನ ಸ್ನೇಹಿತರಾದ ಶಾಂಕಿ, ಹರ್ಷಿತ್ ಮತ್ತು ಇಬ್ಬರು ಹುಡುಗಿಯರನ್ನು ದೆಹಲಿ-ಆಗ್ರಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 30 ಕಿಲೋಮೀಟರ್ ದೂರ ಓಡಿಸಿಕೊಂಡು ಹೋಗಿದ್ದರು. ಮೂಲಗಳ ಪ್ರಕಾರ, ರೆನಾಲ್ಟ್ ಡಸ್ಟರ್ ಮತ್ತು ಟೊಯೊಟಾ ಫಾರ್ಚುನರ್ ಕಾರುಗಳಲ್ಲಿ ಕೆಲವು ಕಳ್ಳಸಾಗಣೆದಾರರು ಜಾನುವಾರುಗಳನ್ನು ಎತ್ತಿಕೊಂಡು ಹೋಗುತ್ತಿದ್ದಾರೆ ಎಂದು ಗೋರಕ್ಷಕರಿಗೆ ಮಾಹಿತಿ ಸಿಕ್ಕಿತ್ತು ಎನ್ನಲಾಗಿದೆ.

### ಪೋರಬಂದರ್ ಕರಾವಳಿಯಲ್ಲಿ ಹೆಲಿಕಾಪ್ಟರ್ ತುರ್ತು ಭೂಸ್ಪರ್ಶ, ಮೂವರು ಸಿಬ್ಬಂದಿ ನಾಪತ್ತೆ

**ಅಹಮದಬಾದ್:** ಗುಜರಾತ್‌ನ ಪೋರಬಂದರ್ ಕರಾವಳಿಯಲ್ಲಿ ರಕ್ಷಣಾ ಕಾರ್ಯಾಚರಣೆಯ ವೇಳೆ ತಡರಾತ್ರಿ ಅರಬ್ಬಿ ಸಮುದ್ರದಲ್ಲಿ ಅವರ ಸುಧಾರಿತ ಲಘು ಹೆಲಿಕಾಪ್ಟರ್(ಎಎಲ್‌ಹೆಚ್) ತುರ್ತು ಭೂಸ್ಪರ್ಶ ಮಾಡಿದ ನಂತರ ಭಾರತೀಯ ಕೋಸ್ಟ್ ಗಾರ್ಡ್‌ನ ಮೂವರು ಸದಸ್ಯರು ನಾಪತ್ತೆಯಾಗಿದ್ದಾರೆ. ಹೆಲಿಕಾಪ್ಟರ್‌ನಲ್ಲಿ ನಾಲ್ವರು ಸದಸ್ಯರಿದ್ದು, ಒಬ್ಬರನ್ನು ರಕ್ಷಿಸಲಾಗಿದೆ. ಪೋರಬಂದರ್ ಕರಾವಳಿಯಲ್ಲಿ ತೈಲ ಟ್ಯಾಂಕರ್ ಮೋಟಾರ್ ಟ್ಯಾಂಕರ್ ಹರಿ ಲೀಲಾದಿಂದ ಗಾಯಗೊಂಡ ಸಿಬ್ಬಂದಿಯನ್ನು ಸ್ಥಳಾಂತರಿಸಲು ಹೆಲಿಕಾಪ್ಟರ್ ಅನ್ನು ಸೆಪ್ಟೆಂಬರ್ 2 ರಂದು ರಾತ್ರಿ 11 ಗಂಟೆಗೆ ಕಳುಹಿಸಿದಾಗ ಈ ಘಟನೆ ಸಂಭವಿಸಿದೆ. ಉಳಿದ ಮೂವರು ಸದಸ್ಯರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಭಾರತೀಯ ಕೋಸ್ಟ್ ಗಾರ್ಡ್ ಹೇಳಿದೆ.

ಭಾರತೀಯ ಕೋಸ್ಟ್ ಗಾರ್ಡ್ ರಕ್ಷಣಾ ಕಾರ್ಯಾಚರಣೆಗಾಗಿ ನಾಲ್ಕು ಹಡಗುಗಳು ಮತ್ತು 2 ವಿಮಾನಗಳನ್ನು ನಿಯೋಜಿಸಿದೆ. ಗುಜರಾತ್‌ನಲ್ಲಿ ಇತ್ತೀಚಿನ ಚಂಡಮಾರುತದ ವಾತಾವರಣದಲ್ಲಿ 67 ಜೀವಗಳನ್ನು ಉಳಿಸಿದ ಭಾರತೀಯ ಕೋಸ್ಟ್ ಗಾರ್ಡ್ (ಐಸಿಜಿ) ಸುಧಾರಿತ ಲಘು ಹೆಲಿಕಾಪ್ಟರ್ ಅನ್ನು ಭಾರತೀಯ ಧ್ವಜದ ಮೇಲೆ ಗಂಭೀರವಾಗಿ ಗಾಯಗೊಂಡ ಸಿಬ್ಬಂದಿಯನ್ನು ಸ್ಥಳಾಂತರಿಸಲು ಕಾರ್ಯಚಾರಣೆ ಆರಂಭಿಸಿದಾಗ ಈ ಅವಘಡ ಸಂಭವಿಸಿದೆ.

### ಆಂಧ್ರ ಪ್ರವಾಹವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸುವಂತೆ ನಾಯ್ಡು ಮನವಿ

• ಉದಯವಾಹಿನಿ ಅಮರಾವತಿ

ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಅವರು ಆಂಧ್ರಪ್ರದೇಶದಲ್ಲಿ ಉಂಟಾಗಿರುವ ಜಲ ಪ್ರವಾಹವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ. ವಿಶೇಷವಾಗಿ ವಿಜಯವಾಡದಲ್ಲಿ ಇತ್ತೀಚಿನ ಧಾರಾಕಾರ ಮಳೆ ಮತ್ತು ನಂತರದ ಪ್ರವಾಹವು ತಮ ರಾಜಕೀಯ ಜೀವನದಲ್ಲಿ ಕಂಡ ದೊಡ್ಡ ದುರಂತ ಎಂದು ನಾಯ್ಡು ಹೇಳಿದರು. ರಾಜ್ಯದಲ್ಲಿ ಉಂಟಾಗಿರುವ ಪ್ರವಾಹವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವುದಾಗಿ ನಾಯ್ಡು ತಿಳಿಸಿದ್ದಾರೆ. ನನ್ನ ವೃತ್ತಿ ಜೀವನದಲ್ಲಿ, ಇದು ಅತಿದೊಡ್ಡ ವಿಪತ್ತು, ನಾವು ಹುದ್ಹುದ್ ಚಂಡಮಾರುತ ಮತ್ತು ತಿತ್ಲಿ ಚಂಡಮಾರುತದಂತಹ ಕೆಲವು ಘಟನೆಗಳನ್ನು ಹೊಂದಿದ್ದೇವೆ ಆದರೆ ಇವುಗಳಿಗೆ ಹೋಲಿಸಿದರೆ, ಇಲ್ಲಿ ಮಾನವನ ನೋವು ಮತ್ತು ಆಸ್ತಿ ನಷ್ಟವು ದೊಡ್ಡದಾಗಿದೆ ಎಂದು ಎನ್‌ಟಿಆರ್ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ನಾಯ್ಡು ಹೇಳಿದರು.

ರಾಜ್ಯದಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆ ಮತ್ತು ಪ್ರವಾಹದಿಂದ ನಲುಗಿ ಹೋಗಿರುವ ಜಿಲ್ಲೆಯ ಕಲೆಕ್ಟರೇಟ್ ಅನ್ನು ಮುಖ್ಯಮಂತ್ರಿಗಳು ತಾತ್ಕಾಲಿಕ ಸೆಕ್ರೆಟರಿಯೇಟ್ ಆಗಿ ಪರಿವರ್ತಿಸಿದ್ದಾರೆ. ವಿಪತ್ತಿಗೆ ಸಂಬಂಧಿಸಿದ ಎಲ್ಲಾ ವರದಿಗಳನ್ನು ಕೇಂದ್ರಕ್ಕೆ ಕಳುಹಿಸಲಾಗುವುದು ಮತ್ತು ನಷ್ಟದಿಂದ ಚೇತರಿಸಿಕೊಳ್ಳಲು ರಾಜ್ಯಕ್ಕೆ ಉದಾರವಾಗಿ ಹಣ ನೀಡುವಂತೆ ಮನವಿ ಮಾಡುವುದಾಗಿ ನಾಯ್ಡು ಹೇಳಿದರು.

### ಕಾಂಗೋದಲ್ಲಿ 129 ಕೈದಿಗಳ ಸಾವು

**ಕಿಶನ್ಸಾ :** ಕಾಂಗೋ ರಾಜಧಾನಿಯ ಮುಖ್ಯ ಕಾರಾಗೃಹ ಕಿನ್ಸಾಸಾದ ಕೇಂದ್ರ ಮಕಲಾ ಜೈಲಿನಿಂದ ಜೈಲಿನ ಕಂಬಿ ಮುರಿದು ತಪ್ಪಿಸಿಕೊಂಡು ಹೊರಬರಲು ಯತ್ನಿಸುತ್ತಿದ್ದ 129 ಕೈದಿಗಳು ಸಾವನ್ನಪ್ಪಿದ್ದಾರೆ. ಅವರಲ್ಲಿ ಹೆಚ್ಚಿನವರು ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಇಂದು ಅಧಿಕಾರಿಗಳು ಈ ಮಾಹಿತಿ ನೀಡಿದ್ದಾರೆ.


ಪಡೆಗಳು ಹಾರಿಸಿದ ಗುಂಡುಗಳಿಂದ 24 ಕೈದಿಗಳು ಸಾವನ್ನಪ್ಪಿದ್ದಾರೆ ಎಂದು ಕಾಂಗೋಲೀಸ್ ಆಂತರಿಕ ಸಚಿವ ಜಾಕ್ವೆಮಿನ್ ಶಬಾನಿ ಸಾಮಾಜಿಕ ಮಾಧ್ಯಮದ ಮೂಲಕ ವಿವರಗಳನ್ನು ತಿಳಿಸಿದ್ದಾರೆ.

ಜೈಲಿನ ಆಡಳಿತ ಕಟ್ಟಡ, ಅದರ ಆಹಾರ ಡಿಪೋಗಳು ಮತ್ತು ಆಸ್ಪತ್ರೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ, ಇದರಲ್ಲಿ ಸುಮಾರು 59 ಜನರು ಗಾಯಗೊಂಡಿದ್ದಾರೆ. ಘಟನೆಯ ಕುರಿತು ತನಿಖೆ ನಡೆದಿದೆ.

### ಒತ್ತೆಯಾಳುಗಳ ಸಾವು: ಭಾರಿ ಪ್ರತಿಭಟನೆ

**ಟೆಲ್ ಅವೀವಾ:** ಗಾಜಾದಲ್ಲಿ ಒತ್ತೆಯಾಳುಗಳಾಗಿದ್ದ ಮಂದಿಯಲ್ಲಿ ಸುರಕ್ಷಿತವಾಗಿ ಕರೆತರಲು ಸಾಧ್ಯವಾಗದೆ 6 ಮಂದಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ದೇಶಾದ್ಯಂತ ವ್ಯಾಪಕ ಪ್ರತಿಭಟನೆ ನಡೆಯುತ್ತಿದ್ದು ಒತ್ತೆಯಾಳುಗಳ ಸಾವಿನ ಬಗ್ಗೆ ಪ್ರಧಾನಿ ಬೆಂಜಮಿನ್ ನೇತಾಹ್ಯಾಹು ಕ್ಷಮೆ ಕೇಳಿದ್ದಾರೆ. ಕದನ ವಿರಾಮ ಘೋಷಿಸಿದ್ದರೆ ಒತ್ತೆಯಾಳುಗಳು ಸುರಕ್ಷಿತವಾಗಿ ಹಿಂದಿರುಗುತ್ತಿದ್ದರು ಎಂದು ಹಮಾಸ್ ಬಂಡುಕೋರರು ಹೇಳಿದ ಬೆನ್ನಲ್ಲೇ ಒತ್ತೆಯಾಳು ಬಿಡಿಸಿಕೊಂಡು ಬರಲು ಸಾಧ್ಯವಾಗದಕ್ಕೆ ಕ್ಷಮೆ ಇರಲಿ ಎಂದಿದ್ದಾರೆ. ಈ ನಡುವೆ ರಾಜಧಾನಿ ಟೆಲ್ ಅವೀವಾ ಸೇರಿದಂತೆ ಮತ್ತಿತರ ಕಡೆ ಸಹಸ್ರಾರು ಮಂದಿ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಿದ್ದಾರೆ. ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಲು ಉಪಕರಣಗಳನ್ನು ಬಳಸುವ ಅಪಾಯವನ್ನು ಉಲ್ಲೇಖಿಸಿ ಅಮೇರಿಕಾ ಇಸ್ರೇಲ್‌ಗೆ ಕೆಲವು ಶಸ್ತ್ರಾಸ್ತ್ರಗಳ ಮಾರಾಟ ಸ್ಥಗಿತಗೊಳಿಸಿದ್ದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಒತ್ತಡ ಹೆಚ್ಚಾಗಿದೆ ಎಂದು ಹೇಳಲಾಗಿದೆ. ಗಾಜಾದ ಫಿಲಡೆಲ್ಫಿ ಕಾರಿಡಾರ್ ಅನ್ನು ನಿಯಂತ್ರಿಸಬೇಕು. ಹಮಾಸ್‌ನೊಂದಿಗಿನ ಮಾತುಕತೆ ನಡೆಸಿ ಕದನ ವಿರಾಮ ಘೋಷಿಸಲು ಮುಂದಾಗಬೇಕು ಎಂದು ಅಮೆರಿಕಾ ಸಲಹೆ ನೀಡಿದೆ.

# ಶೂಟಿಂಗ್ ಮುಗಿಸಿದ ಯಲಾಕುನ್ನಿ



'ಯಲಾಕುನ್ನಿ' ಈ ಡೈಲಾಗ್ ಅನ್ನು ಕನ್ನಡ ಚಿತ್ರಪ್ರೇಮಿಗಳು ಅದು ಹೇಗೆ ಮರೆಯಲು ಸಾಧ್ಯ,ಹೇಳಿ. ಖಳನಟರ ಖಳನಟ ದಿವಂಗತ ವಜ್ರಮುನಿ ಅವರ ಫೇಮಸ್ ಡೈಲಾಗ್ ಇದು. ಈ ಡೈಲಾಗ್ ಅನ್ನೇ ಸಿನಿಮಾ ಶೀರ್ಷಿಕೆಯಾಗಿಟ್ಟುಕೊಂಡು ಸ್ಯಾಂಡಲ್ ವುಡ್ ನಲ್ಲಿ ಮುಹೂರ್ತ ಮಾಡಿ ಸದ್ದು ಮಾಡಿತ್ತು 'ಯಲಾಕುನ್ನಿ' ಚಿತ್ರತಂಡ. ಸೌಂದರ್ಯ ಸಿನಿ ಕಂಬೈನ್ಸ್ ಹಾಗೂ ನರಸಿಂಹ ಸಿನಿಮಾಸ್ ಲಾಂಛನದಲ್ಲಿ ಅನುಸೂಯ ಕೋಮಲ್ ಕುಮಾರ್, ಸಹನ ಮೂರ್ತಿ ರವರು ನಿರ್ಮಿಸಿರುವ ಹಾಗೂ ತಮ್ಮ ಅಮೋಘ ಅಭಿನಯದ ಮೂಲಕ ಜನರ ಮನ ಗೆದ್ದಿರುವ ಕೋಮಲ್ ಕುಮಾರ್ ನಾಯಕರಾಗಿ ನಟಿಸಿರುವ ಈ ಚಿತ್ರವನ್ನು ಹೊಸ ಪ್ರತಿಭೆ ಪ್ರದೀಪ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ಯ ಚಿತ್ರೀಕರಣ ಸದ್ದಿಲ್ಲದೆ ಪೂರ್ಣಗೊಳಿಸಿರುವ ''ಯಲಾಕುನ್ನಿ'' ಚಿತ್ರಕ್ಕೆ ಚಿತ್ರೀಕರಣ ನಂತರದ ಚಟುವಟಿಕೆಗಳು(ಪೋಸ್ಟ್ ಪ್ರೊಡಕ್ಷನ್) ಬಿರುಸಿನಿಂದ ಸಾಗಿದೆ.

ಸದ್ಯದಲ್ಲೇ ಪ್ರೇಕ್ಷಕರಿಗೆ ಮನೋರಂಜನೆಯ ರಸದೌತಣ ನೀಡಲು ಚಿತ್ರಮಂದಿರಗಳಿಗೆ ''ಯಲಾಕುನ್ನಿ'' ಚಿತ್ರ ಬರಲಿದೆ. ಬೆಂಗಳೂರು, ಮೈಸೂರು ಹಾಗೂ ಶ್ರೀರಂಗಪಟ್ಟಣದಲ್ಲಿ ಚಿತ್ರೀಕರಣ ನಡೆದಿದೆ. ಶ್ರೀರಂಗಪಟ್ಟಣದಲ್ಲಿ ಚಿತ್ರಕ್ಕಾಗಿ ವಿಶೇಷ ಸೆಟ್ ಸಹ ಹಾಕಲಾಗಿತ್ತು. ಕೋಮಲ್ ಕುಮಾರ್ ಅವರು ಮೊದಲ ಬಾರಿಗೆ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿರುವುದು ಈ ಚಿತ್ರದ ವಿಶೇಷ. ಕೋಮಲ್ ಅವರ ಜೊತೆಗೆ ದೊಡ್ಡ ದೊಡ್ಡ ಕಲಾವಿದರ ದಂಡೆ ಈ ಚಿತ್ರದಲ್ಲಿದೆ. ದತ್ತಣ್ಣ , ಸಾಧು ಕೋಕಿಲ , ಮಿತ್ರ , ಸುಚೇಂದ್ರ ಪ್ರಸಾದ್ , ಶಿವರಾಜ್ ಕೆ ಆರ್ ಪೇಟೆ , ತಬಲಾ ನಾಣಿ, ರಾಜು ತಾಳಿ ಕೋಟೆ, ಸುಮನ್ ನಗರ ಕರ್, ಮಾನಸಿ ಸುಧೀರ್ (ಕಾಂತಾರ) , ಜಗ್ಗೇಶ್ ಅವರ ದ್ವಿತಿಯ ಪುತ್ರ ಯತಿರಾಜ್ ಜಗ್ಗೇಶ್, ಜಯಸಿಂಹ ಮುಸುರಿ , ರಘು ರಾಮನಕೊಪ್ಪ ,ಮಹಾಂತೇಶ್, ಬೌಬೌ ಜಯರಾಮ್ , ನಿರ್ದೇಶಕ ಸಹನ ಮೂರ್ತಿ , ಭಜರಂಗಿ ಪ್ರಸನ್ನ , ತಿಥಿ ತಮ್ಮಣ್ಣ, ಪ್ರದೀಪ್ ಪೂಜಾರಿ, ತೇಜಸ್, ಉಮೇಶ್ ಸಕ್ಕರೆ ನಾಡು ಮಂತಾದರವರ ತಾರಾಬಳಗವಿರುವ ಈ ಚಿತ್ರದ ನಾಯಕಿಯರಾಗಿ ನಿಸರ್ಗ ಅಪ್ಪಣ್ಣ ಮತ್ತು ಗಿಚ್ಚಿಗಿಲಿಯ ಅಮೃತಾ ಬಣ್ಣ ಹಚ್ಚಿದ್ದಾರೆ.

**ಮಯೂರ್ ಪಟೇಲ್ ಖಳ ನಾಯಕ**

ವಿಶೇಷ ವಾಗಿ ವಜ್ರಮುನಿ ಯವರ ಮೊಮ್ಮೊಗ ಆಕರ್ಶ್ ಈ ಚಿತ್ರದ ಮೂಲಕ ಮೊದಲ ಬಾರಿಗೆ ಬಣ್ಣದ ಲೋಕ ಪ್ರವೇಶಿಸುತ್ತಿದ್ದಾರೆ. ಮಯೂರ್ ಪಟೇಲ್ ಅವರು ಖಳ ನಾಯಕ ನಾಗಿ ನಟಿಸಿದ್ದಾರೆ. ಸಂಪೂರ್ಣ ಹಳ್ಳಿ ಸೊಗಡಿನಲ್ಲಿ ಮೂಡಿಬಂದಿರುವ 'ಯಲಾಕುನ್ನಿ' ಸಿನಿಮಾಕ್ಕೆ ರಥಾವರ ಖ್ಯಾತಿಯ ಧರ್ಮ ವಿಶ್ ಸಂಗೀತ ನಿರ್ದೇಶನ, ದೀಪು ಎಸ್ ಕುಮಾರ್ ಸಂಕಲನ ಹಾಗೂ ಹಾಲೇಶ್ ಭದ್ರಾವತಿ ಅವರ ಛಾಯಾಗ್ರಹಣವಿದೆ. ಮುರಳಿ ಮಾಸ್ಟರ್ ನೃತ್ಯ ಸಂಯೋಜನೆ ಮಾಡಿರುವ ಈ ಚಿತ್ರಕ್ಕೆ ನರಸಿಂಹ ಮಾಸ್ಟರ್ ಸಾಹಸ ಸಂಯೋಜನೆ ಮಾಡಿದ್ದಾರೆ. ''ಯಲಾಕುನ್ನಿ'' ಚಿತ್ರಕ್ಕೆ 'ಮೇರಾ ನಾಮ್ ವಜ್ರಮುನಿ' ಎಂಬ ಅಡಿಬರಹವಿದೆ.

# ಮತ್ತೆ ಸಿನಿಮಾಗೆ ದೀಪಿಕಾ ದಾಸ್ ಕಮ್‌ಬ್ಯಾಕ್



ನಾಗಿಣಿ, ಬಿಗ್ ಬಾಸ್ ಖ್ಯಾತಿಯ ದೀಪಿಕಾ ದಾಸ್ ಮತ್ತೆ ಸಿನಿಮಾಗೆ ಮರಳಿದ್ದಾರೆ. ಮದುವೆ ಬಳಿಕ ಅಭಿಮಾನಿಗಳಿಗೆ ಗುಡ್ ನ್ಯೂಸ್ ನೀಡಿದ್ದಾರೆ. 'ಪಾರು ಪಾರ್ವತಿ' ಸಿನಿಮಾದ ಪೋಸ್ಟರ್ ರಿಲೀಸ್ ಮಾಡುವ ಮೂಲಕ ನಟಿ ಸುದ್ದಿಯಲ್ಲಿದ್ದಾರೆ. ಬಹಳ ದಿನಗಳ ನಂತರ ಬೆಳ್ಳಿಪರದೆ ಮೇಲೆ ಕಾಣಿಸಿಕೊಳ್ಳುವುದಕ್ಕೆ ರೆಡಿ ಆಗಿದ್ದಾರೆ. 'ಪಾರು ಪಾರ್ವತಿ' ಎಂಬ ಸಿನಿಮಾದಲ್ಲಿ ದೀಪಿಕಾ ದಾಸ್ ನಾಯಕಿಯಾಗಿದ್ದಾರೆ. ಅಡ್ವೆಂಚರಸ್ ಕುರಿತಾದ ಸಿನಿಮಾದಲ್ಲಿ ವಿಭಿನ್ನ ಪಾತ್ರದಲ್ಲಿ ನಟಿ ಕಾಣಿಸಿಕೊಂಡಿದ್ದಾರೆ.

'ಪಾರು ಪಾರ್ವತಿ' ಸಿನಿಮಾದಲ್ಲಿ ಪಾಯಲ್ ಅನ್ನೋ ಪಾತ್ರದಲ್ಲಿ ದೀಪಿಕಾ ನಟಿಸಿದ್ದಾರೆ. ಈ ಪಾತ್ರಕ್ಕಾಗಿ ತೂಕವನ್ನು ಕೂಡ ಕಡಿಮೆ ಮಾಡಿಕೊಂಡಿದ್ದಾರೆ. ಜೊತೆಗೆ ಕೂದಲಿಗೂ ಕತ್ತರಿ ಹಾಕಿದ್ದಾರೆ. ಅಂದಹಾಗೆ, ದೀಪಿಕಾ ಅವರು ರಿಯಲ್ ಲೈಫ್‌ನಲ್ಲಿ ಜಾಸ್ತಿ ಪ್ರವಾಸ ಮಾಡುತ್ತಾರೆ. ಈ ಸಿನಿಮಾದಲ್ಲೂ ಅವರಿಗೆ ಟ್ರಾವೆಲ್ ಮಾಡುವ ಹುಡುಗಿಯ ಪಾತ್ರವೇ ಸಿಕ್ಕಿದೆ.

**ಪಾರು ಪಾರ್ವತಿ ಸಿನಿಮಾ**

ಇನ್ನೂ 198 ದೇಶಗಳನ್ನು ಸುತ್ತಬೇಕು ಎಂಬುದು ನನ್ನ ಜೀವನದ ಮಹಾದಾಸೆ. ಈ ಸಿನಿಮಾದಲ್ಲಿ ನಾನು ಮಾಡಿರುವ ಪಾತ್ರಕ್ಕೂ ನನ್ನ ನಿಜ ಜೀವನದ ಪಾತ್ರಕ್ಕೂ ಸಾಕಷ್ಟು ಸಾಮ್ಯತೆ ಇದೆ. ನಮ್ಮ ನಿರ್ದೇಶಕರು ಅನೇಕ ಬಾರಿ ಅದನ್ನು ಹೇಳಿದ್ದಾರೆ. ನಿಮ್ಮಂತೆಯೇ ಈ ಸಿನಿಮಾದ ಪಾಯಲ್ ಪಾತ್ರ ಕೂಡ ಇದೆ ಎನ್ನುತ್ತಿರುತ್ತಾರೆ. ಸದ್ಯಕ್ಕೆ ಹೊಸ ಸಿನಿಮಾಗಳ ಸ್ಕ್ರಿಪ್ಟ್ ಕೇಳುತ್ತಿದ್ದೇನೆ ಎಂದು ದೀಪಿಕಾ ದಾಸ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದಾರೆ. ಸದ್ಯ 'ಪಾರು ಪಾರ್ವತಿ' ಸಿನಿಮಾದ ಪೋಸ್ಟರ್ ರಿಲೀಸ್ ಆಗಿದ್ದು, ಅಭಿಮಾನಿಗಳ ಗಮನ ಸೆಳೆದಿದೆ. ಈ ವರ್ಷದ ಅಂತ್ಯದೊಳಗೆ ಸಿನಿಮಾ ರಿಲೀಸ್ ಮಾಡುವ ಪ್ಲ್ಯಾನ್ ಚಿತ್ರತಂಡಕ್ಕಿದೆ.

# ಟಾಕ್ಸಿಕ್ ಟೀಮ್ ಸೇರಿಕೊಂಡ ನಯನತಾರಾ




ಯಶ್ ನಟಿಸಿ ನಿರ್ಮಿಸುತ್ತಿರುವ 'ಟಾಕ್ಸಿಕ್' ಸಿನಿಮಾದ ಶೂಟಿಂಗ್ ಭರದಿಂದ ಸಾಗಿದೆ. ಇದೀಗ ಚಿತ್ರೀಕರಣಕ್ಕೆ ನಯನತಾರಾ ಎಂಟ್ರಿಯಾಗಿರುವ ಸುಳಿವು ಸಿಕ್ಕಿದೆ. ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ 'ಆಲ್ ಯು ನೀಡ್ ಕಾನ್ಫಿಡೆನ್ಸ್ ಆಂಡ್ ಬೂಟ್ಸ್' ಎಂಬ ಸಂದೇಶ ಬರೆದು ಶೂಟಿಂಗ್‌ನಲ್ಲಿ ಕುಳಿತಿರುವಂತೆ ಕಾಲಿನ ಫೋಟೋ ಪೋಸ್ಟ್ ಮಾಡಿದ್ದಾರೆ. 'ಟಾಕ್ಸಿಕ್' ಚಿತ್ರತಂಡ ನಯನತಾರಾ ಇರುವಿಕೆಯನ್ನ ಇದುವರೆಗೂ ಚಿತ್ರತಂಡ ಅಧಿಕೃತವಾಗಿ ಘೋಷಿಸಿಲ್ಲವಾದರೂ ನಯನತಾರ ನಟಿಸುತ್ತಿರುವ ಸಂಗತಿ ಯಂತೂ ನಿಜ.

ಬೆಂಗಳೂರಿನ ಹೆಚ್ಎಂಟಿ ಗ್ರೌಂಡ್‌ನಲ್ಲಿ ಹಾಕಲಾದ ಬೃಹತ್ ಸೆಟ್‌ನಲ್ಲಿ ಟಾಕ್ಸಿಕ್ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಸದ್ಯ ಪ್ಯಾಲೇಸ್ ಗ್ರೌಂಡ್‌ನಲ್ಲಿ ಸಾಹಸ ಸನ್ನಿವೇಶ ಚಿತ್ರೀಕರಣ ಮಾಡಲಾಗುತ್ತಿದೆ. ಮೊದಲ ಹಂತವಾಗಿ ಒಂದು ಬಿಗ್ ಶೆಡ್ಯೂಲ್‌ನಲ್ಲಿ ಚಿತ್ರೀಕರಣ ಸಾಗುತ್ತಿದೆ. ಇದು ಬೆಂಗಳೂರಲ್ಲೇ ಬಹುತೇಕ ನಡೆಯುವ ಶೂಟಿಂಗ್ ಆಗಿರೋದ್ರಿಂದ ಚಿತ್ರದಲ್ಲಿರುವ ನಟ ನಟಿಯರನ್ನ ಯಶ್ ಇಲ್ಲಿಗೇ ಕರೆಸಿಕೊಳ್ಳುತ್ತಿದ್ದಾರೆ. ಇದೀಗ ನಯನತಾರಾ ಟಾಕ್ಸಿಕ್ ಟೀಮ್ ಸೇರಿರುವ ಸುಳಿವು ಸಿಕ್ಕಿದೆ. ಗೀತು ಮೋಹನ್‌ದಾಸ್ ನಿರ್ದೇಶಿಸುತ್ತಿರುವ 'ಟಾಕ್ಸಿಕ್' ಚಿತ್ರವನ್ನ ಯಶ್ ತಮ್ಮದೇ ಸ್ವಂತ ಬ್ಯಾನರ್ ಜೊತೆ ಕೆವಿಎನ್ ಫಿಲಂಸ್ ಜೊತೆ ನಿರ್ಮಿಸುತ್ತಿದ್ದಾರೆ. ಬಿಗ್ ಬಜೆಟ್ ಪ್ಯಾನ್ ವರ್ಲ್ಡ್ ಚಿತ್ರವಾಗಿದ್ದು 2025 ಏಪ್ರಿಲ್ 10ಕ್ಕೆ ಬಿಡುಗಡೆ ಘೋಷಣೆಯಾಗಿದೆ. ಬೆಂಗಳೂರಿನಲ್ಲಿ ಕೋಟಿ ಕೋಟಿ ಹಣ ಸುರಿದು ವಿಭಿನ್ನ ನಾಲ್ಕೈದು ಸೆಟ್ ಹಾಕಲಾಗಿದ್ದು ಆಗಸ್ಟ್ 8ಕ್ಕೆ ಮುಹೂರ್ತ ಮಾಡಿ ಅಂದಿನಿಂದ ಚಿತ್ರೀಕರಣ ಪ್ರಾರಂಭಿಸಿತ್ತು ಚಿತ್ರತಂಡ.

ಇದೀಗ ಮೊದಲ ಶೆಡ್ಯೂಲ್ ಚಿತ್ರೀಕರಣ ನಡೆಯುತ್ತಿದೆ. ನಯನತಾರಾ ಜೊತೆ ಜೊತೆಗೆ ಬಾಲಿವುಡ್ ನಟಿ ಕಿಯಾರಾ ಅಡ್ವಾನಿ ಕೂಡ ಈ ಚಿತ್ರದಲ್ಲಿ ನಟಿಸುವ ಸುದ್ದಿ ಇದೆ. ಎಲ್ಲಾ ಕುತೂಹಲಕ್ಕೆ ಚಿತ್ರ ಆಫಿಷಿಯಲ್ ಆಗಿ ಉತ್ತರ ಕೊಡೋವರೆಗೂ ಕಾಯಬೇಕು.

# ಸಲ್ಮಾನ್ ಸಿನಿಮಾದಲ್ಲಿ ಕಮಲ್



ಬಾಲಿವುಡ್ ನಟ ಸಲ್ಮಾನ್ ಖಾನ್ ಸಕ್ಸಸ್‌ಗಾಗಿ ಹೊಸ ತಂತ್ರ ರೂಪಿಸಿ ದ್ದಾರೆ. ಸೌತ್ ನಿರ್ದೇಶಕರ ಜೊತೆ ಕೆಲಸ ಮಾಡಲು ಸಲ್ಮಾನ್ ಉತ್ಸಾಹ ತೋರಿಸುತ್ತಿದ್ದಾರೆ. ಸದ್ಯ ತಮಿಳು ಡೈರೆಕ್ಟರ್ ಅಟ್ಲಿ ನಿರ್ದೇಶನದಲ್ಲಿ ಮೂಡಿ ಬರಲಿರುವ ಸಲ್ಮಾನ್ ಖಾನ್ ಹೊಸ ಸಿನಿಮಾಗೆ ಕಮಲ್ ಹಾಸನ್ ಸಾಥ್ ನೀಡಲಿದ್ದಾರೆ.

ಶಾರುಖ್ ಖಾನ್ ನಟಿಸಿದ್ದ 'ಜವಾನ್' ಚಿತ್ರಕ್ಕೆ ನಿರ್ದೇಶನ ಮಾಡಿ ಗೆದ್ದಿದ್ದ ತಮಿಳು ನಿರ್ದೇಶಕ ಅಟ್ಲಿ ಜೊತೆ ಸಿನಿಮಾ ಮಾಡಲು ಸಲ್ಮಾನ್ ಕೈಜೋಡಿಸಿದ್ದಾರೆ. ಇದೇ ಸಿನಿಮಾದಲ್ಲಿ ಪವರ್‌ಫುಲ್ ಪಾತ್ರವೊಂದರಲ್ಲಿ ಕಮಲ್ ಹಾಸನ್ ಕೂಡ ಕಾಣಿಸಿಕೊಳ್ಳಲಿದ್ದಾರೆ ಎಂಬ ಸುದ್ದಿ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಸಲ್ಮಾನ್ ಮತ್ತು ಕಮಲ್ ಹಾಸನ್ ಇಬ್ಬರಿಗೂ ಸಮಾನವಾದ ಪಾತ್ರವಿದೆಯಂತೆ. ಇಬ್ಬರೂ ಒಟ್ಟಿಗೆ ಕಾಣಿಸಿಕೊಳ್ತಾರೆ ಎಂಬುದು ಲೇಟೆಸ್ಟ್ ನ್ಯೂಸ್. ಆದರೆ ಕಮಲ್ ಹಾಸನ್ ಈ ಸಿನಿಮಾದಲ್ಲಿ ನಟಿಸುವ ಕುರಿತು ಸುದ್ದಿ ನಿಜನಾ ಎಂಬುದನ್ನು ನಟನಾಗಲಿ ಅಥವಾ ಡೈರೆಕ್ಟರ್ ಅಟ್ಲಿ ಆಗಲಿ ಅಧಿಕೃತವಾಗಿ ತಿಳಿಸಿಲ್ಲ. ಸದ್ಯ ಈ ಸುದ್ದಿ ತಿಳಿದು ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ಕೇಳಿದ ಸುದ್ದಿ ನಿಜವಾಗಲಿ ಎಂದು ಫ್ಯಾನ್ಸ್ ಎದುರು ನೋಡ್ತಿದ್ದಾರೆ. ಇನ್ನೂ ಸಾಲು ಸಾಲು ಸಿನಿಮಾಗಳು ಸೋತ ಬೆನ್ನಲ್ಲೇ ಸೌತ್‌ನ ಸ್ಟಾರ್ ನಿರ್ದೇಶಕ ಎ.ಆರ್ ಮುರುಗದಾಸ್ ಜೊತೆ ಸಲ್ಮಾನ್ ಖಾನ್ ಸಿನಿಮಾ ಮಾಡ್ತಿದ್ದಾರೆ. ಈ ಚಿತ್ರಕ್ಕೆ ರಶ್ಮಿಕಾ ಮಂದಣ್ಣ ನಾಯಕಿಯಾಗಿದ್ದಾರೆ.

# ರಜನಿ ಮುಂದೆ ಅಬ್ಬರಿಸಲಿದ್ದಾರೆ ಅಕ್ಕಿನೇನಿ



ಸೂಪರ್ ಸ್ಟಾರ್ ರಜನಿಕಾಂತ್ ಅಭಿನಯದ ಮುಂದಿನ ಚಿತ್ರ 'ಕೂಲಿ'. ಲೋಕೇಶ್ ಕನಕರಾಜ್ ನಿರ್ದೇಶಿಸುತ್ತಿರುವ ಈ ಚಿತ್ರ ಫಸ್ಟ್ ಲುಕ್ ಟೀಸರ್‌ನಿಂದ ಭಾರೀ ಗಮನ ಸೆಳೆದಿತ್ತು. ಇದೀಗ ಚಿತ್ರೀಕರಣದ ಆರಂಭವಾಗಿದ್ದು ತಾರಾಗಣದ ಒಂದೊಂದೇ ಸುದ್ದಿಯನ್ನ ಟೀಮ್ ಅಧಿಕೃತವಾಗಿ ರಿಲೀಸ್ ಮಾಡುತ್ತಿದೆ. ಇದೀಗ 'ಕೂಲಿ' ತಂಡಕ್ಕೆ ಹೊಸ ಸ್ಟಾರ್ ನಟನ ಎಂಟ್ರಿಯಾಗಿದೆ. ಆ ಸ್ಟಾರ್ ನಟರೇ ಅಕ್ಕಿನೇನಿ ನಾಗಾರ್ಜುನ.

'ಕೂಲಿ' ಸಿನಿಮಾ ಮಲ್ಟಿಸ್ಟಾರರ್ ಆಗುತ್ತಿದೆ. ಸಾಮಾನ್ಯವಾಗಿ ಲೋಕೇಶ್ ಕನಕ ರಾಜ್ ಮಲ್ಟಿಸ್ಟಾರ್ ಸೇರಿಸಿ ಎಲ್ಲಾ ಪಾತ್ರಕ್ಕೂ ನ್ಯಾಯ ಕೊಡುವ ಕೆಲಸ ಅಚ್ಚುಕಟ್ಟಾಗಿ ಮಾಡ್ತಾರೆ. ಅದೇ ನಂಬಿಕೆಯಲ್ಲೇ ಬಹುಶಃ 'ಕೂಲಿ' ಚಿತ್ರಕ್ಕೆ ರಜನಿಕಾಂತ್ ಜೊತೆ ಸ್ಕ್ರೀನ್ ಶೇರ್ ಮಾಡಿಕೊಳ್ಳಲು ಒಪ್ಪಿಕೊಂಡಿರುವ ಸಾಧ್ಯತೆ ಇದೆ. ಖುದ್ದು ನಾಗಾರ್ಜುನ ಈ ವಿಷಯವನ್ನ ಅಧಿಕೃತವಾಗಿ ತಮ್ಮ ಇನ್ಸ್ಟಾ ಖಾತೆಯಲ್ಲಿ ಘೋಸಿಷಿಸಿಕೊಂಡಿದ್ದಾರೆ.

ನಾಗಾರ್ಜುನ ಎಂಟ್ರಿಗೂ ಮುನ್ನವೇ ಕೂಲಿ ಜೊತೆಗೆ ಕನ್ನಡದ ಸೂಪರ್‌ಸ್ಟಾರ್ ಉಪೇಂದ್ರ ಕೂಡ ಕೈ ಜೋಡಿಸಿದ್ದರು. ರಜನಿಕಾಂತ್ ಜೊತೆ ನಟಿಸೋದನ್ನ ಕನ್ಫರ್ಮ್ ಮಾಡಿದ್ದರು ಉಪ್ಪಿ. ಇದೀಗ ನಾಗಾರ್ಜುನ ಪಾತ್ರದ ಫಸ್ಟ್ ಲುಕ್ ಫೋಟೋ ಕೂಡ ರಿಲೀಸ್ ಆಗಿದ್ದು ಸಿಮೋನ್ ಎಂಬ ಹೆಸರಿನ ಪಾತ್ರದಲ್ಲಿ ಕಾಣಿಸ್ಕೊಳ್ಳಲಿದ್ದಾರೆ. ಬಂಗಾರದ ವಾಚ್ ಧರಿಸಿ ಪೋಸ್ ಕೊಟ್ಟಿದ್ದಾರೆ ನಾಗಾರ್ಜುನ. ಇನ್ನು ಮಲಯಾಳಂನಿಂದ ಸೌಬಿನ್ ಶಾಹಿರ್ ಕೂಡ 'ಕೂಲಿ' ಚಿತ್ರದಲ್ಲಿದ್ದಾರೆ. ಅಲ್ಲಿಗೆ ಎಲ್ಲಾ ಇಂಡಸ್ಟ್ರಿಯಿಂದಲೂ ಒಬ್ಬೊಬ್ಬ ಸ್ಟಾರ್‌ಗಳನ್ನ ತಂದಿದ್ದಾರೆ ಲೋಕೇಶ್ ಕನಕರಾಜ್. ಚಿತ್ರಕ್ಕೆ ನಾಯಕಿಯಾಗಿ ಶ್ರುತಿ ಹಾಸನ್ ಇತ್ತೀಚೆಗಷ್ಟೇ ಟೀಮ್ ಸೇರಿಕೊಂಡಿದ್ದಾರೆ.

# ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಡೇಟ್ ಫಿಕ್ಸ್

## ಮುಂದಿನ ವರ್ಷ ಜೂನ್ 11 ರಿಂದ 15 ರವರಗೆ ಫೈನಲ್ ಪಂದ್ಯ. ಇನ್ನು ಈ ಪಂದ್ಯಕ್ಕೆ ಇಂಗ್ಲೆಂಡ್‌ನ ಲಾರ್ಡ್ಸ್ ಮೈದಾನ ಆತಿಥ್ಯ

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ 2025ರ ಫೈನಲ್ ಪಂದ್ಯಕ್ಕೆ ದಿನಾಂಕ ನಿಗದಿಯಾಗಿದೆ. ಅದರಂತೆ ಮುಂದಿನ ವರ್ಷ ಜೂನ್ 11 ರಿಂದ 15 ರವರಗೆ ಫೈನಲ್ ಪಂದ್ಯ ಜರುಗಲಿದೆ. ಇನ್ನು ಈ ಪಂದ್ಯಕ್ಕೆ ಇಂಗ್ಲೆಂಡ್‌ನ ಲಾರ್ಡ್ಸ್ ಮೈದಾನ ಆತಿಥ್ಯವಹಿಸಲಿದೆ. ಇದಕ್ಕೂ ಮುನ್ನ ನಡೆದ 2021ರ ಮತ್ತು 2023ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಗಳಿಗೆ ಇಂಗ್ಲೆಂಡ್‌ನ ಓವಲ್ ಮೈದಾನ ಆತಿಥ್ಯವಹಿಸಿತ್ತು. ಈ ಬಾರಿ ಕ್ರಿಕೆಟ್ ಕಾಶಿ ಲಾರ್ಡ್ಸ್ ಮೈದಾನದಲ್ಲಿ ಅಂತಿಮ ಹಣಾಹಣಿಯನ್ನು ಆಯೋಜಿಸಲು ಐಸಿಸಿ ನಿರ್ಧರಿಸಿದೆ.

**ಮೀಸಲು ದಿನದಾಟ:**

ಫೈನಲ್ ಪಂದ್ಯಕ್ಕೆ ಮಳೆ ಅಡಚಣೆ ಉಂಟು ಮಾಡಿದರೆ ಅಥವಾ ಇನ್ನಿತರ ಕಾರಣಗಳಿಂದ ದಿನದಾಟ ನಡೆಯದಿದ್ದರೆ ಮೀಸಲು ದಿನದಾಟದ ಮೂಲಕ ಪಂದ್ಯವನ್ನು ಪೂರ್ಣಗೊಳಿಸಲಾಗುತ್ತದೆ. ಇದಕ್ಕಾಗಿ ಜೂನ್ 16 ಮೀಸಲು ದಿನವಾಗಿ ಘೋಷಿಸಲಾಗಿದೆ.

**ಫೈನಲ್ ಹಾದಿ:**

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗುವ ತಂಡಗಳಾವುವು ಎಂಬುದು ಇನ್ನೂ ಸಹ ನಿರ್ಧಾರವಾಗಿಲ್ಲ. ಪ್ರಸ್ತುತ ರ್‍ಯಾಂಕಿಂಗ್ ಅಂಕ ಪಟ್ಟಿಯಲ್ಲಿ ಟೀಮ್ ಇಂಡಿಯಾ ಅಗ್ರಸ್ಥಾನದಲ್ಲಿದೆ. ಹಾಗೆಯೇ ಆಸ್ಟ್ರೇಲಿಯಾ ತಂಡ ದ್ವಿತೀಯ ಸ್ಥಾನದಲ್ಲಿದೆ. ಇನ್ನು ನ್ಯೂಝಿಲೆಂಡ್ ತಂಡ ಮೂರನೇ ಸ್ಥಾನದಲ್ಲಿದ್ದರೆ, ಇಂಗ್ಲೆಂಡ್




**ಮುಂಬರುವ ಸರಣಿಗಳು ತುಂಬಾ ಮಹತ್ವದ್ದು**

ನಾಲ್ಕನೇ ಸ್ಥಾನಕ್ಕೇರಿದೆ. ಇಲ್ಲಿ ಭಾರತ ತಂಡವು ಬಾಂಗ್ಲಾದೇಶ್ ಹಾಗೂ ನ್ಯೂಝಿಲೆಂಡ್ ವಿರುದ್ಧದ ಟೆಸ್ಟ್ ಸರಣಿಗಳನ್ನು ಕ್ಲೀನ್ ಸ್ವೀಪ್ ಮಾಡಿಕೊಂಡರೆ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್‌ಗೇರುವುದು ಖಚಿತವಾಗಲಿದೆ. ಅತ್ತ ಆಸ್ಟ್ರೇಲಿಯಾ ತಂಡವು ಭಾರತದ ವಿರುದ್ಧದ ಟೆಸ್ಟ್ ಸರಣಿಯ ಮೂಲಕ ಫೈನಲ್‌ಗೇರುವ ಅವಕಾಶವನ್ನು ಹೊಂದಿದೆ. ಇನ್ನು ಮೂರನೇ ಸ್ಥಾನದಲ್ಲಿರುವ ನ್ಯೂಝಿಲೆಂಡ್ ಭಾರತ ತಂಡವನ್ನು ಮುಂದಿನ ಟೆಸ್ಟ್ ಸರಣಿಯಲ್ಲಿ ಸೋಲಿಸಿದ ಎರಡನೇ ಸ್ಥಾನಕ್ಕೇರುವ ಅವಕಾಶ ಹೊಂದಿದೆ.

ಹಾಗೆಯೇ ಇದೀಗ ನಾಲ್ಕನೇ ಸ್ಥಾನದಲ್ಲಿರುವ ಇಂಗ್ಲೆಂಡ್ ತಂಡವು ಪಾಕಿಸ್ತಾನ್ ಹಾಗೂ ನ್ಯೂಝಿಲೆಂಡ್ ವಿರುದ್ಧದ ಸರಣಿಗಳಲ್ಲಿ ಅಮೋಘ ಗೆಲುವು ಸಾಧಿಸಿದರೆ ಫೈನಲ್‌ಗೇರ ಬಹುದು. ಹೀಗಾಗಿ ಅಂಕ ಪಟ್ಟಿಯಲ್ಲಿ ಟಾಪ್-4 ನಲ್ಲಿರುವ ತಂಡಗಳಿಗೆ ಮುಂಬರುವ ಸರಣಿಗಳು ತುಂಬಾ ಮಹತ್ವದ್ದು. ಹೀಗಾಗಿ ಈ ಬಾರಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್ ಆಡುವ ತಂಡಗಳಾವುವು ಎಂಬುದು ನಿರ್ಧಾರವಾಗಲು ಡಿಸೆಂಬರ್‌ವರೆಗೂ ಕಾಯಬೇಕಾಗಿ ಬರಬಹುದು.


**ಟೀಮ್ ಇಂಡಿಯಾ ಅವಕಾಶ**

**ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಟೀಮ್ ಇಂಡಿಯಾ ಫೈನಲ್‌ಗೇರಲು ಉತ್ತಮ ಅವಕಾಶವಿದೆ. ಏಕೆಂದರೆ ಭಾರತ ತಂಡವು ಮುಂದಿನ 2 ಟೆಸ್ಟ್ ಸರಣಿಗಳನ್ನು ಆಡುತ್ತಿರುವುದು ತವರಿನಲ್ಲಿ. ಅಂದರೆ ಬಾಂಗ್ಲಾದೇಶ್ ವಿರುದ್ಧ ಭಾರತ ತಂಡವು 2 ಪಂದ್ಯಗಳ ಟೆಸ್ಟ್ ಸರಣಿ ಆಡಲಿದೆ. ಇದಾದ ಬಳಿಕ ನ್ಯೂಝಿಲೆಂಡ್ ವಿರುದ್ಧ ಕೂಡ ಭಾರತದಲ್ಲೇ ಮೂರು ಪಂದ್ಯಗಳ ಟೆಸ್ಟ್ ಸರಣಿ ಆಡಲಿದೆ. ಈ ಎರಡು ಸರಣಿಗಳಲ್ಲಿ ಟೀಮ್ ಇಂಡಿಯಾ ಜಯಭೇರಿ ಬಾರಿಸಿದರೆ ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್‌ನಲ್ಲಿ ಅಗ್ರಸ್ಥಾನವನ್ನು ಖಚಿತಪಡಿಸಿಕೊಂಡು ಫೈನಲ್‌ಗೇರಬಹುದು. ಒಂದು ವೇಳೆ ಈ ಸರಣಿಯಲ್ಲಿ ಟೀಮ್ ಇಂಡಿಯಾ ಕೆಲ ಪಂದ್ಯಗಳಲ್ಲಿ ಸೋಲನುಭವಿಸಿದರೆ, ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ಮೂಲಕ ಫೈನಲ್‌ಗೇರುವ ಉತ್ತಮ ಅವಕಾಶ ಟೀಮ್ ಇಂಡಿಯಾ ಮುಂದಿದೆ.**

# ಉತ್ತಪ್ಪಗೆ ಬೆದರಿಕೆಯೊಡ್ಡಿ ಸಹಿ ಮಾಡಿಸಿದ ಫ್ರಾಂಚೈಸಿ!

ಟೀಮ್ ಇಂಡಿಯಾದ ಮಾಜಿ ಆಟಗಾರ ರಾಬಿನ್ ಉತ್ತಪ್ಪ ಇದೇ ಮೊದಲ ಬಾರಿಗೆ ಮನಬಿಚ್ಚಿ ಮಾತನಾಡಿದ್ದಾರೆ. ಅದು ಸಹ ತಾವು ಅನುಭವಿಸಿದ ಖಿನ್ನತೆಯ ಬಗ್ಗೆ. ಈ ವೇಳೆ ಉಂಟಾದ ಆತ್ಮಹತ್ಯಾ ಆಲೋಚನೆಯ ಬಗ್ಗೆ. ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿರುವ ವಿಡಿಯೋದಲ್ಲಿ ರಾಬಿನ್ ಉತ್ತಪ್ಪ 2009ರ ಕಹಿ ಘಟನೆಯೊಂದನ್ನು ಬಿಚ್ಚಿಟ್ಟಿದ್ದಾರೆ.


ಈ ವಿಡಿಯೋದಲ್ಲಿ 2009 ರಲ್ಲಿ ತನಗೆ ಬೆದರಿಕೆಯೊಡ್ಡಿ ಐಪಿಎಲ್ ಟ್ರಾನ್ಸ್‌ಫರ್ ಮಾಡಿಸಿಕೊಂಡಿದ್ದರು ಎಂಬ ವಿಚಾರವನ್ನು ಬಹಿರಂಗಪಡಿಸಿದ್ದಾರೆ. 2009 ರಲ್ಲಿ ರಾಬಿನ್ ಉತ್ತಪ್ಪ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದರು. ಮರು ಸೀಸನ್‌ನಲ್ಲೇ ಮುಂಬೈ ಅವರನ್ನು ಆರ್‌ಸಿಬಿಗೆ ಟ್ರಾನ್ಸ್‌ಫರ್ ಮಾಡಿದ್ದರು.



ಆದರೆ ಈ ಟ್ರಾನ್ಸ್‌ಫರ್‌ಗೆ ರಾಬಿನ್ ಉತ್ತಪ್ಪ ಒಪ್ಪಿರಲಿರಲಿಲ್ಲ. ಅಲ್ಲದೆ ಟ್ರಾನ್ಸ್‌ಫರ್ ಪೇಪರ್‌ಗಳಿಗೆ ಸಹಿ ಹಾಕಲು ನಿರಾಕರಿಸಿದ್ದೆ. ನೀವು ಈ ಟ್ರೇಡ್ ಪತ್ರಗಳಿಗೆ ಸಹಿ ಮಾಡದಿದ್ದರೆ, ನಿಮಗೆ ಪ್ಲೇಯಿಂಗ್ ಇಲೆವೆನ್‌ನಲ್ಲಂತು ಚಾನ್ಸ್ ನೀಡುವುದಿಲ್ಲ ಎಂದು ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯ ಉಸ್ತುವಾರಿ ವ್ಯಕ್ತಿಯೊಬ್ಬರು ಬೆದರಿಕೆಯೊಡ್ಡಿದ್ದರು. ಹೀಗಾಗಿ ನಾನು ಟ್ರಾನ್ಸ್‌ಫರ್‌ಗೆ ಒಪ್ಪಿಗೆ ನೀಡಲೇಬೇಕಾಯಿತು.

ಇದರಿಂದ ನಾನು ಖಿನ್ನತೆಗೆ ಒಳಗಾದೆ. ಇದಾಗ್ಯೂ ನಾನು 2009 ರಲ್ಲಿ ಆರ್‌ಸಿಬಿ ಪರ ಉತ್ತಮವಾಗಿ ಆಡಿದೆ. ಆದರೆ 2011 ರಲ್ಲಿ ನಾನು ನನ್ನ ಮೇಲಿನ ಸಂಪೂರ್ಣ ಕಂಟ್ರೋಲ್ ಕಳೆದುಕೊಂಡಿದ್ದೆ. ದೇಹ ತೂಕ ಹೆಚ್ಚಾಯಿತು. ಚಿಂತೆಗೆ ಒಳಗಾದೆ. ಈ ಸಂದರ್ಭದಲ್ಲಿ ನನ್ನ ತಾಯಿ ನೆರವಿಗೆ ನಿಂತರು. ಖಿನ್ನತೆಯಿಂದ ಹೊರಬರಲು ಸಹಾಯ ಮಾಡಿದರು ಎಂದು ಉತ್ತಪ್ಪ ಹೇಳಿದ್ದಾರೆ.

# 9 ಭರ್ಜರಿ ಸಿಕ್ಸ್‌ಗಳೊಂದಿಗೆ ಅಬ್ಬರಿಸಿದ ಅಝುರ್



ಕೇರಳ ಪ್ರೀಮಿಯರ್ ಲೀಗ್‌ನ ಮೊದಲ ಪಂದ್ಯದಲ್ಲೇ ಯುವ ದಾಂಡಿಗ ಮೊಹಮ್ಮದ್ ಅಝುರುದ್ದೀನ್ ಅಬ್ಬರಿಸಿದ್ದಾರೆ. ಅದು ಸಹ 9 ಭರ್ಜರಿ ಸಿಕ್ಸ್ ಹಾಗೂ 3 ಫೋರ್‌ಗಳೊಂದಿಗೆ ಎಂಬುದು ವಿಶೇಷ. ತಿರುವನಂತಪುರದ ಗ್ರೀನ್‌ಫೀಲ್ಡ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಅಲೆಪ್ಪಿ ರಿಪ್ಪಲ್ಸ್ ಹಾಗೂ ತ್ರಿಶೂರ್ ಟೈಟಾನ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಗೆದ್ದ ಅಲೆಪ್ಪಿ ರಿಪ್ಪಲ್ಸ್ ತಂಡದ ನಾಯಕ ಮೊಹಮ್ಮದ್ ಅಝುರುದ್ದೀನ್ ಬೌಲಿಂಗ್ ಆಯ್ದುಕೊಂಡರು. ಅದರಂತೆ ಮೊದಲು ಬ್ಯಾಟ್ ಮಾಡಿದ ತ್ರಿಶೂರ್ ತಂಡವು ಉತ್ತಮ ಆರಂಭ ಪಡೆದಿರಲಿಲ್ಲ. ಆರಂಭಿಕ ಆಟಗಾರ ಅಭಿಷೇಕ್ (0) ಶೂನ್ಯಕ್ಕೆ ಔಟಾದರೆ, ವರುಣ್ ನಾಯನಾರ್ 1 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಇದಾಗ್ಯೂ ಮಧ್ಯಮ ಕ್ರಮಾಂಕದಲ್ಲಿ ಕಣಕ್ಕಿಳಿದ ಅಕ್ಷಯ್ ಮನೋಹರ್ 44 ಎಸೆತಗಳಲ್ಲಿ 5 ಭರ್ಜರಿ ಸಿಕ್ಸ್ ಹಾಗೂ 1 ಫೋರ್‌ನೊಂದಿಗೆ 57 ರನ್ ಬಾರಿಸಿದರು. ಇನ್ನು ಅರ್ಜುನ್ ವೇಣುಗೋಪಾಲ್ 20 ರನ್‌ಗಳ ಕೊಡುಗೆ ನೀಡಿದರು. ಈ ಮೂಲಕ ತ್ರಿಶೂರ್ ಟೈಟಾನ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 161 ರನ್ ಕಲೆಹಾಕಿತು.

**ಅಝುರ್ ಅಬ್ಬರ- ಸಿಡಿಲಬ್ಬರ:** 162 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಅಲೆಪ್ಪಿ ರಿಪ್ಪಲ್ಸ್ ಪರ ಮೊಹಮ್ಮದ್ ಅಝುರುದ್ದೀನ್ ಹಾಗೂ ಕೃಷ್ಣ ಪ್ರಸಾದ್ ಆರಂಭಿಕರಾಗಿ ಕಣಕ್ಕಿಳಿದರು. ಆದರೆ 1 ರನ್‌ಗಳಿಸಿ ಕೃಷ್ಣ ಪ್ರಸಾದ್ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಅಕ್ಷಯ್ ಶಿವ್ (3) ಕೂಡ ವಿಕೆಟ್ ಕೈಚೆಲ್ಲಿದರು. ಆದರೆ ಮತ್ತೊಂದೆಡೆ ಕ್ರೀಸ್ ಕಚ್ಚಿ ನಿಂತ ಅಝುರುದ್ದೀನ್ ನಾಯಕನಾಟ ಪ್ರದರ್ಶಿಸಿದರು. ತನ್ನ ಸ್ಫೋಟಕ ಬ್ಯಾಟಿಂಗ್‌ನಿಂದಲೇ ತಂಡವನ್ನು ಆರಂಭಿಕ ಆಘಾತದಿಂದ ಪಾರು ಮಾಡಿದ ಅಝುರ್ ಸಿಕ್ಸ್-ಫೋರ್‌ಗಳ ಸುರಿಮಳೆಗೈದರು.

# 1,303 ದಿನಗಳಿಂದ ಟೆಸ್ಟ್ ಪಂದ್ಯ ಗೆಲ್ಲದ ಪಾಕಿಸ್ತಾನ್..!



ಪಾಕಿಸ್ತಾನ್ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು ಬಾಂಗ್ಲಾದೇಶ್ ತಂಡ ಕ್ಲೀನ್ ಸ್ವೀಪ್ ಮಾಡಿಕೊಂಡಿದೆ. ಈ ಗೆಲುವಿನೊಂದಿಗೆ ಬಾಂಗ್ಲಾದೇಶ್ ತಂಡ ಐತಿಹಾಸಿಕ ಸಾಧನೆ ಮಾಡಿದೆ. ಅಂದರೆ ಬಾಂಗ್ಲಾ ಪಡೆಯು ಇದೇ ಮೊದಲ ಬಾರಿಗೆ ಪಾಕಿಸ್ತಾನದಲ್ಲಿ ಟೆಸ್ಟ್ ಸರಣಿಯನ್ನು ಗೆದ್ದುಕೊಂಡಿದೆ. ಇತ್ತ ಬಾಂಗ್ಲಾದೇಶ್ ಗೆಲುವಿನ ಸಂಭ್ರಮದಲ್ಲಿದ್ದರೆ, ಅತ್ತ ಪಾಕಿಸ್ತಾನ್ ತಂಡವು ಭಾರೀ ಮುಖಭಂಗಕ್ಕೆ ಒಳಗಾಗಿದೆ. ಏಕೆಂದರೆ ಪಾಕ್ ಪಡೆಯು ಕಳೆದ 3 ವರ್ಷಗಳಿಂದ ತವರಿನಲ್ಲಿ ಒಂದೇ ಒಂದು ಟೆಸ್ಟ್ ಪಂದ್ಯವನ್ನು ಗೆದ್ದುಕೊಂಡಿಲ್ಲ. ಕೊನೆಯ ಬಾರಿಗೆ ಪಾಕ್ ತಂಡವು ಗೆದ್ದಿರುವುದು ಬಾಂಗ್ಲಾದೇಶ್ ವಿರುದ್ಧ. ಇದೀಗ ಬಾಂಗ್ಲಾ ಪಡೆಯೇ ಪಾಕ್ ತಂಡಕ್ಕೆ ಮಣ್ಣು ಮುಕ್ಕಿಸಿ ಟ್ರೋಫಿ ಗೆದ್ದಿದೆ.

**3 ವರ್ಷಗಳಿಂದ ಗೆಲುವೇ ಇಲ್ಲ:** ಪಾಕಿಸ್ತಾನ್ ತಂಡವು ಕಳೆದ 3 ವರ್ಷಗಳಲ್ಲಿ ತವರಿನಲ್ಲಿ 10 ಟೆಸ್ಟ್ ಪಂದ್ಯಗಳನ್ನಾಡಿದೆ. ಈ ವೇಳೆ ಎಲ್ಲಾ ಪಂದ್ಯಗಳಲ್ಲೂ ಸೋಲನುಭವಿಸಿರುವುದು ವಿಶೇಷ.

ಇನ್ನು ಗೆದ್ದಿರುವುದು 2021 ರಲ್ಲಿ ಬಾಂಗ್ಲಾದೇಶ್ ವಿರುದ್ಧ ಮಾತ್ರ. ಆದರೆ ಈ ಬಾರಿ ಪಾಕಿಸ್ತಾನ್ ತಂಡದ ಲೆಕ್ಕಾಚಾರಗಳನ್ನು ಬಾಂಗ್ಲಾದೇಶ್ ತಲೆಕೆಳಗಾಗಿಸಿದೆ. ಇದಕ್ಕೂ ಮುನ್ನ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಝಿಲೆಂಡ್ ತಂಡಗಳ ವಿರುದ್ಧ ಪಾಕಿಸ್ತಾನ್ ತಂಡ ಸೋಲನುಭವಿಸಿತ್ತು. ಅಂದರೆ ಪಾಕಿಸ್ತಾನ್ ತಂಡವು ತವರಿನಲ್ಲಿ ಟೆಸ್ಟ್ ಪಂದ್ಯ ಗೆದ್ದು ಬರೋಬ್ಬರಿ 1,303 ದಿನಗಳೇ ಕಳೆದಿವೆ.

ಇತ್ತ ಈ ಸೋಲಿನ ಕಾರಣ ಪಾಕ್ ಟೆಸ್ಟ್ ತಂಡದ ನಾಯಕತ್ವದಿಂದ ಬಾಬರ್ ಆಝಂ ಅವರನ್ನು ಕೆಳಗಿಳಿಸಲಾಗಿತ್ತು. ಇದೀಗ ಶಾನ್ ಮಸೂದ್ ಮುಂದಾಳತ್ವದಲ್ಲಿ ಕಣಕ್ಕಿಳಿದಿರುವ ಪಾಕ್ ಪಡೆಯು ಬಾಂಗ್ಲಾದೇಶ್ ವಿರುದ್ಧ ಸರಣಿ ಸೋತಿದೆ. ಈ ಸೋಲಿನೊಂದಿಗೆ ಪಾಕಿಸ್ತಾನ್ ತಂಡವು ಭಾರೀ ಮುಖಭಂಗಕ್ಕೆ ಒಳಗಾಗಿದ್ದು, ತಂಡದ ಪ್ರದರ್ಶನದ ಬಗ್ಗೆ ಮಾಜಿ ಕ್ರಿಕೆಟಿಗರು ಆಕ್ರೋಶ ಹೊರಹಾಕುತ್ತಿದ್ದಾರೆ.

**ಯಾರ ಹೆಸರಲ್ಲಿದೆ ದಾಖಲೆ:** ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ತವರಿನಲ್ಲಿ ಸತತ ಸೋಲುಗಳನ್ನು ಅನುಭವಿಸಿದ ಅತ್ಯಂತ ಕೆಟ್ಟ ದಾಖಲೆ ಝಿಂಬಾಬ್ವೆ ತಂಡದ ಹೆಸರಿನಲ್ಲಿದೆ. ಝಿಂಬಾಬ್ವೆ ತಂಡವು ತವರಿನಲ್ಲಿ ಗೆದ್ದು 4002 ದಿನಗಳೇ ಕಳೆದಿವೆ. ಇದೀಗ 1,303 ದಿನಗಳ ನಡುವೆ ತವರಿನಲ್ಲಿ 10 ಟೆಸ್ಟ್ ಪಂದ್ಯಗಳನ್ನಾಡಿರುವ ಪಾಕಿಸ್ತಾನ್ ತಂಡವು ಸತತ ಸೋಲಿನಿಂದ ಕಂಗೆಟ್ಟಿದೆ. ಈ ಮೂಲಕ ತವರಿನಲ್ಲಿ ದೀರ್ಘಕಾಲದವರೆಗೆ ಟೆಸ್ಟ್ ಪಂದ್ಯ ಗೆಲ್ಲದ ಕೆಟ್ಟ ದಾಖಲೆ ಪಟ್ಟಿಯಲ್ಲಿ ಪಾಕ್ ಪಡೆಯು ದ್ವಿತೀಯ ಸ್ಥಾನ ಅಲಂಕರಿಸಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966